ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಪದವಿಯ ಸಂಪ್ರಬಂಧ

ಸಂಶೋಧನಾ ವಿಷಯ

'ಗಾಂಧಿ' ಮೂಲಕತೆ ಮತ್ತು "ನಾನು ಗಾಂಧಿ" ಸಿನಿಮಾ: ತೌಲನಿಕ ವಿವೇಚನೆ

ಸಂಶೋಧನಾ ವಿದ್ಯಾರ್ಥಿ
ಅನ್ನಪೂರ್ಣ ಮಲ್ಲಪ್ಪ ಕಂಬಾರ

ಮಾರ್ಗದರ್ಶಕರು
ಡಾ. ನಾ.ಗೀತಾಚಾರ್ಯ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೧೦

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಪದವಿಯ ಸಂಪ್ರಬಂಧ

ಸಂಶೋಧನಾ ವಿಷಯ

'ಗಾಂಧಿ' ಮೂಲಕತೆ ಮತ್ತು "ನಾನು ಗಾಂಧಿ" ಸಿನಿಮಾ: ತೌಲನಿಕ ವಿವೇಚನೆ

ಸಂಶೋಧನಾ ವಿದ್ಯಾರ್ಥಿ
ಅನ್ನಪೂರ್ಣ ಮಲ್ಲಪ್ಪ ಕಂಬಾರ

ಮಾರ್ಗದರ್ಶಕರು
ಡಾ. ನಾ.ಗೀತಾಚಾರ್ಯ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೧೦

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯–೨೦೧೦ನೇ ಸಾಲಿನ ಎಂ.ಫಿಲ್ ಪದವಿಗಾಗಿ *'ಗಾಂಧಿ' ಮೂಲಕತೆ ಮತ್ತು "ನಾನು ಗಾಂಧಿ" ಸಿನಿಮಾ: ತೌಲನಿಕ ವಿವೇಚನೆ,* ಎಂಬ ಸಂಪ್ರಬಂಧವನ್ನು ಡಾ. ನಾ.ಗೀತಾಚಾರ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈ ವರೆಗೂ ಬೇರೆಲ್ಲು ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 04-09-2010

ಸ್ಥಳ: ಬೆಂಗಳೂರು

ಸಹಿ/

ಅನ್ನಪೂರ್ಣ - ಎಂಕೆ

(ಅನ್ನಪೂರ್ಣ ಮಲ್ಲಪ್ಪ ಕಂಬಾರ)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು ಎಂ. ವಿ. ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ೨೦೦೯–೨೦೧೦ನೇ ಸಾಲಿನ ಎಂ.ಫಿಲ್ ಪದವಿಗಾಗಿ *'ಗಾಂಧಿ' ಮೂಲಕತೆ ಮತ್ತು "ನಾನು ಗಾಂಧಿ" ಸಿನಿಮಾ: ತೌಲನಿಕ ವಿವೇಚನೆ,* ಎಂಬ ಸಂಪ್ರಬಂಧವನ್ನು ಅನ್ನಪೂರ್ಣ ಮಲ್ಲಪ್ಪ ಕಂಬಾರ ಅವರು ನನ್ನ ಮಾಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 04-09-2010

ಸಹಿ/

ಸ್ಥಳ: ಬೆಂಗಳೂರು

(ಡಾ. ನಾ. ಗೀತಾಚಾರ್ಯ)

ಪರಿವಿಡಿ

ಅಧ್ಯಾಯ–೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕಲೆ ಎಂಬುದು ನಾಡು ನುಡಿ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಜೊತೆಗೆ ಜನರ ಅಭಿರುಚಿ, ಆಸಕ್ತಿಗಳನ್ನು ಕಲೆಯ ಆಧಾರದಲ್ಲಿ ಮೌಲ್ಯಮಾಡಬಹುದು. ಅಂತಹ ಪ್ರಭಾವಿ ಮಾಧ್ಯಮ ಕಲೆ. ಬದಲಾದ ಕಾಲಕ್ಕೆ ತಕ್ಕಂತೆ ಆಧುನಿಕ ತಂತ್ರಜ್ಞಾನ ಹೊಸ ಹೊಸ ಆವಿಷ್ಕಾರಗಳನ್ನು ಒಳಗೊಂಡಂತೆ ಕಲೆಯು ತನ್ನ ಕ್ಷೇತ್ರದಲ್ಲಿ ಪಕ್ವತೆ ಮತ್ತು ನಾವಿನ್ಯತೆಯೊಂದಿಗೆ ಮುಂದುವರಿಯುತ್ತಿದೆ. ಮನರಂಜನೆಯ ಮುಂಚೂಣಿಯಲ್ಲಿರುವ ಸಿನಿಮಾ ಮಾಧ್ಯಮ ಇದಕ್ಕೊಂದು ಉತ್ತಮ ಉದಾಹರಣೆ. ಮೂಕಿ ಚಿತ್ರ, ಕಪ್ಪು ಬಿಳುಪಿನಿಂದ ಹಿಡಿದು 3ಡಿ ಚಿತ್ರದವರೆಗೆ ಸಿನಿಮಾ ಕ್ಷೇತ್ರ ನಡೆದು ಬಂದ ಹಾದಿಯಲ್ಲಿ ಆಧುನಿಕ ಆವಿಷ್ಕಾರಗಳು ಮೇಳೈಸಿರುವುದನ್ನು ಕಾಣಬಹುದಾಗಿದೆ. ಇಂತಹ ಪ್ರಭಾವಿ ಮಾಧ್ಯಮದಲ್ಲಿ ಸಾಹಿತ್ಯದ ಸ್ಥಾನ ಅಗ್ರಗಣ್ಯ. ಸಂಭಾಷಣೆಯಿಂದ ಸಂಗೀತದವರೆಗೂ ಎಲ್ಲವೂ ಸಾಹಿತ್ಯವನ್ನೊಳಗೊಂಡಿದೆ. ಇದು ಸಿನಿಮಾ ಸಾಹಿತ್ಯ ಎಂಬುದನ್ನು ಗಮನಿಸಬೇಕು.

ಪುಸ್ತಕ ರೂಪದಲ್ಲಿ ಪ್ರಕಟಣೆಗೊಂಡ ಸಾಹಿತ್ಯ ಕೃತಿಗಳು ಸಿನಿಮಾ ಮಾಧ್ಯಮದಲ್ಲಿ ಹಲ ಕೆಲವು ತಾಂತ್ರಿಕ ಕುಲುಮೆಯಲ್ಲಿ ಎರಕವಾಗಿ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಯಶಸ್ವಿ ಚಿತ್ರಗಳಾದ ಚರಿತ್ರೆಯಿದೆ. ಅಂದಮೇಲೆ ಸಿನಿಮಾ ಮತ್ತು ಸಾಹಿತ್ಯ ಕೃತಿಗಳಲ್ಲಿನ ಅವಿನಾಭಾವ ಸಂಬಂಧವನ್ನು ನಾವು ಗಮನಿಸಬಹುದು.

ಸಾಹಿತ್ಯ ಲೋಕದಲ್ಲಿ ಯಶಸ್ವಿಯಾದ ಕೃತಿಗಳು ಅದೇ ಯಶಸ್ಸನ್ನು ಪಡೆದ ಚಿತ್ರಗಳಾಗಿಯೂ ಜನಮನ ಸೂರೆಗೊಂಡಿವೆ. ಸಾಹಿತ್ಯ ಕೃತಿಯ ಮೂಲೋದ್ದೇಶವೇ ಸಮಾಜ ವ್ಯವಸ್ಥೆಯ ವಿಮರ್ಶೆ. ಸಾಹಿತ್ಯ ಕೃತಿಯೊಂದು ಸಮಾಜದ ಪ್ರತಿಬಿಂಬ ಎಂದು ಹೇಳುವುದು ಸರಿಯಾದರೆ ಅದೇ ಪ್ರಯತ್ನ ಕೃತಿಯೊಂದು ಸಿನಿಮಾ ರೂಪವನ್ನು ಪಡೆದು ದೃಶ್ಯಕಾವ್ಯವಾಗಿ ಜನರನ್ನು ನೇರವಾಗಿ ಮುಟ್ಟಬಲ್ಲದು.

ಈ ಅಧ್ಯಯನವು ಕೂಡ ಸಾಹಿತ್ಯ ಕೃತಿಯು ಸಿನಿಮಾ ಕೃತಿಯಾಗಿ ಹೇಗೆ ಸಮಾಜ ವಿಮರ್ಶೆಯ ಕಾರ್ಯ ಮಾಡಬಲ್ಲದು ಎಂಬುದನ್ನು ಹೇಳುವ ಪ್ರಯತ್ನವೇ ಆಗಿದೆ. ದೇಶ ನಿರ್ಮಾಣದಲ್ಲಿ ಸಮೂಹ ಮಾಧ್ಯಮಗಳ ಮಹತ್ವ ಅವರ್ಣನೀಯ. ಇಂದಿನ ಬಿಡುವಿಲ್ಲದ ಬದುಕಿನ ದಿನಚರಿಯಲ್ಲಿ ತಾಳ್ಮೆಯಿಂದ ಪ್ರೇಕ್ಷಕರು ದೃಶ್ಯ ಮಾಧ್ಯಮವನ್ನು ನೋಡಬಲ್ಲರು.

ಆದ್ದರಿಂದಲೇ ಹೊತ್ತಿಗೆಯಲ್ಲಿ ಹೊದ್ದು ಮಲಗುವುದಕ್ಕಿಂತ ಕೃತಿಯೊಂದು ಮಾಧ್ಯಮದ ಮೂಲಕ ಸಂದೇಶ ನೀಡಿ ಎಚ್ಚರಿಸಬೇಕಾದ ಅಗತ್ಯವಿಂದು ಇದೆ. ಸಾಹಿತ್ಯಲೋಕದಲ್ಲಿ ಚಿಂತನಾಪರ ಆಶಯಗಳನ್ನುಳ್ಳ ಹಲವು ಕೃತಿಗಳಿವೆ. ಅವುಗಳನ್ನೆಲ್ಲಾ ಜನತೆಗೆ ಮುಟ್ಟಿಸಬೇಕಾದರೆ ಸದಭಿರುಚಿಯ ಕಲಾತ್ಮಕ ಚಿತ್ರಗಳು ಪರದೆಯ ಮೇಲೆ ಬರಬೇಕಿದೆ.

ಜವಾಬ್ದಾರಿಯುತ ಸಮೂಹ ಮಾಧ್ಯಮಗಳು ದೇಶವೊಂದರ ನಿರ್ಮಾಣದಲ್ಲಿ ಮಹತ್ವದ ಕಾರ್ಯ ನಿರ್ವಹಿಸಬಲ್ಲವು. ಅಂತೆಯೇ ನಾಡು ನುಡಿ ಸಂಸ್ಕೃತಿಯ ಪೋಷಣೆ ಮತ್ತು ಪ್ರಸಾರವನ್ನು ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಇಂತಹ ಸಮೂಹ ಮಾಧ್ಯಮದಲ್ಲಿ ದೃಶ್ಯ ಮಾಧ್ಯಮ ಅತ್ಯಂತ ಪ್ರಭಾವಶಾಲಿ. ಅದರಲ್ಲೂ ಚಲನಚಿತ್ರ ಬಹು ಆಕರ್ಷಣೀಯವಾದುದು. ಆಬಾಲವೃದ್ಧರಾದಿಯಾಗಿ ಎಲ್ಲರನ್ನು ಸೆಳೆದಿಡಬಲ್ಲ ಸಾಮರ್ಥ್ಯ ಇದಕ್ಕಿದೆ.

ಚಲನಚಿತ್ರಗಳು ಕೊಡುವ ಸಂದೇಶಗಳು ಜನರನ್ನು ನೇರವಾಗಿ ಮುಟ್ಟುತ್ತವೆ. ಇಂತಹ ಮಾಧ್ಯಮದ ಜವಾಬ್ದಾರಿಯನ್ನು ನಾವು ಇಂದು ಮುಖ್ಯವೆಂದು ಪರಿಗಣಿಸಬೇಕಾಗಿದೆ. ಜಾಗತೀಕರಣದ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ಸಾಮಾನ್ಯವರ್ಗದ ಜನರ ಬದುಕಿನ ಜಂಜಾಟದಲ್ಲಿ ಸಮಯದ ಕೊರತೆ ಎದ್ದುಕಾಣುತ್ತಿರುವ ಹೊತ್ತಿನಲ್ಲಿ ಮಕ್ಕಳ ಶಿಕ್ಷಣದ ಸ್ವರೂಪವು ಜೀವನ ಮೌಲ್ಯಗಳಿಗಿಂತ ಹಣಗಳಿಕೆಯ ಮಾರ್ಗದ ತರಬೇತಿಯನ್ನು ಕೊಡುತ್ತಿರುವಾಗ ಚಲನಚಿತ್ರ ಮಾಧ್ಯಮ ಹೇಗೆ ಈ ಕೊರತೆಯನ್ನು ತುಂಬಿಕೊಡಬಲ್ಲದು ಎಂಬ ಅಂಶದ ಮೇಲೆ ಬೆಳಕು ಬೀರುವ ಪ್ರಯತ್ನವನ್ನಾದರೂ ಮಾಡಲೇಬೇಕು.

ಇಂದಿನ ವಾಣಿಜ್ಯೀಕರಣದ ಸಂದರ್ಭದಲ್ಲಿ ಹಣಗಳಿಕೆಯನ್ನೇ ಪ್ರಧಾನ ಉದ್ದೇಶವಾಗಿಟ್ಟುಕೊಂಡು ತೆರೆಕಾಣುತ್ತಿರುವ ಚಿತ್ರಗಳು ಯಾವ ಮೌಲ್ಯವನ್ನು ತಾನೇ ಮಕ್ಕಳಲ್ಲಿ ತುಂಬಬಲ್ಲವು? ಈ ಸಮಸ್ಯೆಗೆ ಪರಿಹಾರವಾಗಿ ಕಲಾತ್ಮಕ ಚಿತ್ರಗಳ ಇತಿಹಾಸದ ಮೇಲೆ ಕಣ್ಣಾಡಿಸಿದಾಗ ಸಾಹಿತ್ಯ ಕೃತಿಗಳು ಸಿನಿಮಾ ಮಾಧ್ಯಮದಲ್ಲಿ ಯಶಸ್ವಿಯಾದ ಭವ್ಯ ಪರಂಪರೆಯೇ ನಮ್ಮ ಎದುರು ನಿಲ್ಲುತ್ತದೆ. ಈ ನಿಟ್ಟಿನಲ್ಲಿ ಕಲಾತ್ಮಕ ಚಿತ್ರಗಳು ವಾಣಿಜ್ಯ ಚಿತ್ರಗಳಿಗಿಂತ ಭಿನ್ನ ಮತ್ತು ಪ್ರಾಧಾನ್ಯತೆಯನ್ನು ಪಡೆದ ಚಿತ್ರಗಳು ಎಂಬ ಅಂಶ ನಮಗರಿವಾಗುತ್ತದೆ.

ಮಗುವೊಂದು ತನ್ನ ಸುತ್ತಣ ಸಮಾಜವನ್ನು ನೋಡಿ ತನ್ನ ಬದುಕನ್ನು ರೂಪಿಸಿಕೊಳ್ಳುತ್ತದೆ. ಇಂತಹ ಸಮಾಜವನ್ನು ಆರೋಗ್ಯಪೂರ್ಣ ಸಮಜವಾಗಿ ರೂಪಿಸಬಲ್ಲ ಅಸ್ತ್ರವಾಗಿ ಸಿನಿಮಾ ಮಾಧ್ಯಮವನ್ನು ಬಳಸಿಕೊಳ್ಳಬಹುದಾಗಿದೆ. ಜೊತೆಗೆ ಉತ್ತಮ ಮೌಲ್ಯಾಧಾರಿತ ಸಾಹಿತ್ಯ ಕೃತಿಗಳನ್ನು ಸಿನಿಮಾ ಮಾಧ್ಯಮದ ಮೂಲಕ ಶಿಕ್ಷಣದ ಒಂದು

ಭಾಗವಾಗಿ ಮಕ್ಕಳಿಗೆ ತಲುಪಿಸಬಲ್ಲ ಸಾಧ್ಯತೆಯನ್ನು ಗಂಭೀರವಾಗಿ ಆಲೋಚಿಸಬೇಕಾದ ಅನಿವಾರ್ಯತೆ ಇದೆ.

ಸಾಹಿತ್ಯ ಕೃತಿಯೊಂದು ಸಿನಿಮಾ ಮಾಧ್ಯಮದಲ್ಲಿ ಪುನರವತರಿಸಿದಾಗ ಪಡೆಯಬಲ್ಲ ಜನಪ್ರಿಯತೆ ಮತ್ತು ಆ ಕೃತಿಯ ಆಶಯದ ಸಾರ್ಥಕತೆ ಜನರ ಅಭಿರುಚಿಯನ್ನು ಪುನರ್ ನಿರ್ಮಿಸಬಲ್ಲ ಸಾಧ್ಯತೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಈ ಅಧ್ಯಯನದ ಉದ್ದೇಶ. ಸಮಾಜವನ್ನು ಸರ್ವತೋಮುಖ ವಲಯದಲ್ಲಿ ತಿದ್ದುವ ಕೆಲಸವನ್ನು ಸಾಹಿತ್ಯಕೃತಿಗಳು ಕಾಲದಿಂದ ಕಾಲಕ್ಕೆ ಮಾಡುತ್ತಲೆ ಬಂದಿವೆ.

ಇಂದು ಸಾಹಿತ್ಯ ಕೃತಿಗಳು ಸಿನಿಮಾ ಮಾಧ್ಯಮದ ಮೂಲಕ ಜನರಿಗೆ ತಲುಪಿಸಬಲ್ಲ ಸಂದೇಶಗಳು ವ್ಯವಸ್ಥೆಯಲ್ಲಿನ ಹುಳುಕುಗಳನ್ನು ತಿದ್ದಬಲ್ಲ ಸಾಮರ್ಥ್ಯವನ್ನು ಹೊಂದಿವೆ.

ಡಾ॥ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ' ಸಣ್ಣಕತೆಯು ವ್ಯವಸ್ಥೆಯಲ್ಲಿನ ಭ್ರಷ್ಟತೆಯನ್ನು ನವಿರಾಗಿ ಅನಾವರಣಗೊಳಿಸಿದೆ. ಈ ಕಥೆಯ ಆಶಯವನ್ನು ಪ್ರಚುರಪಡಿಸುವ ಉದ್ದೇಶವನ್ನು ಹೊತ್ತುಬಂದ "ನಾನು ಗಾಂಧಿ" ಸಿನಿಮಾದ ಆಶಯಗಳ ಹಿನ್ನೆಲೆಯಲ್ಲಿ, ಕಲಾತ್ಮಕ ಚಿತ್ರವೊಂದು ಹೇಗೆ ಹಲವು ಸಾಧ್ಯತೆಗಳನ್ನು ಯಶಸ್ವಿಗೊಳಿಸಬಲ್ಲದು ಎಂಬುದನ್ನು ಅರಿಯುವುದರ ಜೊತೆಗೆ "ನಾನು ಗಾಂಧಿ" ಸಿನಿಮಾ ಮಕ್ಕಳ ಚಿತ್ರವಾಗಿ ಗಾಂಧಿಯ ಆದರ್ಶಗಳನ್ನು ಹೇಗೆ ಪರದೆಯ ಮೇಲೆ ಕಲಾತ್ಮಕವಾಗಿ ತೋರಿಸಿದೆ ಎಂಬುದನ್ನು ಒರೆಗೆ ಹಚ್ಚುವ ಪ್ರಯತ್ನವೇ ಈ ಅಧ್ಯಯನದ ಮೂಲ ಆಶಯ.

ಯಾವುದೇ ಒಂದು ಜ್ಞಾನ ಶಾಖೆಯು ನಮ್ಮನ್ನು ಚಿಂತನಾಪರರಾಗಿ ಮಾಡಬಲ್ಲದು. ಯಾವ ಮೂಲದಿಂದ ಜ್ಞಾನ ಬಂದರೂ ಸಹ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅದರದ್ದೇ ಆದ ಮಹತ್ವವನ್ನು ಪಡೆಯುತ್ತದೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ *"ನಹಿ ಜ್ಞಾನೇನ ಸದೃಶಂ"* ಎಂದು ಹೇಳಿರುವ ಮಾತು ಸಾರ್ವಕಾಲಿಕ ಸತ್ಯವಾಗಿ ನಮ್ಮೆದುರು ನಿಲ್ಲುತ್ತವೆ. ಜ್ಞಾನಕ್ಕಿಂತ ಮಿಗಿಲಾದದ್ದು ಬೇರೊಂದು ಯಾವುದು ಇಲ್ಲ. ಇಂತಹ ಜ್ಞಾನದ ಮೂಲಗಳು ಕಾಲದಿಂದ ಕಾಲಕ್ಕೆ ವಿವಿಧ ರೀತಿಯ ಸ್ವರೂಪದಲ್ಲಿ ಮನುಷ್ಯನ ಅನುಭವ ಲೋಕವನ್ನು ವಿಸ್ತರಿಸುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ. ಕಾಲಕ್ಕೆ ತಕ್ಕಂತೆ ಬದುಕನ್ನು ಸರಳವಾಗಿ, ಸುಲಲಿತವಾಗಿ, ನಡೆಸಲು ಬೇಕಾದ ಎಲ್ಲ ರೀತಿಯ ಜ್ಞಾನದ ಸಲಕರಣೆಗಳನ್ನು ದಿನದಿನಕ್ಕೂ ಒದಗಿಸುತ್ತಿರುತ್ತದೆ.

ಇಂತಹ ಜ್ಞಾನದ ಮೂಲಗಳಲ್ಲಿ ಒಂದಾಗಿರುವ ಸಮೂಹ ಮಾಧ್ಯಮಗಳಲ್ಲಿ ಹೆಚ್ಚು ಆಕರ್ಷಣೀಯ ಕೇಂದ್ರವಾಗಿರುವ ಸಿನಿಮಾ ಲೋಕ ಹೇಗೆ ಹಲವು ಲೋಕದ ಸತ್ಯಗಳನ್ನು ಪರದೆಯ ಮೇಲೆ ಅನಾವರಣ ಮಾಡುತ್ತದೆ ಎಂಬುದರ ವಿಶ್ಲೇಷಣೆ ಇಂದು ಅತ್ಯಗತ್ಯವೆನಿಸುತ್ತದೆ.

ಸಿನಿಮಾ ಕೇವಲ ದೃಶ್ಯಗಳಾಗಿ ತೆರೆಯ ಮೇಲೆ ಬರುವ ಮನರಂಜನಾ ಲೋಕವಲ್ಲ. ಬದಲಿಗೆ ಹಲವಾರು ಜ್ಞಾನ ಶಿಸ್ತುಗಳನ್ನು ಏಕ ಕಾಲದಲ್ಲಿ ನಿಯಂತ್ರಿಸಬಲ್ಲ ಪ್ರಬಲವಾದ ಚಾಲಕ ಶಕ್ತಿಯಾಗಿಯೂ ಸಹ ತನ್ನ ಕಾರ್ಯವನ್ನು ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಪಡೆದಿದೆ.

ಇಂತಹ ಚಾಲಕ ಶಕ್ತಿ ಪ್ರಭಾವಶಾಲಿಯಾಗಿ ಬಳಕೆಯಾಗಬೇಕಾದಲ್ಲಿ ಅದು ಒಳಗೊಂಡಿರುವ ಆಶಯಗಳ ಕಡೆಗೆ ಗಮನಹರಿಸಲೇಬೇಕು. ಏಕೆಂದರೆ ಇಂದಿನ ಸಿನಿಮಾ ಜಗತ್ತು ವ್ಯಾಪಾರದ ದೃಷ್ಟಿಯಿಂದ ಸಿದ್ದಗೊಳಿಸುತ್ತಿರುವ ಚಲನ ಚಿತ್ರಗಳು ಸಂಖ್ಯೆಯಲ್ಲಿ ಹೆಚ್ಚಾಗಿದ್ದು ಮೌಲ್ಯದಲ್ಲಿ ಕಳಪೆಯಾಗಿರುವುದನ್ನು ಕಾಣಬಹುದಾಗಿದೆ. ಅಧ್ಯಯನದ ದೃಷ್ಟಿಯಿಂದ ಸಿನಿಮಾ ಮತ್ತು ಸಾಹಿತ್ಯವನ್ನು ತೌಲನಿಕವಾಗಿ ನೋಡಲು ಬಯಸಿದ ಉದ್ದೇಶವೆಂದರೆ ಪ್ರಸ್ತುತದ ಸಿನಿಮಾ ಜಗತ್ತು ಸಾಹಿತ್ಯ ಕೃತಿಗಳನ್ನಾಧರಿಸಿದ ಸಿನಿಮಾಗಳನ್ನು ಮಾಡಲೇಬೇಕಾದ ಅಗತ್ಯವನ್ನು ವಿವರಿಸಲಿಕ್ಕಾಗಿಯೇ ಈ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ

ಈ ಹಿಂದೆಯೇ ಹೇಳಿದಂತೆ ಸಮೂಹ ಮಾಧ್ಯಮ ಇವತ್ತು ಜಗತ್ತಿನ ನಾನಾ ಭಾಗದ ವಿಷಯ ಸಂಪತ್ತನ್ನು ನಮ್ಮೆದುರು ಅನಾವರಣ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ಸಮೂಹ ಮಾಧ್ಯಮ ಹೇಳುತ್ತಿರುವುದೆಲ್ಲ ಸತ್ಯವೇ ಎಂದು ಪರಿಗಣಿಸಿ, ಅದನ್ನೇ ಅಳವಡಿಸಿಕೊಂಡು ಬದುಕುತ್ತಿರುವ ಯುವಜನರ ಬದುಕಿನ ಪಥದಲ್ಲಿ ಆಗುತ್ತಿರುವ ಸಾಂಸ್ಕೃತಿಕ ಪಲ್ಲಟಗಳನ್ನು ನೋಡಿದಾಗ ವಾಸ್ತವ ಸತ್ಯಗಳನ್ನು ಹೇಳುವ ಚಿತ್ರಗಳು ಇಂದು ಬರಲೇಬೇಕಾದ ಅಗತ್ಯವಿದೆ ಎಂಬುದು ನನ್ನ ಅಭಿಮತ.

ಮೂಲ ಶಿಕ್ಷಣ ವ್ಯವಸ್ಥೆಯಲ್ಲಿ ಈ ನಿಟ್ಟಿನ ಪ್ರಯತ್ನಗಳಾಗಬೇಕು. ಅದರ ಕೊರತೆ ಇರುವ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಸಮೂಹ ಮಾಧ್ಯಮಗಳಾದರೂ ಆ ಕೊರತೆಯನ್ನು ತುಂಬಿಕೊಡುವ ಪ್ರಯತ್ನ ಮಾಡಲೇಬೇಕಾಗಿದೆ. ತಾಯಿ ಗರ್ಭದಿಂದ ಹೊಸ ಜಗತ್ತಿಗೆ ಕಾಲಿಟ್ಟ ಮಗುವಿಗೆ ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯುವುದಿಲ್ಲ. ಪ್ರತಿಯೊಂದನ್ನು ಕುತೂಹಲದಿಂದ ನೋಡಿ ಅದನ್ನು ಅನುಸರಿಸುವ ಮೂಲಕ ಅದು ತನ್ನ ಅನುಭವ ಲೋಕವನ್ನು ಹೆಚ್ಚಿಸಿಕೊಳ್ಳುತ್ತಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಮಾಜವನ್ನು ಅದು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ತನ್ನ ಸುತ್ತಮುತ್ತಲಿನ ಪರಿಸರದಲ್ಲಿನ ಪ್ರತಿಯೊಂದು ಘಟನಾವಳಿಗಳೂ ಸಹ ಅದರ ಅರಿವಿಗೆ ಬರುತ್ತವೆ. ಅದನ್ನೇ ಸತ್ಯವೆಂದು ನಂಬಿ ಆಚರಣೆಗೆ ತರುತ್ತದೆ. ಮನೋವಿಕಾಸದ ಹಂತದಲ್ಲಿ ಈ ರೀತಿಯ ಸೂಕ್ಷ್ಮ ಗ್ರಹಿಕೆಯೇ ಮಗುವಿನ ಬುದ್ಧಿ ವಿಕಾಸಕ್ಕೂ ಮೂಲ ಕಾರಣವಾಗಿರುತ್ತದೆ ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ.

'ಮನೆಯೇ ಮೊದಲ ಪಾಠ ಶಾಲೆ' ಎಂಬುದು ಸುಪ್ರಸಿದ್ಧ ಮಾತು. ಒಂದು ಮಗುವಿನ ಬುದ್ಧಿವಿಕಾಸಕ್ಕೆ ಮಗುವಿನ ಮನೆಯೇ ನಾಂದಿಯಾಗಿರುತ್ತದೆ. ಆದರೆ ಇಂದು ಮನೆಯನ್ನು ತಲುಪುತ್ತಿರುವ ಆಧುನಿಕ ಜೀವನ ಶೈಲಿಯಿಂದಾಗಿ ಹಿರಿಯರೇ ಜಂಜಾಟದ ಸುಳಿಯಲ್ಲಿ ಸಿಕ್ಕು ವಿಶ್ರಾಂತಿಗಾಗಿ ಹಾತೊರೆಯುತ್ತಿದ್ದಾರೆಂಬ ಅಂಶ ಮಗುವಿನ ಬೆಳವಣಿಗೆಯ ಹಂತದ ಪೋಷಣೆಯ ಕೊರತೆಯನ್ನು ಎತ್ತಿ ತೋರಿಸುತ್ತದೆ. ಜಾಗತೀಕರಣದ ಪ್ರಭಾವದಿಂದಾಗಿ ಬಿಡುವಿಲ್ಲದ ಅವೇಳೆಯ ದುಡಿತ ಮತ್ತು ಯಾಂತ್ರಿಕ ಬದುಕಿಗೆ ಒಗ್ಗಿ ಹೋಗಿರುವ ಜನ ಮನೆಯಲ್ಲಿ ಮಗುವಿನ ಕೋಮಲ ಭಾವನೆಗಳಿಗೆ ಅವಕಾಶ ಕೊಡುವಷ್ಟು ತಾಳ್ಮೆಯಿಂದ ಇದ್ದಾರೆಯೇ ಎಂಬುದೇ ಯಕ್ಷ ಪ್ರಶ್ನೆಯಂತಾಗಿರುವ ಪ್ರಸ್ತುತ ಸಂದರ್ಭದಲ್ಲಿ, ಮಗುವಿನ ಮನೋವಿಕಾಸಕ್ಕೆ ದಾರಿಗಳಾವುವು? ಎಂದು ಪರಿಶೀಲಿಸಿ ನೋಡಿದಾಗ ಮಗು ಇರುವ ಪರಿಸರವನ್ನೇ ಯಾಂತ್ರಿಕವಾಗಿ ಅನುಸರಿಸುವ ಪ್ರಯತ್ನದಲ್ಲಿರುತ್ತದೆ ಎಂಬುದು ತಿಳಿದುಬರುತ್ತದೆ.

ಹತ್ತು ವರ್ಷಗಳ ಹಿಂದೆ 'ಶಕ್ತಿಮಾನ್' ಧಾರಾವಾಹಿಯನ್ನು ನೋಡಿ ಕಷ್ಟಕ್ಕೆ ಈಡಾದ ಮಕ್ಕಳನ್ನು ಕಾಪಾಡಲು ಶಕ್ತಿಮಾನ ಎಲ್ಲಿದ್ದರೂ ಬರುತ್ತಾನೆ ಎಂಬ ಭ್ರಮೆಯಲ್ಲಿ ಅನಾಹುತಗಳನ್ನು ಮಾಡಿಕೊಂಡು ಸತ್ತ ಘಟನೆಯನ್ನು ನೋಡಿದರೆ ವಾಸ್ತವ ಲೋಕದ ಪ್ರಜ್ಞೆಯ ಕೊರತೆ ಮಕ್ಕಳಲ್ಲಿರುತ್ತದೆ ಎಂಬುದನ್ನು ಮನಗಾಣಬಹುದು.

ಈ ಧಾರಾವಾಹಿಯ ಉದಾಹರಣೆಯನ್ನು ಹೇಳಿದ ಉದ್ದೇಶವೇನೆಂದರೆ ಮಕ್ಕಳ ಮನಸ್ಸು ಸಮೂಹ ಮಾಧ್ಯಮದಿಂದ ಪ್ರೇರೇಪಿಸಲ್ಪಡುತ್ತಿರುತ್ತದೆ ಎಂಬುದನ್ನು ತಿಳಿಸುವುದಕ್ಕಾಗಿ. ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ ಸಿನಿಮಾವೊಂದರಲ್ಲಿ ದರೋಡೆ ಮಾಡುವ ದೃಶ್ಯವನ್ನು ನೋಡಿದ ಯುವಕರಿಬ್ಬರು ಅದೇ ಪ್ರಕಾರವಾಗಿ ಜನರನ್ನು ದೋಚುತ್ತಿದ್ದರೆಂಬ ಪತ್ರಿಕಾ ವರದಿಯಲ್ಲಿನ ಮಾಹಿತಿಯು ಸಿನಿಮಾ ಮಾಧ್ಯಮ ಜನರನ್ನು ಹಲವು ರೀತಿಯಲ್ಲಿ ಉದ್ದೀಪಿಸಬಲ್ಲ ಸಾಮರ್ಥ್ಯವನ್ನು ಪಡೆದಿದೆ ಮತ್ತು ಆ ಮೂಲಕ ಜನರಲ್ಲಿ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದೆ ಎಂಬುದು ತಿಳಿದು ಬರುತ್ತದೆ.

ಹೆಚ್ಚಿನ ವಿವರಣೆಯೇ ಬೇಡ. ಇಂದಿನ ನಮ್ಮ ಯುವಜನರ ಉಡುಗೆ-ತೊಡುಗೆಯನ್ನು ಒಂದು ಬಾರಿ ಕೂಲಂಕಷವಾಗಿ ವೀಕ್ಷಿಸಿದರೆ ತಿಳಿಯುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಅತ್ಯಂತ ಪ್ರಭಾವಿ ಮಾಧ್ಯಮವಾಗಿರುವ ಸಿನಿಮಾ ಜಗತ್ತಿನ ಆಕರ್ಷಕ ಬದುಕು ಹೇಗೆ ಯುವಜನರನ್ನು ಸೆಳೆಯುತ್ತಿದೆ ಎಂದು. ಈ ಎಲ್ಲಾ ಮಾತುಗಳಿಂದ ತಿಳಿಯುವ ಮುಖ್ಯ ವಿಚಾರವೆಂದರೆ ಸಿನಿಮಾ ಜಗತ್ತು ಇಂದು ಜನರ ಜೀವನ ವಿಧಾನದ ಮೇಲೆ ಭೌತಿಕವಾಗಿ ಮತ್ತು ಬೌದ್ಧಿಕವಾಗಿ ತನ್ನದೇ ಆದ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತಿದೆ.

ಈ ಎಲ್ಲ ಕಾರಣಗಳಿಂದಾಗಿಯೇ ಸಿನಿಮಾವನ್ನು ನನ್ನ ಅಧ್ಯಯನದ ವಿಷಯವನ್ನಾಗಿಸಿಕೊಂಡಿದ್ದೇನೆ. ಸಾಹಿತ್ಯ ಲೋಕದ ಮಹತ್ವದ ಕೃತಿಗಳನ್ನು ಜನರಿಗೆ ತಲುಪಿಸುವಲ್ಲಿ ಸಿನಿಮಾ ಹೇಗೆ ಸಹಾಯ ಮಾಡಬಲ್ಲದು ಎಂಬುದನ್ನು ವಿವರಣಾತ್ಮಕವಾಗಿ ಚರ್ಚಿಸುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ. ಈ ಮೊದಲೇ ಹೇಳಿದಂತೆ ಒಬ್ಬ ವ್ಯಕ್ತಿಯ ಇಡೀ ಬದುಕು ರೂಪಗೊಳ್ಳುವುದೇ ಆತನ ಬಾಲ್ಯವೆಂಬ ಅಡಿಪಾಯದ ಮೇಲೆ. ಬಾಲ್ಯದಲ್ಲಿನ ಹಲವು ಅಂಶಗಳು ಜೀವನದುದ್ದಕ್ಕೂ ಆದರ್ಶಗಳಾಗಿ ಉಳಿದುಬಿಡುತ್ತವೆ.

ಗಾಂಧೀಜಿಯವರ ಆತ್ಮ ಚರಿತ್ರೆಯನ್ನು ಓದಿದಾಗ ನಮಗೆ ತಿಳಿದು ಬರುವ ಅಂಶವೆಂದರೆ ಗಾಂಧೀಜಿ ಬಾಲ್ಯದಿಂದಲೂ ತಾಯಿಯ ನೆರಳಿನಲ್ಲಿ ಬೆಳೆದವರು, ತಾಯಿಯ ದೈವಭಕ್ತಿ ಮತ್ತು ಧರ್ಮ ಪರಿಪಾಲನೆಯ ವಿಚಾರಗಳು ಗಾಂಧೀಜಿಯವರನ್ನು ಬಹುವಾಗಿ ಆಕರ್ಷಿಸಿದ ಅಂಶಗಳೆಂದು ಹೇಳಬಹುದು. ರಾಷ್ಟ್ರಪಿತನಾಗಿ ದೇಶಕ್ಕೆ ಪರಿಚಿತರಾದ ಗಾಂಧಿ ಬಾಲ್ಯದಲ್ಲಿ ತನ್ನ ತಾಯಿ ಆಚರಿಸುತ್ತಿದ್ದ ಉಪವಾಸ ವ್ರತಗಳಿಂದಾಗಿಯೇ ಪ್ರೇರಣೆಗೊಂಡು ಬ್ರಿಟಿಷರ ವಿರುದ್ಧ ಉಪವಾಸ ಸತ್ಯಾಗ್ರಹವನ್ನು ಪ್ರಬಲ ಅಸ್ತ್ರವಾಗಿ ಬಳಸಿದ್ದನ್ನು ನೋಡಿದಾಗ ಮಕ್ಕಳಿಗೆ ಬಾಲ್ಯದ ನೆನಪುಗಳು ಮತ್ತು ಅನುಭವಗಳು ಹೇಗೆ ಇಡೀ ಬದುಕನ್ನು ನಿರ್ಧರಿಸುತ್ತವೆ. ಎಂಬುದನ್ನು ತಿಳಿಯಬಹುದು.

ಈ ಅಂಶವನ್ನು ಪರಿಗಣಿಸಿಯೇ ಮಕ್ಕಳ ಚಿತ್ರಗಳು ಶಾಲಾ ಪಠ್ಯದಲ್ಲಿನ ಮೌಲ್ಯಗಳನ್ನು ಎತ್ತಿ ಹಿಡಿಯಬಲ್ಲವು ಎಂಬುದನ್ನು ಸಾರುವಂತಿರುವ ಅತ್ಯುತ್ತಮ ಮಕ್ಕಳ ಚಿತ್ರ ಎಂಬ ಪ್ರಶಸ್ತಿಯನ್ನು ಗಳಿಸಿರುವ ಡಾ॥ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ' ಕತೆಯನ್ನು ಆಧರಿಸಿ ರೂಪುಗೊಂಡಿರುವ "ನಾನು ಗಾಂಧಿ" ಸಿನಿಮಾವನ್ನು ಈ ಅಧ್ಯಯನದಲ್ಲಿ ಕೇಂದ್ರ ವಸ್ತುವಾಗಿಸಿಕೊಂಡು ಸಂಶೋಧನಾ ಕಾರ್ಯವನ್ನು ಮಾಡಿದ್ದೇನೆ. ಈ ಚಿತ್ರವು ತನ್ನದೇ ಆದ ಹಲವು ವೈಶಿಷ್ಟತೆಗಳೊಂದಿಗೆ ದೇಶ ವಿದೇಶಗಳಲ್ಲಿ ಇಂಕ್ಕೂ ಹೆಚ್ಚು ಪ್ರದರ್ಶನವನ್ನು ಕಂಡಿದೆ. ಇಂದಿನ ಶಿಕ್ಷಣ ಪದ್ಧತಿ ಮತ್ತು ಜಾಗತೀಕರಣದ ಪ್ರಭಾವದಿಂದ ಉದಯಿಸಿದ ಆಧುನಿಕತೆಯ ಎದುರಿನಲ್ಲಿ ದೇಸಿಯ ಜ್ಞಾನ ಹೇಗೆ ತಲ್ಲಣಗೊಳ್ಳುತ್ತಿದೆ ಎಂಬುದನ್ನು ಈ ಸಿನಿಮಾ ನವಿರಾಗಿ ವಿವರಿಸುತ್ತದೆ.

ಶೈಕ್ಷಣಿಕ ವಲಯದಲ್ಲಿರುವ ಓರೆಕೋರೆಗಳು ಮತ್ತು ಸ್ಥಳೀಯ ರಾಜಕಾರಣ, ಮಕ್ಕಳು ಆ ಪರಿಸ್ಥಿತಿಯಲ್ಲಿ ಕಂಡು ಬರುವ ಬಲಿಪಶುಗಳಾಗುತ್ತಿದ್ದಾರೆ ಎಂಬಂತಹ ವಾಸ್ತವ ಸಮಸ್ಯೆಗಳ ಮೇಲೆ ಈ ಚಿತ್ರ ಬೆಳಕು ಚೆಲ್ಲುತ್ತದೆ. ಸಾಹಿತ್ಯ ಕೃತಿಯೊಂದು ಸಿನಿಮಾ ಆದಾಗ ಓದುಗರ ಮನೋರಂಗ ಭೂಮಿಯಿಂದ ದೃಶ್ಯಕಾವ್ಯವಾಗಿ ಸಚಿತ್ರವಾಗಿ ಪರದೆಯ ಮೇಲೆ ಬಂದಾಗ ಆಗುವ

ಪರಿಣಾಮಗಳೇನು? ಎಂಬುದನ್ನು ಈ ಅಧ್ಯಯನದ ಆಧಾರದಿಂದ ತಿಳಿಯಬಹುದಾಗಿದೆ. ಅದೂ ಅಲ್ಲದೆ ಸಿನಿಮಾ ಲೋಕ ಬಹು ಆಕರ್ಷಣೀಯವಾದದ್ದು, ಜನರಿಗೆ ನೇರವಾಗಿ ತಲುಪುತ್ತದೆ. ಆದ್ದರಿಂದ ಇದನ್ನು ಶಿಕ್ಷಣದ ಒಂದು ಭಾಗವಾಗಿಸಿ ಮಕ್ಕಳ ಎದುರು ತರುವ ಪ್ರಯತ್ನಗಳಾಗಬೇಕು ಹಾಗಾಗಬೇಕೆಂದರೆ ಅದರಲ್ಲಿನ ಓರೆಕೋರೆಗಳನ್ನು ತಿದ್ದಲೇಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ 'ನಾನು ಗಾಂಧಿ' ಸಿನಿಮಾ ಯಾಕೆ ಮಹತ್ವವನ್ನು ಪಡೆದಿದೆ ಎಂಬುದನ್ನು ನೋಡಿದರೆ ಅದರಲ್ಲಿನ ವಸ್ತು ಮಕ್ಕಳ ಮನೋಲೋಕದ ಪರಿಭಾಷೆ ನಮ್ಮರಿವಿಗೆ ಬರುತ್ತದೆ. ಒಂದು ಅತ್ಯುತ್ತಮ ಸದಭಿರುಚಿಯ ಚಿತ್ರವಾಗಿ ಇದು ಮೂಡಿ ಬಂದಿದೆ.

ಹಳ್ಳಿಯ ದೇಸಿ ಬದುಕು ಮತ್ತು ಜಾಗತೀಕರಣದ ಪ್ರಭಾವದಿಂದಾಗಿ ಬಂದಿರುವ ಆಧುನಿಕ ಶಿಕ್ಷಣದ ನಡುವಿನ ಸಂಘರ್ಷ ಪ್ರಾದೇಶಿಕತೆಯನ್ನು ನಾಶದ ಅಂಚಿಗೆ ತಳ್ಳುತ್ತಿರುವ ಕಂಪ್ಯೂಟರ್ ಸಂಸ್ಕೃತಿ, ಇವುಗಳ ನಡುವಿನ ಘರ್ಷಣೆ ಮಕ್ಕಳ ಮುಗ್ಧ ಹೃದಯದ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಈ ಚಿತ್ರ ಅದ್ಭುತವಾಗಿ ಕಟ್ಟಿಕೊಟ್ಟಿದೆ. ಹಳ್ಳಿಯ ಬದುಕಿನಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡುತ್ತಿರುವ ಆಧುನಿಕ ಸಂಸ್ಕೃತಿಯು ದೇಸಿಯತೆಯೇ ಕೀಳು ಎಂಬ ಕೀಳರಿಮೆಗೆ ಗುರಿಯಾಗುವಂತೆ ಮಾಡುತ್ತಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಇಂಥದೊಂದು ಚಿತ್ರ ಪ್ರಾದೇಶಿಕತೆ ಮತ್ತು ನಮ್ಮತನಗಳನ್ನು ಗಟ್ಟಿಗೊಳಿಸಿಕೊಳ್ಳಲು ಸಹಾಯ ಮಾಡುವ ನಿಟ್ಟಿನ ಚಿಂತನೆಗಳನ್ನು ಹೊತ್ತು ಬಂದಿದೆ. ಆದ್ದರಿಂದಲೇ ಇಂಥ ಚಿಂತನಾಪರ ಚಿತ್ರಗಳು ಶಿಕ್ಷಣದ ಒಂದು ಭಾಗವಾಗಬೇಕು.

ಇಲ್ಲಿ ಗಾಂಧಿಯ ಚಿಂತನೆಗಳು ಹೇಗೆ ಪ್ರಸ್ತುತ ಸಮಸ್ಯೆಗೆ ಪರಿಹಾರವಾಗಬಲ್ಲವು ಎಂಬುದನ್ನು ಹೇಳುವ ಪ್ರಯತ್ನವಿದೆ. ಚಿತ್ರದ ಸಂಭಾಷಣೆಯಲ್ಲಿ 'ರಾಷ್ಟ್ರಪಿತನ ಬಗೆಗಿನ ವಿಷಯ ಪಠ್ಯದಲ್ಲಿ ಒಂದೇ ಪುಟವಿದೆ' ಎನ್ನುವ ಹುಡುಗನ ಮಾತು. ನಮ್ಮ ನಾಡಿನ ಮಹಾತ್ಮರ ಪರಿಚಯವನ್ನು ನಾವಿವತ್ತು ಮಕ್ಕಳಿಗೆ ಶಾಲಾಕಾಲೇಜುಗಳಲ್ಲಿ ಮಾಡಿಕೊಡುತ್ತಿಲ್ಲ ಎಂಬ ಕೊರತೆಯನ್ನು ಎತ್ತಿ ತೋರಿಸುತ್ತದೆ. ಮಕ್ಕಳಿಗೆ ಶಾಲೆಯಲ್ಲಿಯೇ ಜ್ಞಾನ ಸಿಕ್ಕುತ್ತದೆ ಎಂಬುದು ಸುಳ್ಳು, ಪ್ರಭಾವಿ ಮಾಧ್ಯಮಗಳನ್ನು ಬಳಸಿಕೊಂಡು ನಾವೇ ಜ್ಞಾನ ವಲಯಗಳನ್ನು ವಿಸ್ತರಿಸಿಕೊಡಬೇಕಾದ ಅಗತ್ಯವಿದೆ. ಮಚ್ಚು, ಲಾಂಗುಗಳ ಸಂಸ್ಕೃತಿ ಹೊಡಿ–ಬಡಿ ಎಂಬಂತಹ ಕತೆಗಳೇ ಮಾರಾಟದ ಸರಕುಗಳಾಗಿರುವ ಇಂದಿನ ಸಿನಿಮಾ ಜಗತ್ತು ಸ್ವಲ್ಪ ಗಮನ ಹರಿಸಿ ಎಲ್ಲ ವಲಯದ ವಯೋಮಾನದವರಿಗೂ ಉಪಯುಕ್ತ ಮಾಹಿತಿಯನ್ನೊದಗಿಸುವ ರೀತಿಯ ಚಿತ್ರಗಳನ್ನು ಸಿದ್ಧಗೊಳಿಸಬೇಕಾದ ಅಗತ್ಯವಿದೆ ಎಂಬುದನ್ನು ಈ ಅಧ್ಯಯನದ ಮೂಲಕ ತಿಳಿಸುವ ಒಂದು ಸಣ್ಣ ಪ್ರಯತ್ನ ಈ ಸಂಶೋಧನಾ ಪ್ರಬಂಧದ ಮೂಲ ಉದ್ದೇಶ.

ಅಧ್ಯಾಯ-೨

ಮೂಲಕತೆಯ ಆಶಯ

ಅಧ್ಯಾಯ-೨

ಮೂಲಕತೆಯ ಆಶಯ

ಕಥೆಗಾರರ ಪರಿಚಯ:

ಡಾ॥ ಬೆಸಗರಹಳ್ಳಿ ರಾಮಣ್ಣ ಮದ್ದೂರು ತಾಲ್ಲೂಕು ಮಂಡ್ಯ ಜಿಲ್ಲೆಯ ಬೆಸಗರಹಳ್ಳಿಯಲ್ಲಿ ೧೫-೦೮-೧೯೩೮ ರಂದು ಚಿಕ್ಕಎಲ್ಲೇಗೌಡ ದೊಡ್ಡತಾಯಮ್ಮನ ಮಗನಾಗಿ ಜನಿಸಿದರು. ಬೆಸಗರಹಳ್ಳಿ ಮದ್ದೂರು, ಮೈಸೂರುಗಳಲ್ಲಿ ತಮ್ಮ ವ್ಯಾಸಂಗವನ್ನು ಮಾಡಿದರು. ಹಳ್ಳಿಗಾಡು ಪ್ರದೇಶದಲ್ಲಿ ವೈದ್ಯ ವೃತ್ತಿಯನ್ನು ಮಾಡಿಕೊಂಡು ತನ್ನ ಅನುಭವ ಲೋಕದ ಘಟನೆಗಳನ್ನು ಕತೆಯಾಗಿಸಿ ನೈಜವಾಸ್ತವ ನೆಲೆಗಟ್ಟಿನ ಮೇಲೆ ಕತೆಗಳನ್ನು ಹೆಣೆಯುವಲ್ಲಿ ರಾಮಣ್ಣ ಅವರದ್ದು ಯಶಸ್ಸಿನ ಹಾದಿಯೆಂದೇ ಹೇಳಬೇಕು. ದಿವಂಗತ ಡಾ॥ ಬೆಸಗರಹಳ್ಳಿ ರಾಮಣ್ಣ ವೃತ್ತಿಯಲ್ಲಿ ವೈದ್ಯರು. ಪ್ರವೃತ್ತಿಯಲ್ಲಿ ಪ್ರಸಿದ್ಧ ಕತೆಗಾರರು ಕನ್ನಡದಲ್ಲಿ ಅಂಕ್ಕೂ ಹೆಚ್ಚು ಸತ್ವಯುತ ಕತೆಗಳನ್ನು ಬರೆದ ರಾಮಣ್ಣ ಗಾಂಧಿ ಮತ್ತು ಗಾಂಧಿವಾದಕ್ಕೆ ಸಂಬಂಧಪಟ್ಟ ನಾಲ್ಕು ಕತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಗಾಂಧಿ' ಬಹುಮುಖ್ಯ ಕತೆ. ಕನ್ನಡ ಸಾಹಿತ್ಯ ವಿಮರ್ಶೆ ಈ ಕತೆಯನ್ನು ವಿಭಿನ್ನವಾಗಿ ಚರ್ಚಿಸುತ್ತಲೇ ಬಂದಿದೆ. ಗಾಂಧಿವಾದದ ಅವಸಾನದ ವ್ಯಂಗ್ಯವನ್ನು ಕಾಯಿಲೆಯಿಂದ ನರಳುತ್ತಿರುವ ಬಾಲಕನ ಮೂಲಕ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ರಾಮಣ್ಣನವರ ತುಂಬಾ ಪ್ರಭಾವಿ ಕತೆ ಇದಾಗಿದೆ 'ಕನ್ನಂಬಾಡಿ' ಅವರ ಸಮಗ್ರ ಕಥಾಸಂಕಲನ. 'ಕೊಳಲು ಮತ್ತು ಖಡ್ಗ' ಅವರ ಮತ್ತೊಂದು ಕಥಾ ಸಂಕಲನ 'ತೋಳಗಳ ನಡುವೆ' ಕಾದಂಬರಿ. 'ಶೋಕಗೀತೆ' ಕವನಸಂಕಲನ. ಅನೇಕ ಚಳುವಳಿಗಳ ಸಾಕ್ಷಿ ಪ್ರಜ್ಞೆಯಾಗಿದ್ದ ರಾಮಣ್ಣ ಕನ್ನಡದ ಪ್ರೇಮಚಂದ್ ಎನಿಸುವಷ್ಟರ ಮಟ್ಟಿಗೆ ಊಳಿಗಮಾನ್ಯ ಜನಜೀವನದ ಕಥಾನಕಗಳನ್ನು ಕನ್ನಡದಲ್ಲಿ ರಚಿಸಿದವರಾಗಿದ್ದರು. ಸದಾ ಸಮಾಜ ಪರಿವರ್ತನೆ ಮತ್ತು ಮಾನವೀಯ ಬದುಕಿನ ಬಯಕೆ ಅವರದಾಗಿತ್ತು.

೧೯೬೫ ರಲ್ಲಿ ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ. ೧೯೬೮, ೧೯೭೨ ರಲ್ಲಿ ಕಥಾ ಸಾಹಿತ್ಯ ಅಕಾಡೆಮಿಯ ಪ್ರಥಮ ಬಹುಮಾನ ದೊರಕಿದೆ. 'ಒಂದು ಹುಡುಗನಿಗೆ ಬಿದ್ದ ಕನಸು' ಕಥಾ ಸಂಕಲನಕ್ಕೆ ೧೯೭೯ ರಲ್ಲಿ ಪ್ರಕಟವಾದ ಶ್ರೇಷ್ಠ ಪುಸ್ತಕವೆಂದು ಉದಯೋನ್ಮುಖ ವರ್ಧಮಾನ ಪ್ರಶಸ್ತಿ ಲಭಿಸಿದೆ. ಇವರ ಪ್ರಕಟಿತ ಕೃತಿಗಳೆಂದರೆ 'ನೆಲದ ಒಡಲು', 'ಗರ್ಜನೆ', 'ಹರಕೆಯ ಹಣ', 'ಒಂದು ಹುಡುಗನಿಗೆ ಬಿದ್ದ ಕನಸು', 'ನೆಲದ ಸಿರಿ', 'ರಕ್ತ

ಕಣ್ಣೀರು', ಇವರನ್ನು ಕನ್ನಡದ ಉತ್ತಮ ಲೇಖಕರಲ್ಲಿ ಮೊದಲ ಸಾಲಿನಲ್ಲಿ ನಿಲ್ಲಬಲ್ಲ ಶ್ರೇಷ್ಠ ಕತೆಗಾರರೆಂದು ಹೇಳಿದರೆ ಬಹುಶಃ ತಪ್ಪಾಗಲಾರದು.

ಬಾಲ್ಯದಲ್ಲಿ ಅಣ್ಣನ ಸಾಹಿತ್ಯ ಪ್ರೇಮದಿಂದ ಪ್ರಭಾವಿತರಾದ ಲೇಖಕರು ಅದೇ ನಿಟ್ಟಿನಲ್ಲಿ ಸಾಹಿತ್ಯ ಪ್ರೇಮವನ್ನು ಉಳಿಸಿಕೊಳ್ಳುದರ ಮೂಲಕ ಅಣ್ಣನ ಆಸಕ್ತಿಯನ್ನೇ ತನ್ನ ಗುರುವಾಗಿಸಿಕೊಂಡು ಬೆಳೆದವರು. ಅಣ್ಣ ಕಂಡ ದುರಂತ ಅಂತ್ಯ ಅವರ ಸಾಹಿತ್ಯ ಕೃಷಿಯನ್ನು ಮೊಟಕುಗೊಳಿಸದೇ ಪ್ರೇರಣೆಯಾಗಿ ನಿಂತದ್ದು ಮಾತ್ರ ಲೇಖಕರ ಬರೆಯಬೇಕೆಂಬ ಅಂತಃಶಕ್ತಿಗೆ ಸಾಕ್ಷಿಯಾಗಿದೆ. ಆದ್ದರಿಂದಲೇ ಇವರ ಎಲ್ಲ ಕತೆಗಳಲ್ಲೂ ಜೀವ ಚೈತನ್ಯ ಇರುವುದನ್ನು ಗುರುತಿಸಬಹುದು..

ಲೇಖಕರೇ ಹೇಳುವಂತೆ 'ಗಾಂಧಿ' ಕತೆಯು ರೂಪಪಡೆದಿದ್ದು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ. ಸಾಮಾನ್ಯ ಜೀವನ ಮೌಲ್ಯಗಳಿಗೆ ಬಿದ್ದ ಪೆಟ್ಟನ್ನು ಎದುರಿಸಲಿಕ್ಕಾಗಿ ಮತ್ತು ಆ ಸಂದರ್ಭದಲ್ಲಿ ಭಾರತೀಯರಿಗೆ ಗಾಂಧಿ ಮಹಾತ್ಮನ ಮಹತ್ವವನ್ನು ತಿಳಿಸಲಿಕ್ಕಾಗಿಯೇ ರೂಪಗೊಂಡ ಕತೆಯೆಂದು ಸ್ವತಃ ಲೇಖಕರೇ 'ಕನ್ನಂಬಾಡಿ' ಸಂಕಲನದಲ್ಲಿ ಲೇಖಕರ ನುಡಿಯಲ್ಲಿ ಹೇಳುತ್ತಾರೆ. ಅಂದಮೇಲೆ ಈ ಕತೆಯ ಮೂಲ ಉದ್ದೇಶ ನೈತಿಕ ಮೌಲ್ಯಗಳನ್ನು ಪ್ರಸಾರ ಮಾಡುವುದೇ ಆಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ಲೇಖಕ ಬೆಸಗರಹಳ್ಳಿ ರಾಮಣ್ಣನವರು ಪಿ. ಲಂಕೇಶ್‌ರವರ ಕತೆಯನ್ನೇ ಹಿಂದಿಕ್ಕಿ ಬಹುಮಾನ ಪಡೆದ ಕತೆಗಾರರು. ವೃತ್ತಿಯಿಂದ ವೈದ್ಯರಾದರೂ ಸಾಹಿತ್ಯದ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಬಗೆ ಮಾತ್ರ ನಿಜಕ್ಕೂ ಶ್ಲಾಘನೀಯವೆ ಸರಿ. ವೈದ್ಯಲೋಕದ ಜ್ಞಾನಕ್ಕೂ ಸಾಹಿತಿಯೊಬ್ಬನ ಸಹೃದಯತೆಗೂ ಅಜಗಜಾಂತರ ವ್ಯತ್ಯಾಸ. ಆದರೆ ಬೆಸಗರಹಳ್ಳಿ ರಾಮಣ್ಣನವರು ಈ ಎರಡೂ ಜ್ಞಾನಶಾಖೆಗಳ ಮೇಲೆ ಹಿಡಿತ ಸಾಧಿಸಿದರೆಂಬುದು ಗಮನಿಸಲೇಬೇಕಾದ ಸಂಗತಿ.

೧೯೭೨ ರಲ್ಲಿ ಇವರ 'ಗರ್ಜನೆ' ಕೃತಿಗೆ ಕನ್ನಡ ಸಾಹಿತ್ಯ ಅಕಾಡೆಮಿ ಒಳ್ಳೆಯ ಕಥಾ ಸಂಗ್ರಹವೆಂದು ಪ್ರಥಮ ಬಹುಮಾನ ನೀಡಿ ಗೌರವಿಸಿತು. ಇದಾದ ಎರಡು ವರ್ಷಗಳ ನಂತರ ಅಂದರೆ ೧೯೭೪ ರಲ್ಲಿ ಬಿಹಾರದ ಬಾಗಲ್ಪುರ ಜಿಲ್ಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಅಡಿಯಲ್ಲಿ ವಿಶೇಷ ಸೇವೆ ಸಲ್ಲಿಸಿ ಪ್ರಶಸ್ತಿ ಪತ್ರವನ್ನು ಗಳಿಸಿದರು.

ಈ ಎರಡು ಸಾಧನೆಗಳನ್ನು ನೋಡಿ ಹೇಳುವುದಾದರೆ ಲೇಖಕರು ಎರಡು ವಿರುದ್ಧ ಮತ್ತು ಭಿನ್ನ ಕ್ಷೇತ್ರಗಳಲ್ಲಿ ಗಳಿಸಿದ್ದ ಪ್ರಾವೀಣ್ಯತೆಯನ್ನು ಗಮನಿಸಲೇಬೇಕಾಗುತ್ತದೆ. ಜನಪರ ಕಾಳಜಿಯನ್ನು ಹೊತ್ತ ಅನೇಕ ಕತೆಗಳು ಇವರ ಲೇಖನಿಯಿಂದ ಹೊರ ಹೊಮ್ಮಿವೆ. ಅಂತೆಯೇ ವ್ಯಕ್ತಿನಿಷ್ಠ ಬದುಕಿನ ಗೊಂದಲಗಳು ಮತ್ತು ಭ್ರಮನಿರಸನದಂತಹ ಆದರ್ಶವಾದಿ ನೆಲೆಗಟ್ಟಿನ

ಬದುಕನ್ನು ವಿಮರ್ಶಿಸುವ ಭಿನ್ನ ಭಿನ್ನ ರೀತಿಯ ವಸ್ತುಗಳನ್ನೊಳಗೊಂಡ ಕತೆಗಳು ಇವರಿಂದ ರಚಿಸಲ್ಪಟ್ಟಿವೆ.

ಈ ಎಲ್ಲ ಅಂಶಗಳನ್ನಾಧರಿಸಿ ಬೆಸಗರಹಳ್ಳಿ ರಾಮಣ್ಣನವರು ಒಬ್ಬ ನುರಿತ ವೈದ್ಯ ಮತ್ತು ಪ್ರಭಾವಶಾಲಿ ಬರಹಗಾರರಾಗಿದ್ದರೆಂಬುದನ್ನು ಅಲ್ಲಗಳೆಯುವಂತಿಲ್ಲ. ಇವರು ಬರೆದಿರುವ ಗಾಂಧಿ ಕತೆಯು ಏಕಕಾಲದಲ್ಲಿ ಹಲವು ಚಿಂತನೆಗಳನ್ನು ಓದುಗರಲ್ಲಿ ಪ್ರೇರೇಪಿಸುತ್ತದೆ. ಪ್ರಸ್ತುತ ಸಮಾಜದಲ್ಲಿನ ಆಗುಹೋಗುಗಳನ್ನು ಈ ಕತೆಯಿಂದ ತಿಳಿದುಕೊಳ್ಳಬಹುದಾಗಿದೆ. ಗಾಂಧಿ ಕತೆಯು ಪ್ರಸ್ತುತ ವ್ಯವಸ್ಥೆಯಲ್ಲಿನ ಹುಳುಕುಗಳನ್ನು ಹೆಕ್ಕಿ ತೆಗೆದು ಓದುಗರ ಮುಂದೆ ಅನಾವರಣ ಮಾಡುತ್ತದೆ. ವ್ಯಕ್ತಿಯ ನೈತಿಕ ಮೌಲ್ಯಗಳು ಹೇಗೆ ಅಧಃಪತನಕ್ಕಿಳಿದಿವೆ ಎಂಬುದನ್ನು ಈ ಕತೆಯಲ್ಲಿ ವಿಡಂಬನಾತ್ಮಕವಾಗಿ ಬೆಸಗರಹಳ್ಳಿ ರಾಮಣ್ಣನವರು ಚಿತ್ರಿಸಿದ್ದಾರೆ.

<u>ಕಥೆಯ ಆಶಯ</u>

ಕತೆಯ ಆರಂಭವೇ ವಿಶೇಷವಾಗಿದೆ. 'ಒಂದು ದಿನ ಇಂಡಿಯಾ ದೇಶದ ಕರ್ನಾಟಕ ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರವೊಂದರಲ್ಲಿ' ಎಂದು ಹೇಳುವಲ್ಲಿಯೇ ಭಾರತದಂತಹ ಬೃಹತ್ ರಾಷ್ಟ್ರವನ್ನು ಕರ್ನಾಟಕದ ಜಿಲ್ಲಾ ಪ್ರಾಥಮಿಕ ಆರೋಗ್ಯಕೇಂದ್ರವೆಂಬ ಕಿಟಕಿಯಿಂದ ನೋಡುವ ನೋಟ ಕ್ರಮವಿದೆ. ಇಲ್ಲಿ ಇಡೀ ಭಾರತದ ಅವ್ಯವಸ್ಥೆಯ ಆಗರದಂತಿದ್ದ ಅನಾರೋಗ್ಯ ಪೀಡಿತ ಸಮಾಜದ ರೂಪಕದಂತೆ ಈ ದೃಶ್ಯವು ಕಂಡು ಬರುತ್ತದೆ. ಯಥಾವತ್ತಾಗಿ ಚಿತ್ರಿಸಿರುವುದರಿಂದ ಈ ಸನ್ನಿವೇಶಕ್ಕೆ ಇಷ್ಟೊಂದು ನೈಜತೆಯೆಂಬುದು ಪ್ರಾಪ್ತವಾಗಿದೆ.

ಯಾವುದೇ ಲಾಭದಾಯಕ ಕಾರ್ಯಕ್ಕೆ ಜನ ಆ ಆಸ್ಪತ್ರೆಗೆ ಬಂದಿಲ್ಲ. ಬದಲಿಗೆ ತಮ್ಮ ಕಾಯಿಲೆಯನ್ನು ಗುಣ ಪಡಿಸಿಕೊಳ್ಳಲಿಕ್ಕಾಗಿ ಅವರು ಪಡುವ ಬವಣೆ ಎಂಥದ್ದು ಎಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. "ಗುಮಾಸ್ತನ ಅಮೃತ ಹಸ್ತದಿಂದ ತಮ್ಮ ಹೆಸರನ್ನು ನೊಂದಾಯಿಸಿಕೊಂಡು" ಎಂಬಲ್ಲಿ ಮೇಲಾಧಿಕಾರಿಗಳ ಗತ್ತು ಗೈರತ್ತುಗಳ ಪರಿಚಯ ಮಾಡಿಕೊಳ್ಳಬಹುದು. ಇದು ಕೇವಲ ಕತೆಯಲ್ಲಿನ ಒಂದು ಸನ್ನಿವೇಶವಲ್ಲ. ಬದಲಿಗೆ ಇಂದಿನ ಸರ್ಕಾರಿ ಕಚೇರಿಗಳಲ್ಲಿನ ಸಾಮಾನ್ಯ ಸನ್ನಿವೇಶವೆಂಬುದು ಸತ್ಯ.

ಇಂತಹ ಅವ್ಯವಸ್ಥೆಗಳ ಗೂಡಾಗಿ ಆ ಆಸ್ಪತ್ರೆಯೇ ನೈತಿಕ ಅಧಃಪತನದಲ್ಲಿತ್ತು ಎಂಬುದು ಈ ಸಾಲುಗಳಿಂದ ತಿಳಿದು ಬರುತ್ತದೆ. ಅಲ್ಲಿಗೆ ಬಂದಂತಹ ರೋಗಿಗಳು ಮೇಲಾಧಿಕಾರಿಗಳನ್ನು ಸರ್ವ ವಿಧದಲ್ಲಿಯೂ ಸೆಳೆಯವಲ್ಲಿ ಎಂಬಂತೆ ಅಸಹಾಯಕ ಪರಿಸ್ಥಿತಿಯಲ್ಲಿ ಪಿಳಪಿಳನೆ ಕಣ್ಣು

ಬಿಡುತ್ತಾ ವೈದ್ಯಾಧಿಕಾರಿಗಳತ್ತ ನೋಡುತ್ತಿದ್ದ ನೋಟವಂತೂ ಸಾಕ್ಷಾತ್ ಬಡ ಜನತೆಯ ಅಸಹಾಯಕತೆಯ ತುಟ್ಟ ತುದಿಯ ಸ್ಥಿತಿಯನ್ನು ವೇದ್ಯಗೊಳಿಸುತ್ತದೆ.

ಆ ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದ ಜನ ತಾವು ಬಂದಿದ್ದೇತಕ್ಕೆಂದು ಮರೆತು ಕಾಯಿಲೆಯ ಆಯಾಸದಿಂದ ಮೂಲೆ ಮೂಲೆಯಲ್ಲಿ ನರಳುತ್ತಾ ಮಲಗಿರುತ್ತಿದ್ದರೆಂಬುವಲ್ಲಿಗೆ ಇಡೀ ಆಸ್ಪತ್ರೆಯ ಅವ್ಯವಸ್ಥೆ ಮತ್ತು ಜನರ ಅಸಹಾಯಕತೆ ಬಡರೋಗಿಗಳ ದುಃಸ್ಥಿತಿಯ ಪರಿಚಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಕತೆಯ ಆರಂಭಿಕ ಸಾಲುಗಳೇ ಇಂದಿನ ಘಟನೆಯ ಸೂಕ್ಷ್ಮವನ್ನು ವಿವರಿಸುತ್ತದೆ.

ಈ ಆಸ್ಪತ್ರೆಗೆ ಸ್ವಲ್ಪ ಹಣವಂತರು ಬಂದಾಗ ದೊರೆಯುವ ಸ್ವಾಗತಕ್ಕೂ ಬಡ ಜನತೆಗೆ ಸಿಗುವ ಗೌರವಕ್ಕೂ ನಡುವೆ ಇರುವ ಅಂತರವನ್ನು ಸಹ ಇಲ್ಲಿ ಕಾಣಬಹುದಾಗಿದೆ.

ಇಂತಹ ಹಲವು ಅವ್ಯವಸ್ಥೆಗಳಿಂದ ಕೂಡಿದ ಸರ್ಕಾರಿ ಆಸ್ಪತ್ರೆಗೆ ಬಳ್ಳಕರೆ ಎಂಬ ಹಳ್ಳಿಯಿಂದ ಹೊತ್ತು ಮೂಡುವುದಕ್ಕೂ ಮೊದಲೇ ಮನೆಯಿಂದ ಹೊರಟ ಹಳ್ಳಿಯ ಹೈದ ಗಾಂಧಿ ಮತ್ತು ಆತನ ತಾಯಿ ಆಸ್ಪತ್ರೆಯಲ್ಲಿ ರೋಗಿಗಳ ಸಾಲಿನಲ್ಲಿ ಕೊನೆಯವರಾಗಿ ಒಂದು ಮೂಲೆಯಲ್ಲಿ ಬಿದ್ದುಕೊಂಡಿದ್ದರು ಎಂಬುದು ಏನೂ ಅರಿಯದ ಅವರಲ್ಲಿನ ಮುಗ್ಧತೆಗೆ ಸಾಕ್ಷಿಯಾಗುತ್ತದೆ.

ಸರತಿಯ ಸಾಲಿನಲ್ಲಿ ಕಾದು ನಿಂತು ನಿಂತು ಸುಸ್ತಾದ ಗಾಂಧಿ ಏನಾದರೂ ಮಾಡಿ ವೈದ್ಯರನ್ನು ಕಾಣಲೇಬೇಕೆಂದು ಕಾದು ಕಾದು ಕಡೆಗೆ ಜನರ ಮಧ್ಯದಲ್ಲಿ ಜಾಗ ಮಾಡಿಕೊಂಡು ಒಳನುಗ್ಗಿ ಡಾಕ್ಟರ್ ಮುಂದೆ ನಿಂತು 'ನನ್ನನ್ನು ನೋಡಿ' ಎಂದು ಕೇಳಿಕೊಳ್ಳುವಲ್ಲಿ ಆತನ ಕಾಯಿಲೆಯ ಸ್ವರೂಪ ಮತ್ತು ಅಸಹಾಯಕತೆಯ ನಡುವೆಯೂ ಬದುಕಲೇಬೇಕೆಂಬ ಜೀವ ಚೈತನ್ಯದ ಪರಿಚಯ ನಮಗಾಗುತ್ತದೆ.

೧೫ ವರ್ಷದ ಗಾಂಧಿ ಈಗಾಗಲೇ ಬಡತನದ ಬೇಗೆಯಿಂದ ಇಂತಹ ಹಲವಾರು ಯಾತನಾಮಯ ಸಂದರ್ಭಗಳನ್ನು ಎದುರಿಸಿರುವುದರಿಂದ "ನಾನಿದ್ದರೆಷ್ಟು ಸತ್ತರೆಷ್ಟು ನಡಿಯವ್ವ ಊರಿಗೆ ಹೋಗುವ" ಎನ್ನುವ ಮಾತಿನಲ್ಲಿ ತನ್ನ ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ಬದಲಾವಣೆಗಳು ಸಹ ಸಾಧ್ಯವಿಲ್ಲ ಎಂಬ ಸತ್ಯವನ್ನು ಹುಡುಗ ಅರಿತಂತಿದೆ. ಗಾಂಧಿ ಸಾವಿನ ಬಗ್ಗೆ ಮಾತನಾಡಿದಾಗ ಮಗನನ್ನು ಉಳಿಸಿಕೊಳ್ಳಲೇಬೇಕೆಂಬ ತಾಯಿಯ ಬಯಕೆ ಬಡತನದ ನಡುವೆಯೂ ಅರಳಿನಿಂತ ಮಮತೆಗೆ ಸಾಕ್ಷಿಯಾಗುತ್ತಿದೆ.

ಗಾಂಧಿ ತನ್ನ ದೇಹದಲ್ಲಿರುವ ಕಾಯಿಲೆಯ ನೋವನ್ನು, ತಾಯಿಯ ಅಸಹಾಯಕತೆಯನ್ನು ಮತ್ತು ತಮಗಾಗುತ್ತಿರುವ ಅವಮಾನವನ್ನು ಇನ್ನು ಸಹಿಸಲಾಗದು ಎಂದು

ಮನನೊಂದು ಸಾಲಿನಲ್ಲಿ ಮುಂದೆ ನುಗ್ಗಿ ಬರುವ ಪರಿಯಂತೂ ಎಲ್ಲ ವೈರುಧ್ಯಗಳನ್ನು ಮೆಟ್ಟಿ ನಿಲ್ಲುವ ದಾಷ್ಟ್ಯದ ಪರಿಚಯವಿದೆ. ಕಾಯಿಲೆಯಿಂದ ತೂರಾಡುತ್ತಲೇ ಎದ್ದ ಮಗನನ್ನು ತಾಯಿ ಹಿಡಿದುಕೊಳ್ಳುತ್ತಾಳೆ. ಕೊಸರಿಕೊಂಡು ಗಾಂಧಿ ಮುಂದೆ ನಡೆದು ಡಾಕ್ಟರ್ ಬಳಿ ಬಂದು ನಿಂತು ದೀನವಾಗಿ ತನ್ನನ್ನು ನೋಡುವಂತೆ ಬೇಡಿಕೊಳ್ಳುತ್ತಾನೆ.

ಗಾಂಧಿಯ ಸ್ವರೂಪವನ್ನು ಚಿತ್ರಿಸುತ್ತಾ ಲೇಖಕರು ಕೊಡುವ ವಿವರಣೆ "ಸುಮಾರು ಎತ್ತರದ ನರವೇತಲ ಅಗಲ ಕಿವಿಗಳ ಹೊಟ್ಟೆ ಡುಮ್ಮಣ್ಣನೊಬ್ಬ ಬಂದು ನಿಂತ ವೈಧ್ಯಾಧಿಕಾರಿಗಳ ಎದುರಿನಲ್ಲಿ" ಎನ್ನುವಲ್ಲಿ ಗಾಂಧಿಯ ಕಾಯಿಲೆಯು ಸ್ಪಷ್ಟ ಗೋಚರವಾಗುತ್ತದೆ.

'ನನ್ನೊಸಿ ನೋಡಿಸಾ" ಎಂಬಲ್ಲಿ ದಯನೀಯ ಸ್ಥಿತಿಯಲ್ಲಿರುವ ಗಾಂಧಿಯ ಪರಿಸ್ಥಿತಿ ತಿಳಿಯುತ್ತದೆ. "ವಸೀ ಏನೋ ಚನ್ನಾಗೇ ನೋಡ್ದೆ" ಎಂದು ಹಾಸ್ಯ ಮಾಡುವ ಡಾಕ್ಟರ್ ಎದುರಿನಲ್ಲಿಯೂ ಸಹ ದೀನವಾಗಿಯೇ ಬೇಡಿಕೊಳ್ಳುವ ಗಾಂಧಿ ಹಾಸ್ಯದ ಸರಕಾಗಿ ಪರಿಣಮಿಸಿ ವೈದ್ಯನ ಕುಚೋದ್ಯಕ್ಕೆ ಗುರಿಯಾಗಿ ಅವಮಾನಿತನಾಗಬೇಕಾದ ಪ್ರಸಂಗ ಎದುರಾಗುತ್ತದೆ. ಈ ಎಲ್ಲ ಘಟನೆಗಳಲ್ಲಿಯೂ ಗಾಂಧಿ ತಾಳ್ಮೆಯನ್ನು ಕಳೆದುಕೊಳ್ಳದೇ ಶಾಂತವಾಗಿಯೇ ಉತ್ತರಿಸುವ ಪ್ರಯತ್ನ ಮಾಡುತ್ತಾನೆ.

ಎಲ್ಲರ ಕುಹಕಗಳಿಗೂ ಮೂಲ ಕಾರಣವೇ 'ಗಾಂಧಿ' ಎಂಬ ಹೆಸರು. ತನ್ನ ಹೆಸರು 'ಗಾಂಧಿ' ಎಂದು ಸಾಬೀತು ಮಾಡಲಿಕ್ಕಾಗಿ ಹುಡುಗ "ನನ್ನ ಹೆಸರು ದೇವರ ಸತ್ಯವಾಗ್ಲೂ ಸಾ ಮಾಹತ್ಮಾ ಗಾಂಧಿ" ಎಂದು ದೃಢವಾದ ಸ್ವರದಲ್ಲಿ ಆತ್ಮ ವಿಶ್ವಾಸದ ಠೀವಿಯಲ್ಲಿ ಹೇಳುತ್ತಾನೆ. ಆ ಮೂಲಕ ಮಾಹಾತ್ಮನ ಗೌರವದ ಸಂಪೂರ್ಣ ಪರಿಚಯ ತನಗಿದೆ ಎಂಬಂಶವನ್ನು ಸಹ ಸಾಬೀತು ಮಾಡುತ್ತಾನೆ. ಮೊಮ್ಮಗನ ಹೆಸರು 'ಗಾಂಧಿ' ಎಂದು ಅತೀ ವಿನಯದಿಂದಲೇ ಭಿನ್ನವಿಸುವ ಪ್ರಯತ್ನ ಮಾಡುತ್ತಾನೆ ಕರಿಸಿದ್ದೇಗೌಡ.

ಈ ಮಾತಿನಿಂದ ಆಶ್ಚರ್ಯಗೊಂಡ ವೈದ್ಯಾಧಿಕಾರಿ ಇದನ್ನು ನಂಬಲಾರದವನಂತೆ ತನ್ನ ಸಹದ್ಯೋಗಿಗಳು ಇದರಲ್ಲಿ ಸಾಕ್ಷಿಗಳಾಗಿ ಪಾಲ್ಗೊಳ್ಳಲೆಂದು ಅವರನ್ನೆಲ್ಲ ಕೂಗಿ ಕರೆದು ಗಾಂಧಿಯ ಪರಿಚಯ ಮಾಡಿಸುತ್ತಾನೆ. ಬಂದವರೆಲ್ಲ ಗಾಂಧಿಯ ಹೆಸರನ್ನು ಕೇಳಿ ಕುಹಕದಿಂದ ನಗುವವರೇ ಹೊರತು ಸತ್ಯವೆಂದು ನಂಬಿ ಗಾಂಧಿಯ ಹೆಸರಿಗೆ ಗೌರವ ಸೂಚಿಸುವವರಲ್ಲ. ಈ ಘಟನೆಯಿಂದ ಗಾಂಧಿಗೆ ಇನ್ನೂ ಅವಮಾನವಾಗುತ್ತದೆ.

ವೈದ್ಯಾಧಿಕಾರಿ ತನ್ನ ಸಹೋದ್ಯೋಗಿಗಳ ಮುಂದೆ ಹುಡುಗನಿಗೆ ಗಾಂಧಿ ಪೋಟೋ ತೋರಿಸಿ ಇವರಾರು ಎಂದು ಕೇಳುತ್ತಾನೆ. ಅದಕ್ಕೆ ಹುಡುಗ ಅಭಿಮಾನದಿಂದಲೇ 'ಮಹಾತ್ಮ ಗಾಂಧಿ' ಎಂದು ಹೇಳುತ್ತಾನೆ. ಆಗ ಎಲ್ಲರೂ ಜೋರಾಗಿ ನಗಲಾರಂಭಿಸುತ್ತಾರೆ. ಜೊತೆಗೆ 'ಅವರು

ಗಾಂಧಿಯಾದರೆ ನೀ ಯಾರು' ಎಂದು ಕುಹಕದ ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ಗಾಂಧಿ ಎದುರು ಮಾತನಾಡದೆ 'ಸತ್ಯವಾಗಿಯೂ ನನ್ನ ಹೆಸರು ಗಾಂಧಿ ಸಾ' ಎಂದು ಹೇಳುತ್ತಾನೆ.

ಎಲ್ಲ ಮಾತಿಗೂ ಆಶ್ಚರ್ಯದಿಂದ ವ್ಯಂಗ್ಯವಾಗಿ ನಗುವ ಜನಗಳ ಎದುರು ಗಾಂಧಿ "ನನ್ನ ಕಾಯಿಲೆ ನೋಡಿ ಸಾ ನನ್ನ ಹಣೆ ಬರಹ" ಎಂದು ಸೋತ ದನಿಯಲ್ಲಿ ಹೇಳುವಲ್ಲಿಯೇ ಜೀವನದಲ್ಲಿ ಸೋತ ಮನೋಭಾವ ಆ ಮಗುವಿನಲ್ಲಿ ಹೇಗೆ ಬೆರತು ಹೋಗಿದೆ ಎಂಬುದರ ಪರಿಚಯವಾಗುತ್ತದೆ. ವೈದ್ಯಾಧಿಕಾರಿ 'ನಿನಗೆ ಯಾರು ಈ ಹೆಸರನ್ನು ಕಟ್ಟಿದೋರು' ಎಂದು ಪ್ರಶ್ನಿಸುತ್ತಾನೆ. ಅದಕ್ಕೂ ಕೂಡ ಗಾಂಧಿ ಯಾವುದೇ ವಿರೋಧದ ಮಾತಿಲ್ಲದೆ' ನಮ್ಮ ಅಯ್ಯ ಕರಿಸಿದ್ದೇಗೌಡ ಅಂತವ್ನೆ" ಅವನಿಟ್ಟ ಹೆಸರು ಎಂದು ವಿನೀತನಾಗಿ ಹೇಳುತ್ತಾನೆ.

ನಂತರ ಹುಡುಗನ ಕಾಯಿಲೆಯ ಬಗ್ಗೆ ಕನಿಕರಗೊಂಡ ವೈದ್ಯ ಆತನನ್ನು ಪರೀಕ್ಷಿಸಿ 'ಹೊಟ್ಟೆಯಲ್ಲಿ ನೀರು ತುಂಬಿದೆ. ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆ ಇದು. ಔಷದ ಬರೆದು ಕೊಡ್ತಿನಿ. ತಂದುಕೊಡಿ' ಎಂದು ಹೇಳಿ ತನ್ನ ಬಳಿಯಿದ್ದ ಗುಳಿಗೆಗಳನ್ನು ನುಂಗಿಸಿ ಕಳುಹಿಸುತ್ತಾನೆ. ಜೊತೆಗೆ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಯಾದ್ದರಿಂದ ಬೇರೆ ದೊಡ್ಡ ಆಸ್ಪತ್ರೆಯಲ್ಲಿ ತೋರಿಸಬೇಕೆಂದು ವೈದ್ಯಕೀಯ ವರದಿಯೊಂದಿಗೆ ತಾನು ಮಾಡಿದ ಚಿಕಿತ್ಸೆಯ ವಿವರಗಳೊಂದಿಗೆ ಒಂದು ಪತ್ರವನ್ನು ಬರೆದುಕೊಟ್ಟು ದೊಡ್ಡ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ 'ನಾನು ಬರೆದುಕೊಟ್ಟ ಪತ್ರವನ್ನು ತೋರಿಸಿ ಚಿಕಿತ್ಸೆಯನ್ನು ಕೊಡುತ್ತಾರೆ' ಎಂದು ಭರವಸೆಯನ್ನು ಕೊಟ್ಟು ಪತ್ರ ಬರೆದುಕೊಟ್ಟು ಅವರನ್ನು ಅಲ್ಲಿಂದ ಕಳುಹಿಸಿ ಕೊಡುತ್ತಾನೆ.

ಮೊಮ್ಮಗನ ತೀವ್ರ ಸ್ವರೂಪದ ಕಾಯಿಲೆಯ ವಿಚಾರವನ್ನು ತಿಳಿದು ಕರಿಸಿದ್ದೇಗೌಡ ತನ್ನ ವಂಶದ ಕುಡಿ ಗಾಂಧಿಯನ್ನು ಉಳಿಸುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಾನೆ. ಗಂಡನನ್ನು ಕಳೆದುಕೊಂಡ ಮಗಳು ನಿಂಗಮ್ಮ ಆಕೆಯ ಮಕ್ಕಳು ಪದ್ದಿ ಮತ್ತು ಗಾಂಧಿ. ಪದ್ದಿ ಹೆಣ್ಣುಮಗಳು ಬೇರೆ ಮನೆಗೆ ಹೋಗಬೇಕಾದವಳು. ಆದರೆ ಗಾಂಧಿ ಮುಪ್ಪಿನ ಕಾಲದಲ್ಲಿ ಆಸರೆಯಾಗಿ ನಿಲ್ಲಬಲ್ಲವನೆಂಬ ಒಂದೇ ಒಂದು ಆಸೆಯಿಂದ ಮುದುಕ ಕರಿಸಿದ್ದೇಗೌಡ ಆತನ ಮೇಲೆ ಹಲವು ಭರವಸೆಗಳನ್ನು ಇಟ್ಟುಕೊಂಡಿರುತ್ತಾನೆ.

ಅಗಲವಾದ ಕಿವಿಯ ಮಗುವನ್ನು ಕಂಡು ಅದೃಷ್ಟದ ಕೂಸೆಂದು ಜೋಯಿಸರ ಬಳಿ ಹೋಗಿ ಜಾತಕ ಕೇಳಿಸಿ ಹೆಸರನ್ನು ಇಡುವಾಗ ಜೋಯಿಸರು 'ಅಗಲ ಕಿವಿಯ ಹುಡುಗ, ಗಾಂಧಿ ಕಿವಿಗಳನ್ನು ಪಡೆದೇ ಹುಟ್ಟಿದ್ದಾನೆ. ಅದೃಷ್ಟವಂತ: ಆದ್ದರಿಂದ ಮಹಾತ್ಮ ಗಾಂಧಿ ಎಂದು ನಾಮಕರಣ ಮಾಡಿ' ಎಂದು ಹೇಳಿ ಕಳುಹಿಸುತ್ತಾನೆ.

ಹಲವು ವರ್ಷಗಳ ಹಿಂದೆ ಶಿವಪುರಕ್ಕೆ ಹೋದಾಗ ಗಾಂಧಿಜಿಯ ದರ್ಶನ ಪಡೆದಿದ್ದ ಕರಿಸಿದ್ದೇಗೌಡ ಅಂತಹ ಮಹಾತ್ಮನ ಹೆಸರನ್ನು ತನ್ನ ಮೊಮ್ಮಗನಿಗೆ ಇಡುವುದರಿಂದ ಶ್ರೇಯಸ್ಸೆಂದೇ ತಿಳಿದು ಆತನಿಗೆ ಗಾಂಧಿ ಎಂದು ನಾಮಕರಣ ಮಾಡುತ್ತಾನೆ. ಅಲ್ಲದೆ ಆತ ತೀರಾ ಮುಗ್ಧ ಮತ್ತೆ ಗಾಂಧೀಜಿಯವರೇ ನಿನ್ನ ಮಗಳ ಗರ್ಭದಲ್ಲಿ ಜನಿಸಿದ್ದಾರೆ" ಎಂಬ ಮಾತನ್ನು ಜೋಯಿಸರು ಹೇಳಿದ್ದರೂ ನಂಬಿಬಿಡುವ ಮುಗ್ಧ ಕರಿಸಿದ್ದೇಗೌಡ ಗಾಂಧಿ ಎಂಬ ಹೆಸರನ್ನೇ ಇಟ್ಟದ್ದು ಆಶ್ಚರ್ಯವೇನೂ ಅಲ್ಲ ಅಂತಹ ಮುಗ್ಧ ಮುದುಕ ಕರಿಸಿದ್ದೇಗೌಡ.

ಈಗ ಕಾಯಿಲೆಯಾಗಿರುವ ಮೊಮ್ಮಗನನ್ನು ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಅಂದಾಗ ಒಂದು ಕ್ಷಣ ಗಾಬರಿಯಾದ ಏಕೆಂದರೆ ದೊಡ್ಡ ಆಸ್ಪತ್ರೆಯ ಸಹವಾಸವೆಂದರೆ ಸಾವು ಕಟ್ಟಿಟ್ಟ ಬುತ್ತಿ ಎಂಬುದು ಆತನ ಬಡತನದ ಪರಿಸ್ಥಿತಿ. ಅವನಿಗೆ ಕಲಿಸಿಕೊಟ್ಟಿರುವ ಜೀವನ ಪಾಠವೆಂದರೆ ತಪ್ಪಿಲ್ಲ. ಆದರೂ ಸಹ ಮುದುಕ ತನ್ನ ಪ್ರಯತ್ನವನ್ನು ನಿಲ್ಲಿಸುವುದಿಲ್ಲ ಬದಲಿಗೆ ಏನಾದರೂ ಸರಿಯೇ ಮೊಮ್ಮಗನನ್ನು ಉಳಿಸಿಕೊಳ್ಳಬೇಕೆಂದು ತನ್ನ ಪ್ರಯತ್ನವನ್ನು ಮುಂದುವರಿಸುತ್ತಾನೆ.

ದೊಡ್ಡ ಆಸ್ಪತ್ರೆಯಲ್ಲಿಯೂ ಸಹ ಗಾಂಧಿಯ ಹೆಸರನ್ನು ನೋಡಿದ. ಅಲ್ಲಿಯ ಗುಮಾಸ್ತ ಡಾಕ್ಟರ್ ಹುಡುಗನ ಹೆಸರನ್ನು ತಪ್ಪಾಗಿ ಬರೆದಿದ್ದಾನೆ 'ಇವನ ಹೆಸರು ಮಾಹಾಂತಗೌಡ ಅಲ್ವಾ' ಎಂದು ಕೇಳುತ್ತಾನೆ. ಆಗ ಮುದುಕ ಇಲ್ಲ ಸ್ವಾಮಿ ಮಹಾತ್ಮಗಾಂಧಿ ಎಂದೇ ಅವನ ಹೆಸರು ಎಂದು ದೃಢಪಡಿಸಬೇಕಾಗುತ್ತದೆ.

ಮತ್ತೆ ಅಲ್ಲಿಂದ ಕುಹಕದ ಸರಣಿ ಮುಂದುವರಿಯುತ್ತದೆ. ಆಶ್ಚರ್ಯ ತುಂಬಿದ ನಗೆಪಾಟಲಿನ ಮಾತುಗಳನ್ನು ಇಲ್ಲಿಯೂ ಕೂಡ ಎದುರಿಸಬೇಕಾದ ಪರಿಸ್ಥಿತಿ ಬಂದೊದಗುತ್ತದೆ. ಈ ಎಲ್ಲದರ ನಡುವೆ "ಯಾರಪ್ಪ ಮಹಾತ್ಮ ಗಾಂಧಿ" ಎಂಬ ಕುಚೋದ್ಯದ ಮಾತುಗಳು ಮತ್ತೆ ಮತ್ತೆ ಚುಚ್ಚಲಾರಂಭಿಸುತ್ತವೆ.

ಹೆಸರು ಮಾತ್ರ ಗಾಂದಿ. ಆದರೆ ಗಾಂಧಿ ಎಂಬ ಹುಡುಗನ ಕಾಯಿಲೆ ಬಿದ್ದ ಕೃಶಕಾಯವನ್ನು ನೋಡಿ ಗಾಂಧಿಯ ಅವತಾರವನ್ನು ಕಂಡು ನಗಬೇಕೋ ಅಳಬೇಕೋ ಅರಿಯದೇ ಒಂದು ರೀತಿಯ ಸಂದಿಗ್ಧತೆಯಲ್ಲಿಯೇ ವ್ಯಂಗ್ಯ ತುಂಬಿದ ನೋಟದಲ್ಲಿಯೇ ಡಾಕ್ಟರ್ ಗಾಂಧಿಯನ್ನು ಪರೀಕ್ಷಿಸಿ ನೋಡುತ್ತಾರೆ.

ಹೃದಯ ಮತ್ತು ಮೂತ್ರಪಿಂಡಗಳ ಕಾಯಿಲೆಯನ್ನು ಹೇಳಿ 'ಔಷಧಿಗಳನ್ನು ಬರೆದುಕೊಡ್ತೇನೆ ಕೊಡಿಸು' ಎಂದು ಡಾಕ್ಟರ ಭರವಸೆಯನ್ನೇನೋ ಕೊಡ್ತಾರೆ. ಆದರೆ ಅದನ್ನು ಕೇಳಿದ ಮುದುಕನಿಗೆ ಮಾತ್ರ ಪ್ರಾಣಸಂಕಟ ಶುರುವಾಗುತ್ತದೆ. ತನ್ನ ಬಡತನವನ್ನು ನೆನೆದು

ಮುದುಡಿ ಅಸಹಾಯಕನಾಗಿ "ನಿಂ ದಮಯ್ಯ ಏನೋ ನನ್ ಮೊಮ್ಮಗನ್ ಉಳ್ಸಿಕೊಡಿ ಒಂದು ನಾಲ್ಕು ದಿನ ಇಲ್ಲೆ ಇಟ್ಕೊಂಡು ಗುಣ ಮಾಡಿ ಕಳ್ಸಿ ಅಂತ ಕಾಲಿಗೆ ಬಿದ್ದು ಬೇಡ್ಕೋತಾನೆ. ಇದರಿಂದ ಮನ ಕರಗಿದ ಡಾಕ್ಟರ್ ಗಂಡಸರ ವಾರ್ಡಿನಲ್ಲಿ ಗಾಂಧಿಯನ್ನು ಇನ್‌ಪೇಷೆಂಟಾಗಿ ಅಡ್ಮಿಟ್ ಮಾಡಿಕೊಳ್ತಾರೆ. ೩೦ ಜನರ ವಾರ್ಡಿನಲ್ಲಿ ಗಾಂಧಿಯನ್ನು ೬೦ ಜನರಿರುವಲ್ಲಿ ಗಾಂಧಿಗೆ ಒಂದು ಹಾಸಿಗೆಯನ್ನು ಕೊಟ್ಟು ನೆಲದ ಮೇಲೆ ಬೆಡ್ಡನ್ನು ನಿಗದಿಗೊಳಿಸಿಕೊಡುತ್ತಾರೆ.

ಇಲ್ಲಿ ಗಮನಿಸಬೇಕಾದ ಒಂದು ವಿಚಾರವೆಂದರೆ ಪ್ರಸ್ತುತ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಅವ್ಯವಸ್ಥೆ ಮತ್ತು ಇಂದಿನ ಜನ ಸಂಖ್ಯೆ ಹೆಚ್ಚಳದಿಂದ ಉಂಟಾಗಿರುವ ಹಲವು ಸಮಸ್ಯೆಗಳಲ್ಲಿ ಇದೂ ಕೂಡ ಒಂದು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಗಾಂಧಿಯನ್ನು ಅಡ್ಮಿಟ್ ಮಾಡಿಯಾದ ಬಳಿಕ ಅವನಿಗೆ ನಿತ್ಯವೂ ಊಟ-ಉಪಚಾರ ಔಷಧಿಗೆಂದು ತಂದಿದ್ದ ಹಣವೆಲ್ಲ ಖರ್ಚಾದ ಬಳಿಕ ಮುದುಕ ಕರಿಸಿದ್ದೇಗೌಡ ತನ್ನ ಮಗಳು ನಿಂಗಮ್ಮ ಮತ್ತು ಮೊಮ್ಮಗಳು ಪದ್ದಿಯ ಕಿವಿಯಲ್ಲಿನ ಒಡವೆಗಳನ್ನು ಕೇಳಿ ಪಡೆದು ಅಡವಿಟ್ಟು ಔಷಧಿ ತರುವ ಪ್ರಯತ್ನದಲ್ಲಿದ್ದಾಗ ಗಾಂಧಿಯು ಈ ಸನ್ನಿವೇಶವನ್ನು ಕಂಡು ತನ್ನ ನೋವಿನಲ್ಲಿಯೂ ಕೂಡ "ಅಯ್ಯ ನನ್ನ ಊರಿಗೆ ಕರ್ಕೊಂಡ್ ನಡಿ ನನ್ನ ಹಣೆ ಬರಹ ಇದ್ದಂಗಾಯ್ತದೆ" ಇಲ್ಲಿ ಗಾಂಧಿ ತಾನು ಸತ್ತರೂ ಸರಿಯೇ ಮನೆಯ ಜನರ ಸಂಕಟ ನೋಡಲಾಗದು ಎಂಬ ಉದಾರತೆಯನ್ನು ತೋರಿಸುತ್ತಾನೆ.

ಸಾಯುತ್ತೇನೆಂದು ಹೇಳುವ ಮೊಮ್ಮಗನಿಗೆ ಮುದುಕ ಸಮಾಧಾನ ಹೇಳಿ "ನಾನಿನ್ನು ಬದುಕಿವ್ನಿ ಕಲಮಗ ನಿನ್ನ ಉಳಿಸಿಕೋತಿನಿ" ಅಂತ ಭರವಸೆಕೊಟ್ಟು ಅಲ್ಲಿಂದ ಹೊರಟು ಹೋಗುತ್ತಾನೆ. ಹೋಗುವ ಮುನ್ನ ಗಾಂಧಿ ತನ್ನ ತಾತನಿಗೆ "ಅಯ್ಯ ನಾನು ಸತ್ತೋದ್ರ ನನ್ನ ನಮ್ಮ ಹಲಸಿನ ಮರದ ಬುಡದಲ್ಲೇ ಹಾಕಬೇಕು" ಎಂದು ಹೇಳುವಲ್ಲಿ ಹುಡುಗ ತನ್ನ ಸಾವಿನ ಬಗ್ಗೆ ಅರಿತಿರುವ ಸತ್ಯದ ಕುರುಹು ಕಾಣದೇ ಇರದು. ಈ ಮಾತನ್ನು ಕೇಳಿದ ಅವನ ತಾಯಿ ಮತ್ತು ತಂಗಿ ಬಿಕ್ಕಿ ಬಿಕ್ಕಿ ಅಳುತ್ತಾರೆ ತಾತ ಕೂಡ ನೋವಿನಿಂದಲೇ ಎದ್ದು ಹೊರಡುತ್ತಾನೆ.

ಕಿವಿಯೋಲೆಯನ್ನು ಮಾರಲು ಊರಿಗೆ ಬಂದ ಮುದುಕ ಯಾರು ಅದನ್ನು ಅಡವಿಟ್ಟುಕೊಳ್ಳಲು ಮುಂದಾಗದೇ ಇದ್ದಾಗ ತನ್ನ ಹೊಲದಲ್ಲಿನ ಹಲಸಿನ ಮರಗಳನ್ನು ಮಾರಬೇಕೆಂಬ ನಿಶ್ಚಯಕ್ಕೆ ಬಂದು ಅದನ್ನು ಮಾರಿ ಹಣವನ್ನು ಹೊಂದಿಸಿಕೊಂಡು ಬರುವ ವೇಳೆಗೆ ಎರಡು ಮೂರು ದಿನಗಳು ಕಳೆಯುತ್ತವೆ. ಹಲಸಿನ ಮರಗಳನ್ನು ಮಾರಿ ಬಂದ ಹಣವನ್ನು ಕೈಲಿಡಿದು ಬರುವ ಮುದುಕನಿಗೆ ಆಸ್ಪತ್ರೆಯ ಗೇಟಿನಲ್ಲೇ ಬಿಕ್ಕಳಿಸುತ್ತಾ ನಿಂತಿರುವ ಮಗಳನ್ನು ಕಂಡು 'ಗಾಂಧಿ ಎಲ್ಲಿ' ಎಂದು ಕೇಳುವುದಕ್ಕೆ ಬದಲಾಗಿ 'ಯಾವಾಗ ಪ್ರಾಣ' ಹೋಯ್ತು ಎಂದು ಕೇಳುವಲ್ಲಿಯೇ ಕತೆಯ ಮಾರ್ಮಿಕತೆ ಅರಿವಿಗೆ ಬರುತ್ತದೆ.

ಸತ್ತ ಗಾಂಧಿಯ ಹೆಣವನ್ನು ಶವಾಗಾರದಲ್ಲಿಟ್ಟಿರುತ್ತಾರೆ. ಅದನ್ನು ಪಡೆಯಲು ದೊಡ್ಡ ಸಾಹೇಬರ ಅಪ್ಪಣೆಗಾಗಿ ಅವರ ರೂಮಿನ ಕಡೆ ಹೆಜ್ಜೆ ಹಾಕಿದ ಎಂಬಲ್ಲಿ ಅಧಿಕಾರಶಾಹಿಗಳು ಹೇಗೆ ಸಾವು ನೋವುಗಳನ್ನು ಸಹ ತಮ್ಮ ಹಿಡಿತದಲ್ಲಿಟ್ಟುಕೊಂಡು ಆಡಳಿತದ ಚುಕ್ಕಾಣಿಯನ್ನು ನಿಯಂತ್ರಿಸುತ್ತಾರೆ ಎಂಬ ಸಂದೇಶವಿದೆ. ಈ ಕತೆಯು ಮುದುಕ ತನ್ನ ಮೊಮ್ಮಗನ ಹೆಣವನ್ನು ಪಡೆಯಲು ಸಾಹೇಬರ ಅಪ್ಪಣೆಗಾಗಿ ಅವರ ಬಳಿಹೋದ ಎಂಬಲ್ಲಿಗೆ ಮುಗಿಯುತ್ತದೆ.

ಕತೆಯ ಆರಂಭದಿಂದ ಅಂತ್ಯದವರೆಗೂ ಅಧಿಕಾರ ವರ್ಗದ ಭ್ರಷ್ಟಾಚಾರ ಮತ್ತು ಕೊಳೆತು ನಾರುತ್ತಿರುವ ವ್ಯವಸ್ಥೆಯಲ್ಲಿನ ಹುಳಕುಗಳ ಮೇಲೆ ಬೆಳಕು ಚೆಲ್ಲುತ್ತದೆ. "ಗಾಂಧಿ" ಎಂಬ ಹೆಸರನ್ನು ಇಟ್ಟುಕೊಂಡಿದ್ದರಿಂದಲೇ ಸಮಾಜದಲ್ಲಿ ಎದುರಿಸಬೇಕಾದ ಅವಮಾನಗಳ ಸರಣಿ ಮತ್ತು ಬಡತನದ ಕಾರಣದಿಂದಲೇ ಎದುರಿಸಬೇಕಾದ ಜೀವನ ಸಂಘರ್ಷಗಳ ಪರಿಚಯ ನಮಗೆ ಈ ಕತೆಯಲ್ಲಿ ಕಂಡು ಬರುತ್ತದೆ.

ಬೆಸಗರಹಳ್ಳಿ ರಾಮಣ್ಣನವರೆ ಹೇಳುವಂತೆ ಇದು ತುರ್ತು ಪರಿಸ್ಥಿತಿಯ ಸಮಯದಲ್ಲಿ ರೂಪ ಪಡೆದ ಕತೆಯಾದ್ದರಿಂದ ಅಂದಿನ ರಾಜಕೀಯ ಪರಿಸ್ಥಿತಿಯನ್ನು ವ್ಯಂಗ್ಯವಾದ ರೂಪಕಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಗಾಂಧಿ ಸಾವು ಸಂಭವಿಸುವುದೇ "ರಾತ್ರಿ ಸರ್ರೋತ್ತಿನಲ್ಲಿ" ಅಂದರೆ ಗಾಂಧಿ ಚಿಂತನೆಗಳು ಇದ್ದವು ಎಂಬುದನ್ನೇ ಅರಿಯದ ಜನ ಅವು ನಮ್ಮಿಂದ ದೂರವಾದಾಗಲೂ ಸಹ ಮೈಮರೆತು ಮಲಗಿದ್ದರೆಂಬ ಸೂಕ್ಷ್ಮ ಸಂದೇಶ ಇಲ್ಲಿದೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಯಾವ ಚಿಂತನೆಗಳಿಗೂ ಅವಕಾಶವನ್ನೇ ಕೊಡದೇ ಸರ್ಕಾರ ತೆಗೆದುಕೊಂಡ ತೀರ್ಮಾನಗಳು ಹೇಗೆ ಅಸಹಜ ಮತ್ತು ಅಮಾನವೀಯವಾಗಿದ್ದವು. ಆದ್ದರಿಂದ ದೇಶದ ನೈತಿಕ ಆದರ್ಶ ಮೌಲ್ಯಗಳು ಹೇಗೆ ಛಿದ್ರಗೊಂಡವು ಎಂಬುದನ್ನು ಈ ಕತೆಯಲ್ಲಿ ಗಾಂಧಿಯ ಸಾವಿನ ರೂಪಕದಲ್ಲಿ ಹೇಳಲಾಗಿದೆ.

ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳು ಸಹ ಅವ್ಯವಸ್ಥೆಯಿಂದ ಕೂಡಿದ ಸಮಾಜದಲ್ಲಿ ಅಧಿಕಾರದ ಸ್ಥಾನದಲ್ಲಿರುವ ಜನರ ನಡಾವಳಿಗಳನ್ನು ಪ್ರತಿನಿಧಿಸುತ್ತವೆ. ಅಂತೆಯೇ ಬಡಜನರ ಬದುಕಿನ ಬವಣೆಗೆ ಸ್ಪಂದಿಸಲಾರದ ಸರ್ಕಾರದ ಅವ್ಯವಸ್ಥೆಯು ಕೂಡ ಇಲ್ಲಿ ಗೋಚರವಾಗುತ್ತದೆ.

೩೦ ಜನರ ಬೆಡ್ ಇರುವ ವಾರ್ಡಿನಲ್ಲಿ ೬೦ ಜನರಿರುವ ವಾರ್ಡಿಗೆ ಗಾಂಧಿಯನ್ನು ಅಡ್ಮಿಟ್ ಮಾಡಲಾಯ್ತು ಎಂಬ ಮಾತಿನಲ್ಲಿಯೇ ಸರ್ಕಾರ ಜನ ಸಂಖ್ಯಾ ನಿಯಂತ್ರಣಕ್ಕಾಗಿ ಕೈಗೊಂಡ ಕಾರ್ಯ ನೀತಿ ಜನರನ್ನು ಆಕ್ರೋಶಕ್ಕೆ ಈಡು ಮಾಡಿತು. ಆದರೆ ಸರ್ಕಾರಿ ಆಸ್ಪತ್ರೆಯ ಈ ಚಿತ್ರಣವು ಅದರ ಅಗತ್ಯಕ್ಕೆ ಹಿಡಿದ ಕೈಗನ್ನಡಿಯೇ ಎಂಬಂತೆ ಕಾಣಿಸಿದರೆ

ಅತಿಶಯೋಕ್ತಿಯೇನಿಲ್ಲ ಆದರೂ ಸರ್ಕಾರದ ನೀತಿ ಸರಿಯಾಗಿಯೇ ಇದ್ದರೂ ಅದನ್ನು ಜಾರಿಗೊಳಿಸಿದ ರೀತಿ ಮಾತ್ರ ಜನರನ್ನು ಆಕ್ರೋಶಕ್ಕೆ ಗುರಿಮಾಡಿತ್ತು.

ಇದರ ಪರಿಣಾಮ ಬಡ ಜನತೆಯ ಬದುಕಿನ ಮೇಲೂ ಆಯಿತೆಂಬುದು ಇತಿಹಾಸದಿಂದ ತಿಳಿದು ಬರುವ ಸತ್ಯ. ಒಟ್ಟಾರೆಯಾಗಿ ಹೇಳುವುದಾದರೆ ಗಾಂಧಿ ಎಂಬ ಹೆಸರು ಪ್ರಸ್ತುತದಲ್ಲಿ ಹೇಗೆ ಅವಗಣನೆಗೆ ಗುರಿಯಾಗುತ್ತಿದೆಯೋ ಹಾಗೆಯೇ ಆತನ ಚಿಂತನೆಗಳನ್ನು ಸಹ ಗಂಭೀರವಾಗಿ ಪರಿಗಣಿಸುವ ಕಾರ್ಯಗಳು ನಡೆಯುತ್ತಿಲ್ಲ. ಎಂಬುದರ ಕಡೆಗೆ ಬೆಳಕು ಚಲ್ಲುತ್ತಿದೆ.

ಇಲ್ಲಿ ಬರುವ ಕರಿಸಿದ್ದೇಗೌಡ ಒಂದೇ ಬಾರಿ ಗಾಂಧೀಯನ್ನು ನೋಡಿದ್ದರೂ ಆತನ ಮೇಲಿನ ಅಭಿಮಾನದಿಂದ ತನ್ನ ಮೊಮ್ಮಗನಿಗೆ ಗಾಂಧಿ ಎಂದೇ ಹೆಸರಿಡುತ್ತಾನೆ. ಈತ ಅನಕ್ಷರಸ್ತ ಅದೇ ಗಾಂಧಿ ಎಂಬ ಹೆಸರಿನ ಹುಡುಗನನ್ನು ಆತನ ಬಡತನದ ಕಾರಣವಾಗಿ ಗೇಲಿ ಮಾಡಿ ನಗುವ ವಿದ್ಯಾವಂತರ ನಡವಳಿಕೆ ಇವೆರೆಡರ ನಡುವೆ ಶಿಕ್ಷಿತ ಅಶಿಕ್ಷಿತರ ನಡುವಿನ ವ್ಯತ್ಯಾಸಗಳು ಅನಾವರಣಗೊಳ್ಳುತ್ತವೆ. ನಮ್ಮ ಶಿಕ್ಷಣ ವ್ಯವಸ್ಥೆ ಯಾವ ಆದರ್ಶ ಮೌಲ್ಯಗಳನ್ನು ಹೇಳಿಕೊಡಬೇಕಿತ್ತೋ ಅದು ಇಂದು ಕೇವಲ ದುಡಿಯುವ ಅರ್ಹತೆಯನ್ನು ಒದಗಿಸುತ್ತಿದೆ ಹೊರತು ಮಾನವೀಯ ಸಂಬಂಧಗಳ ನಡುವಿನ ಕೊಂಡಿಗಳನ್ನು ಬೆಸೆಯುವ ಯಾವ ಕೆಲಸವನ್ನು ಮಾಡುತ್ತಿಲ್ಲ ಎಂಬ ವಿಷಾದದ ಛಾಯೆಯನ್ನು ಸಹ ನಾವು ಈ ಕತೆಯ ಹಿನ್ನೆಲೆಯಲ್ಲಿ ತಿಳಿದುಕೊಳ್ಳಬಹುದಾದ ಬಹು ದೊಡ್ಡ ಅಂಶ. ಈ ಅಂಶದ ಮೇಲೆ ಬೆಳಕು ಚಲ್ಲುವ ಪ್ರಯತ್ನ ಈ ಅಧ್ಯಯನದುದ್ದಕ್ಕೂ ಮೂಡಿ ಬಂದಿದೆ. ಚಲನಚಿತ್ರದಲ್ಲಿಯೂ ಈ ಸಂದೇಶದ ನೆರಳನ್ನು ಕಾಣಬಹುದಾಗಿದೆ.

ಅಧ್ಯಾಯ–3

ಸಿನಿಮಾ ಕಥೆಯ ಆಶಯ ಮತ್ತು ಸ್ವರೂಪ

ಅಧ್ಯಾಯ-3

ಸಿನಿಮಾ ಕಥೆಯ ಆಶಯ ಮತ್ತು ಸ್ವರೂಪ

ಒಂದು ಸಿನಿಮಾ ಎಂದರೆ ಓದುವ ಸಾಹಿತ್ಯದ ದೃಶ್ಯಕಾವ್ಯ ಎಂದು ಈ ಹಿಂದಿನ ಅಧ್ಯಾಯಗಳಲ್ಲೇ ಹೇಳಿರುವಂತೆ ಸಿನಿಮಾವೊಂದು ರೂಪಗೊಳ್ಳಲು ಅದರ ಹಿಂದೆ ಹಲವು ವ್ಯಕ್ತಿಗಳ ಪರಿಶ್ರಮ ಇದ್ದೇ ಇರುತ್ತದೆ. ಅದರಲ್ಲೂ ಹಲವು ಅಭಿರುಚಿಗಳ ಜನ ಒಂದೆಡೆ ಕಲೆತು ತಮ್ಮ ತಮ್ಮ ಅಭಿಪ್ರಾಯಗಳಿಗೆ ತಕ್ಕಂತೆ ಅವರದೇ ಆದ ಆಲೋಚನೆಗಳಿಂದ ಪ್ರೇರೇರಿತರಾಗಿ ಕಾರ್ಯ ನಿರ್ವಹಿಸುವುದರಿಂದ ಇಲ್ಲಿ ಗುಂಪಿನ ಚಟುವಟಿಕೆ ಅತ್ಯಗತ್ಯವಾಗಿ ಬೇಕೆ ಬೇಕು.

ಇಂಥದ್ದೆ ಗುಂಪಿನ ಪರಿಶ್ರಮವೊಂದು 'ನಾನು ಗಾಂಧಿ' ಚಿತ್ರದಲ್ಲಿ ಕಾಣುತ್ತದೆ. ಇಲ್ಲಿನ ಚಿತ್ರತಂಡ ಹಲವು ದಿನಗಳ ಪರಿಶ್ರಮದಿಂದ ನಾನು ಗಾಂಧಿ ಎಂಬ ಮಕ್ಕಳ ಚಿತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯುವಂತೆ ಮಾಡಿದ್ದಾರೆ.

ಈ ಅಧ್ಯಾಯದಲ್ಲಿ ಚಿತ್ರಕತೆಯ ಆಶಯ ಮತ್ತು ಅದು ಕ್ಯಾಮರಾ ಕಣ್ಣಿನಲ್ಲಿ ಮೂಡಿ ಬಂದಿರುವ ಬಗೆಗಳನ್ನು ಕುರಿತು ವಿವರಣಾತ್ಮಕವಾಗಿ ತಿಳಿದುಕೊಳ್ಳಬಹುದಾಗಿದೆ. ಬೆಸಗರಹಳ್ಳಿ ರಾಮಣ್ಣನವರ ಸಣ್ಣಕತೆ 'ಗಾಂಧಿ' ಸಾಹಿತ್ಯ ಲೋಕದಲ್ಲಿ ಅದರದ್ದೇ ಆದ ಹಲವು ವಿಶೇಷತೆಗಳಿಂದಾಗಿ ಗುರುತಿಸಲ್ಪಟ್ಟ ಕತೆ. ಇದನ್ನು ನಂಜುಂಡೇಗೌಡ ಅವರು ಸಿನಿಮಾ ಮಾಡಬೇಕೆಂದು ಡಾ. ರಾಜಪ್ಪ ದಳವಾಯಿ ಅವರಿಂದ ಕತೆಯನ್ನು ಚಿತ್ರಕತೆಗೆ ಮಾರ್ಪಡಿಸಿಕೊಂಡು ಅವರಿಂದಲೇ ಸಂಭಾಷಣೆಯನ್ನು ಬರೆಸಿ ತೆರೆಗೆ ತಂದಿದ್ದಾರೆ. ಆ ಮೂಲಕ ಅದ್ಭುತವಾದ ಮಕ್ಕಳ ಚಿತ್ರವೊಂದು ತೆರೆಗೆ ಬರಲು ಸಾಧ್ಯವಾಯಿತು.

ಡಾ. ರಾಜಪ್ಪ ದಳವಾಯಿಯವರು ಹಲವು ದಿನಗಳ ಕಾಲ ಚಿಂತಿಸಿ ಚಿತ್ರಕತೆಯನ್ನು ಸಿದ್ಧಗೊಳಿಸಿದ್ದಾರೆ. ಚಿತ್ರಕತೆಯ ಹಸ್ತಪ್ರತಿಯನ್ನು ನೋಡಿದಾಗ ಸಿನಿಮಾ ನೋಡಿದ ಅನುಭವವೇ ಆಗುತ್ತದೆ. ಏಕೆಂದರೆ ಹಲವು ವರ್ಷಗಳಿಂದ ಚಿತ್ರರಂಗದ ನಂಟನ್ನು ಹೊಂದಿರುವ ದಳವಾಯಿ ಅವರು ಕ್ಯಾಮೆರಾಗಳ ಆ್ಯಂಗಲ್‌ಗಳ ಬಳಕೆಯನ್ನು ಯಾವ ದೃಶ್ಯದಲ್ಲಿ ಹೇಗೆ ಬಳಸಬೇಕೆಂಬ ನಿರ್ದೇಶನಗಳೊಂದಿಗೆ ಬರೆದಿದ್ದಾರೆ. "ನಮಗೆ ಬೇಕಾದ ಕಂಪ್ಯೂಟರ್ ಶಿಕ್ಷಣ ಎಂಥದೆಂದು ಈ ಚಿತ್ರ ತುಂಬಾ ಗಂಭೀರವಾಗಿ ಹೇಳುತ್ತದೆ. ವಂಶನಾಶವಾಗುತ್ತಿರುವ ಈ ಸಂದರ್ಭದಲ್ಲಿ ಈ ಚಿತ್ರ ಪುನಃ ನಮ್ಮನ್ನು ನೋಡಿಕೊಳ್ಳುವಂತೆ ಮಾಡಿದೆ. ಇದರ ಸಂಭಾಷಣೆಯನ್ನು ಗೆಳೆಯ ರಾಜಪ್ಪ ದಳವಾಯಿ ತುಂಬಾ ಚನ್ನಾಗಿ ಬರೆದಿದ್ದಾರೆ. ನಿರ್ದೇಶಕರಾದ ನಂಜುಂಡೇಗೌಡರು ಮಕ್ಕಳಿಗೆ ಗಾಂಧೀವಾದವನ್ನು ತುಂಬಾ ಪರಿಣಾಮಕಾರಿಯಾಗಿ ಹೇಳಿದ್ದಾರೆ". ಎಂದು ಡಾ.ಚಂದ್ರಶೇಖರ

ನಂಗಲಿಯವರು ಚಿತ್ರದ ಸಂಭಾಷಣೆಯನ್ನು ಕುರಿತು ಈ ರೀತಿ ಹೇಳಿದ್ದಾರೆ.[1] ಅದಕ್ಕೆ ತಕ್ಕಂತೆ ನಂಜುಂಡೇಗೌಡರು ಸಹ ಅದನ್ನು ಯಥಾವತ್ತಾಗಿ ದೃಶ್ಯದಲ್ಲಿ ತರುವ ಪ್ರಯತ್ನ ಮಾಡಿದ್ದಾರೆ.

ಚಿತ್ರ ಆರಂಭವಾಗುವುದೇ ಇಡೀ ಹಳ್ಳಿಯ ದೃಶ್ಯವನ್ನು ತೋರಿಸುವುದರೊಂದಿಗೆ ಆಧುನಿಕತೆಯ ಪ್ರವೇಶವೇ ಇಲ್ಲದ ಭಾರತದ ಒಂದು ಹಳ್ಳಿ. ಅದು ಬೆಳಗಿನ ಜಾವದಲ್ಲೇ ಎತ್ತುಗಳನ್ನು ಹೊಲಗಳಿಗೆ ಅಟ್ಟಿಕೊಂಡು ಹೋಗುವ ಜನ ಬಾಗಿಲಿಗೆ ನೀರು ಹಾಕಿ ರಂಗೋಲಿ ಹಾಕುವ ಹೆಣ್ಣು ಮಕ್ಕಳು. ಬೆಳಿಗ್ಗೆ ಎದ್ದು ಶುಭ್ರವಾದ ಬಟ್ಟೆಗಳನ್ನು ಧರಿಸಿ ಹಣೆಗೆ ವಿಭೂತಿ ಇಟ್ಟುಕೊಂಡು ಒಳ್ಳೆಯ ಕೈಗುಣ ಇರುವ ವ್ಯಕ್ತಿ ಬಂದು ಬೋಣಿ ಮಾಡಲೆಂದು ಕಾಯುವ ಅಂಗಡಿಯಾತ. ಹೀಗೆ ಭಾರತೀಯ ಮೂಲ ಸೊಗಡನ್ನು ತೋರಿಸುವ ಹಲವು ದೃಶ್ಯಗಳಿವೆ.

'ಇದಾದ ನಂತರ ರಂಗಪ್ಪಜ್ಜನ ಮನೆಯಲ್ಲಿ ನಡಿಯುವ ದೃಶ್ಯ. ಈ ದೃಶ್ಯಕ್ಕೆ ರಂಗಪ್ಪಜ್ಜ ಗಾಂಧಿಯ ತಾತ ಈತ ಸ್ವಾತಂತ್ರ ಹೋರಾಟಗಾರ ಅಕ್ಷರಸ್ತ ಭಾರತದ ಸರ್ವತೋಮುಖ ಅಭಿವೃದ್ಧಿಗೆ ಬಡತನ ನಿವಾರಣೆಗೆ ಕುಲಕಸುಬುಗಳು ಅಗತ್ಯ ಎಂದು ನಂಬಿದವ.

ಮಕ್ಕಳಿಗೆ ಶೈಕ್ಷಣಿಕ ಹಂತದಲ್ಲಿಯೇ ವೃತ್ತಿ ತರಬೇತಿಯನ್ನು ಕೊಡಬೇಕೆಂಬ ಗಾಂಧಿ ಚಿಂತನೆಯನ್ನು ಅಪಾರವಾಗಿ ನಂಬಿಕೊಂಡವ. ಈ ದೃಶ್ಯದಲ್ಲಿ ಅವನ ಮನೆಗೆ ಒಬ್ಬ ವ್ಯಕ್ತಿ ಬಂದಿರುತ್ತಾನೆ. ಅವನಿಗೆ ಕಾಫಿ ಕಾಯಿಸಲು ಸೊಸೆಗೆ ಹೇಳುತ್ತಾನೆ. ಆಕೆ ಕಾಫಿಪುಡಿ ಇಲ್ಲವೆಂದು ಗಾಂಧಿಯನ್ನು ಅಂಗಡಿಗೆ ಕಾಫಿ ಪುಡಿ ತರಲು ಕಳಿಸುತ್ತಾಳೆ. ಗಾಂಧಿ ಅಂಗಡಿಗೆ ಹೋಗುತ್ತಾನೆ.

ಅಲ್ಲಿ ಒಳ್ಳೆ ಗಿರಾಕಿಗಾಗಿ ಕಾಯುತ್ತಾ ಕುಳಿತಿದ್ದ ಅಂಗಡಿಯಾತ ಗಾಂಧಿಯ ಧ್ವನಿ ಕೇಳುತ್ತಿದ್ದಂತೆ ಇವತ್ತು ವ್ಯಾಪಾರ ಚನ್ನಾಗಿ ಆಗುತ್ತದೆಂದು ಅಂಗಡಿ ಬಾಗಿಲನ್ನು ತೆಗೆದು ಗಾಂಧಿಗೆ ಕಾಫಿ ಪುಡಿಯನ್ನು ಕೊಡುತ್ತಾನೆ. ಚಿಲ್ಲರೆ ಇಲ್ಲದಿದ್ದುದರಿಂದ ಕಡ್ಲೆ ಕಾಯಿಯನ್ನ ಗಾಂಧಿಯ ಜೇಬಿಗೆ ಹಾಕುತ್ತಾನೆ. ಚಿಲ್ಲರೆ ಇಲ್ಲದುದಕ್ಕಾಗಿ ಕಡ್ಲೆಕಾಯಿ ಕೊಟ್ಟೆನೆಂದು ಹೇಳಿ ಗಾಂಧಿಯನ್ನು ಕಳಿಸುತ್ತಾನೆ. ಇದನ್ನು ನೋಡಿದ ಅಂಗಡಿಯಾತನ ಮಗ ಚಿಲ್ಲರೆ ಇದ್ದು ಯಾಕೆ ಕೊಡಲಿಲ್ಲ ಎಂದಾಗ 'ಚಿಲ್ಲರೆ ಕೊಟ್ಟರೆ ಕಡ್ಲೆಕಾಯಿ ಹೇಗೆ ಖರ್ಚಾಗಬೇಕು ಅದ್ಕೆ ಕೊಟ್ಟೆ ನಿನಗಿವೆಲ್ಲಾ ಅರ್ಥವಾಗಲ್ಲ ಹೋಗು' ಎಂದು ತನ್ನ ಮಗನನ್ನು ಒಳಗೆ ಕಳಿಸುತ್ತಾನೆ.

ಇಲ್ಲಿ ಗಾಂಧಿಯೆಂಬ ಮಗು ಹೇಗೆ ಲೋಕ ವ್ಯವಹಾರದ ಮುಂದೆ ಮುಗ್ಧವಾಗಿರುತ್ತದೆ ಎನ್ನುವುದನ್ನು ಕಾಣಬಹುದು. ಅಲ್ಲದೇ ಅಂಗಡಿಯವನ ಸುಳ್ಳನ್ನು ನಿಜವೆಂದು ನಂಬುವಲ್ಲಿ ಗಾಂಧಿಯಲ್ಲಿರುವ ಮುಗ್ಧತೆಯ ಪರಿಚಯ ನಮಗಾಗುತ್ತದೆ.

---

[1] ಜುಲೈ 4ರಂದು ವಿಜಯ ಕರ್ನಾಟಕ ಪತ್ರಿಕೆ ವರದಿ

ಇದಾದ ನಂತರ ಗಾಂಧಿ ಅಂಗಡಿಯಿಂದ ಮನೆ ಕಡೆಗೆ ಬರುತ್ತಿದ್ದಾಗ ದಾರಿಯಲ್ಲಿ ಕುಡುಕನೊಬ್ಬ ಎದುರಾಗುತ್ತಾನೆ. ಗಾಂಧಿ ಅಂಗಡಿಯಿಂದ ಬರುತ್ತಿರುವುದನ್ನು ಕಂಡು ಅವನನ್ನು ಅಡ್ಡಗಟ್ಟಿ ಕುಡಿಯಲು ದುಡ್ಡು ಕೇಳುತ್ತಾನೆ. ಆಗ ಗಾಂಧಿ 'ನಿನ್ನ ಹೆಂಡ್ತಿ ಪಾಪ ಕೂಲಿ ನಾಲಿ ಮಾಡಿ ಕೊಡಿಟ್ಟ ಹಣಾನೆಲ್ಲ ಸಾರಾಯಿ ಅಂಗಡಿಗೆ ಹಾಕ್ತಿಯ. ಈಗ ನನ್ನ ಹತ್ರ ಕೇಳ್ತಿದಿಯಾ ನಾ ಕೊಡಲ್ಲ ಹೋಗು' ಎಂದು ಅಲ್ಲಿಂದ ಓಡಿ ಪಾರಾಗುತ್ತಾನೆ.
ಇಲ್ಲಿ ಹುಡುಗ ಗಾಂಧಿಯಲ್ಲಿ ಕುಡಿತ ತಪ್ಪು ಅದರಿಂದ ಸಂಸಾರ ನಾಶವಾಗುತ್ತದೆ ಎಂಬ ಪ್ರಜ್ಞೆ ಇರುವುದನ್ನು ಕಾಣಬಹುದು. ಅದೇ ಸಮಯದಲ್ಲಿ ಓಡಿಹೋದ ಗಾಂಧಿಯ ಕಡೆಗೆ ನೋಡುತ್ತಾ ಕುಡಿದ ಅಮಲಿನಲ್ಲಿದ್ದ ಕುಡುಕ 'ನೀ ಕೊಟ್ಟಿಲ್ಲ ಅಂದ್ರೆ ನಾ ಎನ್ ಕುಡಿಯೋದೆ ಇಲ್ವಾ, ಹೋಗು ಹೋಗು' ಎಂಬಲ್ಲಿ ಗಾಂಧಿಯ ಕುಡಿತದ ಬಗೆಗಿನ ವಿಚಾರ ಇಂದಿಗೂ ಹೇಗೆ ಜನರಿಗೆ ತಲುಪಿಲ್ಲ ಎಂಬ ಸತ್ಯ ತಿಳಿಯುತ್ತದೆ. ಗಾಂಧಿಯ ಮೂಲ ತತ್ವಗಳ ಪರಿಚಯ ಇಲ್ಲದ ಜನ ಮನಸ್ಥಿತಿಯು ಇಲ್ಲಿದೆ.

ಈ ಚಿತ್ರವನ್ನು ವೀಕ್ಷೀಸಿದ ಹಿರಿಯ ಕವಿ ಪ್ರೊ.ಜಿ. ಎಸ್ ಸಿದ್ದಲಿಂಗಯ್ಯ ಈ ರೀತಿಯಾಗಿ ಮಾತನಾಡಿದ್ದಾರೆ. "ಇದು ಕೇವಲ ಮಕ್ಕಳ ಚಿತ್ರವಲ್ಲ. ದೊಡ್ಡ ಮಕ್ಕಳ ಚಿತ್ರ, ದೊಡ್ಡವರು ತಿಳಿಯಬೇಕಾದ ಹಲವಾರು ಅಂಶಗಳಿವೆ. ಅದರಲ್ಲೂ ಮೇಷ್ಟ್ರುಗಳು ಅಗತ್ಯವಾಗಿ ನೋಡಬೇಕಾದ ಚಿತ್ರ. ಗಾಂಧಿ ಮತ್ತು ಗಾಂಧೀವಾದದ ಸೂಕ್ಷ್ಮತೆಗಳು ಎಷ್ಟೊಂದು ವೈವಿಧ್ಯಮಯವಾದವು ಎಂಬುದನ್ನು ಈ ಚಿತ್ರ ನಿರೂಪಿಸುತ್ತದೆ. ಬಹಳ ದಿನಗಳ ನಂತರ ಒಂದು ಚಿತ್ರ ನೋಡಿದ ಅನುಭವ ನನಗಾಯಿತು." [2]

ಗಾಂಧಿ ಕಾಫಿ ಪುಡಿಯನ್ನು ತೆಗೆದುಕೊಂಡು ಮನೆಗೆ ಬರುತ್ತಾನೆ ಮನೆಗೆ ಬರುವಷ್ಟರಲ್ಲಿ ಕಾಫಿ ಕುಡಿಯಲೆಂದು ಕಾಯುತ್ತಾ ಕುಳಿತಿದ್ದ ವ್ಯಕ್ತಿ ಹೊರಟುಹೋಗಿರುತ್ತಾನೆ. ತಡವಾಗಿ ಬಂದ ಗಾಂಧಿಯನ್ನ ತಾಯಿ ಪ್ರಶ್ನೆ ಮಾಡುತ್ತಾಳೆ. ಅದಕ್ಕೆ ಗಾಂಧಿ ಹಾಗಾದರೆ ಅವರನ್ನು ಹಾಗೆ ಕಳಿಸಿದೆಯಾ ಎಂದು ಅದಕ್ಕೆ ತಾಯಿ 'ಹಾಗೆ ಕಳ್ಸೋಕೆ ನಿಮ್ ತಾತ ಬಿಡಬೇಕಲ್ಲ ಮನೆಲಿದ್ದದನ್ನೆ ಕಲಿಸಿ ಕೊಟ್ಟೆ ಕುಡಿದು ಹೊದ್ರು' ಎನ್ನುತ್ತಾಳೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-೧ರಲ್ಲಿ ನೋಡಬಹುದು)

ಇಲ್ಲಿ ಮನೆಗೆ ಬಂದ ಅತಿಥಿಯನ್ನು ಗೌರವಿಸುವ ರಂಗಪ್ಪನ ಸ್ವಭಾವದ ಪರಿಚಯ ನಮಗಾಗುತ್ತದೆ. ಇದಾದ ನಂತರ ಬಾಲಕ ಗಾಂಧಿ ಸ್ಕೂಲಿಗೆ ಹೋಗಲು ಸಿದ್ಧನಾಗುತ್ತಾನೆ. ಹೊರಡುವ ಮುನ್ನ ಆತನ ತಾಯಿ ಕುರಿಯನ್ನು ಹೊಲದ ಬಳಿ ಕಟ್ಟಲು ಹೇಳುತ್ತಾಳೆ. ಅದಕ್ಕೆ

---

[2] ಜುಲೈ 4ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟವಾದ ವರದಿ

ಗಾಂಧಿ 'ಹೋಗವ್ವೋ ದಿನಾ ಇಸ್ಕೂಲಿಗೆ ತಡಾಗಿ ಹೋಗ್ತಿನಿ ಮೇಷ್ಟ್ರು ಬೈಯತಾರೆ' ಅನ್ನುತ್ತಾನೆ ಆಗ ತಾಯಿ ರೇಗುತ್ತಾಳೆ ರಂಗಪ್ಪಜ್ಜ ಸಮಧಾನದಿಂದ ಹೇಳಿದಾಗ ಗಾಂಧಿ ಕುರಿಯನ್ನ ಹಿಡಕೊಂಡು ಸ್ಕೂಲ್ ಕಡೆಗೆ ಹೊರಡುತ್ತಾನೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-೨ರಲ್ಲಿ ನೋಡಬಹುದು)

ಈ ಸಂದರ್ಭದಲ್ಲಿ ರಂಗಪ್ಪಜ್ಜ ಹೇಳುವ ಮಾತು ಸೊಸೆಗೆ 'ನೋಡಮ್ಮ ಗಾಂಧಿ ಇನ್ನು ಪಾಪು ಗಾಂಧಿ ಬಾಪು ಗಾಂಧಿ ಅಲ್ಲ ಎಲ್ಲವನ್ನು ತಾಳ್ಮೆಯಿಂದ ಸಹಿಸಿಕೊಳ್ಳೊಕೆ' ಎಂಬ ಈ ಸಂಭಾಷಣೆಯಲ್ಲಿ ನಾನು ಗಮನಿಸಿ ಒಂದು ಅಂಶವೆಂದರೆ ಬಾಲ್ಯದಲ್ಲಿನ ಮಗುತನ ಎಲ್ಲರಿಗೂ ಸಹಜ. ಅದನ್ನು ಸರಿಯಾದ ದಾರಿಯಲ್ಲಿ ಪ್ರವಹಿಸಿದಾಗ ಮಾತ್ರವೇ ಅದು ಪಕ್ವತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಕುರಿಯನ್ನು ಶಾಲೆಗೆ ತೆಗೆದುಕೊಂಡು ಹೋಗುವ ಗಾಂಧಿ ತರಗತಿಯಲ್ಲಿ ಎಲ್ಲರೂ ಹಾಜರಿಗೆ ಹಾಜರಿ ಹೇಳುತ್ತಿದ್ದಾಗ ಗಾಂಧಿ ತನ್ನ ಹೆಸರನ್ನು ಕೂಗಿದಾಗ ಶಾಲೆಯ ಹೊರಗೆ ಕುರಿಯನ್ನ ಕಟ್ಟುತ್ತಾ 'ಬಂದಿದೀನಿ ಸಾರ್' ಎನ್ನುತ್ತಾನೆ.

ಮೇಷ್ಟ್ರು ಗಾಂಧಿ ಕುಳಿತುಕೊಳ್ಳುವ ಜಾಗದ ಕಡೆ ನೋಡಿ 'ಗಾಂಧಿ ಬದಲಾಗಿ ಯಾರು ಹಾಜರಿ ಹೇಳಿದಿರಿ' ಎಂದು ಪ್ರಶ್ನಿಸುತ್ತಾರೆ 'ನಾನೆ ಸಾ' ಎಂದು ಗಾಂಧಿ ಕುರಿಯನ್ನು ಕಟ್ಟಿ ತರಗತಿಯ ಒಳಗೆ ಬರುತ್ತಾನೆ. ಮೇಷ್ಟ್ರು ಗಾಂಧಿಯ ಕಡೆಗೆ ಮೆಚ್ಚುಗೆ ಮತ್ತು ಹುಸಿಕೋಪದಿಂದ ಬಯ್ದು ತರಗತಿಯಲ್ಲಿ ಕುಳಿತುಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ.

ತರಗತಿಯಲ್ಲಿ ಮೇಷ್ಟ್ರು ಇತಿಹಾಸಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳುತ್ತಾರೆ. ಯಾರು ಸರಿಯಾದ ಉತ್ತರ ಕೊಡುವುದಿಲ್ಲ ಆದರೆ ಗಾಂಧಿ ಸರಿಯಾದ ಉತ್ತರವನ್ನು ಹೇಳುತ್ತಾನೆ. (ಅನುಬಂಧದಲ್ಲಿ ತರಗತಿಯ ದೃಶ್ಯವನ್ನು ಚಿತ್ರ-೩ರಲ್ಲಿ ನೋಡಬಹುದು.) ಜೊತೆಗೆ ಇತಿಹಾಸದ ಘಟನೆಗಳು ನಡೆದ ಇಸವಿಗಳನ್ನು ಮರೆತರೆ ನಮ್ಮ ಇತಿಹಾಸವನ್ನೇ ತಿರುಚಿದಂತಾಗುತ್ತದೆ. ಆದ್ದರಿಂದ ಇಸವಿಗಳನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯವೆಂದು ನಮ್ಮ ತಾತ ಹೇಳಿದ್ದಾರೆ ಎಂಬ ಮಾತನ್ನು ಹೇಳುತ್ತಾನೆ. ಇಲ್ಲಿ ಬಾಲಕ ಗಾಂಧಿಗೆ ಮನೆಯೇ ಮೊದಲ ಪಾಠ ಶಾಲೆ ಎಂಬ ಅಂಶವು ತಿಳಿಯುತ್ತದೆ. ಏಕೆಂದರೆ ಸ್ವಾತಂತ್ರ ಹೋರಾಟಗಾರನಾದ ರಂಗಪ್ಪಜ್ಜ ತನ್ನ ಮೊಮ್ಮಗನಿಗೆ ಭಾರತೀಯ ಇತಿಹಾಸ ಮತ್ತು ಜೀವನ ಮೌಲ್ಯಗಳ ಪಾಠವನ್ನು ಮನೆಯಲ್ಲಿಯೇ ಹೇಳಿಕೊಡುತ್ತಿರುತ್ತಾನೆ.

ಆದ್ದರಿಂದಲೇ ಬಾಲಕ ಗಾಂಧಿ ತನ್ನ ತಾತ ಹೇಳುವ ಚಿಂತನೆಗಳಿಂದ ಸಂಪೂರ್ಣ ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವತ್ತ ಮುಂದಾಗುತ್ತಾನೆ. ಈ ಅಂಶವನ್ನು ನಾವು ಚಿತ್ರದ ಉದ್ದಕ್ಕೂ ಗಮನಿಸಬಹುದಾಗಿದೆ.

ಇದರ ನಂತರ ಸ್ಕೂಲಿನ ಮಕ್ಕಳೆಲ್ಲರು ಬಯಲಿನಲ್ಲಿ ಕ್ರಿಕೆಟ್ ಆಡುತ್ತಿರುವ ಸನ್ನಿವೇಶವಿದೆ. ಅಲ್ಲಿ ಹುಡುಗರು ಪಾಳಿಯ ಪ್ರಕಾರ ಒಬ್ಬರಾದ ನಂತರ ಇನ್ನೊಬ್ಬರು ಬ್ಯಾಟಿಂಗ್ ಮಾಡುತ್ತಿರುತ್ತಾರೆ. ಗಾಂಧಿ ಬ್ಯಾಟಿಂಗ್ ಮಾಡುತ್ತಿದ್ದ ವೇಳೆ ಬಾಲನ್ನು ಜೋರಾಗಿ ಹೊಡೆಯುತ್ತಾನೆ. ಅದು ರಸ್ತೆಯಲ್ಲಿ ಹೋಗುತ್ತಿದ್ದ ಕಾರೊಂದಕ್ಕೆ ಹೋಗಿ ಬೀಳುತ್ತದೆ. ಆಗ ಕಾರಿನ ಡ್ರೈವರ್ ಕಾರನ್ನು ನಿಲ್ಲಿಸಿ ಬಾಲನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಇದನ್ನು ಹೊಡೆದವರು ಯಾರು ಎಂದು ಕೇಳುತ್ತಾನೆ ಅದಕ್ಕೆ ಗಾಂಧಿ ನಾನೇ ಎಂದು ಹೇಳಿ ಕ್ಷಮೆಯನ್ನು ಕೇಳುತ್ತಾನೆ.

ಆಗ ಡ್ರೈವರ್ ನಿನ್ನ ಹೆಸರೇನು? ಎಂದು ಕೇಳುತ್ತಾನೆ. ಅದಕ್ಕೆ ಗಾಂಧಿ 'ನಾನು ಗಾಂಧಿ' ಎನ್ನುತ್ತಾನೆ. ಆ ಮಾತಿಗೆ ಜೋರಾಗಿ ನಗುವ ಡ್ರೈವರ್ ಭಾರತ ದೇಶಕ್ಕೆ ಬಿಡುಗಡೆಯನ್ನು ಕೊಡಲು ಹೋರಾಡಿದ ಮಹಾತ್ಮದ ಹೆಸರಿಟ್ಟುಕೊಂಡು ಅವರು ವಿರೋಧಿಸಿದ ವಿದೇಶಿಯರ ಆಟವನ್ನು ಆಡುತ್ತಿದ್ದೀಯಾ ಎಂಥ ಅವಮಾನ ಎಂದು ಗೇಲಿಮಾಡುತ್ತಾನೆ.

ಡ್ರೈವರ್ ಅಲ್ಲಿಂದ ಹೋದ ಮೇಲೆ ಮಿಕ್ಕ ಹುಡುಗರು ಗಾಂಧಿಯನ್ನು ಆಟಕ್ಕೆ ಬರುವಂತೆ ಕರೆಯುತ್ತಾರೆ. ಆದರೆ ಡ್ರೈವರ್‌ನ ಮಾತಿನಿಂದ ಮನನೊಂದ ಗಾಂಧಿ ಆಟಕ್ಕೆ ಬರುವುದಿಲ್ಲವೆಂದು ಹೇಳಿ ಅಲ್ಲಿಂದ ಹೊರಟು ಬಿಡುತ್ತಾನೆ. ಗಾಂಧಿ ಎಂಬ ಹೆಸರಿಟ್ಟುಕೊಂಡದ್ದರಿಂದ ಗಾಂಧಿಯ ಹೆಸರಿಗೆ ಅವಮಾನವಾಗದಂತೆ ನಡೆದುಕೊಳ್ಳಬೇಕಾದ ಜವಾಬ್ದಾರಿ ಗಾಂಧಿಯ ಮೇಲಿದೆ ಎಂಬುದನ್ನು ಈ ದೃಶ್ಯ ಮನದಟ್ಟು ಮಾಡಿಸುತ್ತದೆ.

ಇಲ್ಲಿ ನಿಜವಾದ ಗಾಂಧಿ ತಾತ ಕ್ರಿಕೆಟ್ ಆಡುತ್ತಿಲ್ಲ. ಆದರೆ ಗಾಂಧಿಯೆಂಬ ಹೆಸರನ್ನು ಇಟ್ಟುಕೊಂಡಿರುವ ಬಾಲಕ ಗಾಂಧಿಗೆ ಅವಮಾನ ಮಾಡಿದಂತಾಗುತ್ತದೆಂದು ಆಟವನ್ನು ನಿಲ್ಲಿಸಿ ಮನೆಯಕಡೆ ಹೋಗುವಲ್ಲಿ ಹುಡುಗನ ಮೇಲೆ ಮೂಲ ಗಾಂಧಿಯ ವ್ಯಕ್ತಿತ್ವವನ್ನು ಕಾಪಾಡಲೇಬೇಕಾದ ಜವಾಬ್ದಾರಿಯಿದೆ ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ತನ್ನ ವ್ಯಕ್ತಿತ್ವ ಆಸೆ ಆಕಾಂಕ್ಷೆಗಳಿಗಿಂತಲೂ ಆತನಿಗೆ ಗಾಂಧಿಯೆಂಬ ಶ್ರೇಷ್ಠವ್ಯಕ್ತಿಯ ಹೆಸರನ್ನು ಉಳಿಸಬೇಕಾದ ಜವಾಬ್ದಾರಿಯಿದೆ ಎಂಬುದು ಈ ದೃಶ್ಯದಿಂದ ವೇದ್ಯವಾಗುತ್ತದೆ. ಬಾಲಕ ಗಾಂಧಿ ಮನೆಗೆ ಬಂದಾಗ ತಾತ ಮನೆಯಲ್ಲಿ ಕೂತು ಮರದ ಗೊಂಬೆಗಳ ಕೆತ್ತನೆ ಕೆಲಸದಲ್ಲಿ ನಿರತನಾಗಿರುತ್ತಾನೆ.

ಆಗ ಗಾಂಧಿಯ ತಾಯಿ ತನ್ನ ಮಾವ ರಂಗಪ್ಪಜನಿಗೆ ಹೇಳುತ್ತಾಳೆ 'ಊರೋರಿಗೆಲ್ಲ ಏನೇನೋ ಮಾಡಿಕೊಡ್ತಿರಾ ಗಾಂಧಿಗೊಂದು ಬ್ಯಾಟು ಮಾಡಿ ಕೊಡಿ' ಎಂದು ಅದಕ್ಕೆ ರಂಗಪ್ಪಜ್ಜ 'ಸರಿಯಮ್ಮ ಆದ್ರೆ ಅದ್ಕೆ ಒಳ್ಳೆ ಗಟ್ಟಿ ಮರ ಬೇಕು, ತಂದು ಬ್ಯಾಟ್ ಮಾಡಿಕೊಡ್ತೀನಿ' ಎನ್ನುತ್ತಾನೆ.

ಈ ಸಂಭಾಷಣೆಯನ್ನು ಕೇಳಿಸಿಕೊಂಡ ಗಾಂಧಿ ತಾನು ಕ್ರಿಕೆಟ್ ಆಡುವಾಗ ಡ್ರೈವರ್ ಹೇಳಿದ ಮಾತು ನೆನಪಿಗೆ ಬರುತ್ತದೆ. ಆಗ ತನಗೆ ಬ್ಯಾಟ್ ಬೇಡ. ಅದಕ್ಕೆ ಬದಲಿಗೆ ಒಂದು

ಜಾಮಿಟ್ರಿ ತಂದು ಕೊಡಿ ಓದೋಕೆ ಸಹಾಯವಾಗುತ್ತೆ ಎನ್ನುತ್ತಾನೆ. ಇದನ್ನು ಕೇಳಿದ ತಾತನಿಗೂ ಆಶ್ಚರ್ಯವಾದರೂ ಸಂತೋಷದಿಂದ ತಂದುಕೊಡ್ತೇನೆ ಎಂದು ಒಪ್ಪಿಕೊಳ್ಳುತ್ತಾನೆ. ಇಲ್ಲಿ ಬಾಲಕ ಗಾಂಧಿ ಹಂತ ಹಂತವಾಗಿ ಹೇಗೆ ಸಾತ್ವಿಕತೆಯ ಕಡೆ ನಡೆಯುತ್ತಾನೆ ಎಂಬುದರ ಸಂಕೇತವಿದೆ. ಜೊತೆಗೆ ಆಡುವ ಹುಡುಗನಲ್ಲಿ ಗಾಂಧಿಯ ಆವಾಹನೆ ಹೇಗೆ ಹಂತ ಹಂತವಾಗಿ ಪರಿಣಾಮಕಾರಿಯಾಗಿ ಮೂಡುತ್ತಾ ಹೋಗುತ್ತದೆ ಎಂಬುದರ ಪರಿಚಯವೂ ಸಹ ಇದೆ.

ಒಂದು ದಿನ ಗಾಂಧಿ ಸ್ಕೂಲಿಗೆ ಹೋಗಲು ಸಿದ್ಧತೆ ನಡೆಸಿರುತ್ತಾನೆ. ಅದೇ ವೇಳೆಗೆ ಅವರ ತಾಯಿ ಬಟ್ಟೆಗಳನ್ನು ಒಗೆದು ಒಣಗಲು ಹಾಕಿರುತ್ತಾಳೆ. ಗಾಂಧಿ ತಾನು ಹಾಕಿಕೊಳ್ಳುವ ಅಂಗಿಗಾಗಿ ಹುಡುಕಾಡಿ ತಾಯಿಯನ್ನು ಕೇಳುತ್ತಾನೆ. ಅದಕ್ಕೆ ತಾಯಿ ಒಣಗಲು ಹಾಕಿದ್ದೇನೆ ಅದನ್ನೇ ಹಾಕಿಕೋ ಎನ್ನುತ್ತಾಳೆ. ಬಂದು ನೋಡಿದರೆ ಬಟ್ಟೆಗಳೆಲ್ಲ ನೀರು ತೊಟ್ಟಿಕ್ಕಿಸುತ್ತಿರುತ್ತವೆ. ಹಾಗಾಗಿ ಗಾಂಧಿ ತನ್ನ ತಾತನ ಅಂಗಿಯನ್ನೆ ಹಾಕಿಕೊಂಡು ಶಾಲೆಗೆ ಹೊರಡುತ್ತಾನೆ. ಶಾಲೆಗೆ ಬರುತ್ತಿದ್ದಂತೆ ಮೇಷ್ಟ್ರು ಗಾಂಧಿ ಅವತಾರವನ್ನು ನೋಡಿ ನಗಲಾರಂಭಿಸುತ್ತಾರೆ. ಮಿಕ್ಕ ಹುಡುಗರೆಲ್ಲರು ನಗುತ್ತಾರೆ. ಗಾಂಧಿ ತರಗತಿಗೆ ಬರುವುದಕ್ಕೂ ಮೊದಲೇ ಮೇಷ್ಟ್ರು ಆಗಸ್ಟ್ ೧೫ ರ ಸ್ವಾತಂತ್ರೋತ್ಸವದ ಆಚರಣೆಯ ಸಿದ್ಧತೆಯ ಬಗ್ಗೆ ಮಾತನಾಡುತ್ತಿರುತ್ತಾರೆ.

ಅಂದಿನ ದಿನ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ, ಸರ್ವಸ್ವವನ್ನು ದೇಶಕ್ಕಾಗಿ ಅರ್ಪಿಸಿದ ಮಹಾತ್ಮರ ವೇಷಗಳನ್ನು ಹಾಕಿಕೊಳ್ಳುವವರು ಯಾರು ಎಂಬ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ನೆಹರು, ಚನ್ನಮ್ಮ ಇತ್ಯಾದಿ ವೇಷಗಳನ್ನು ಹಾಕಲು ಹುಡುಗರು ಖುಷಿಯಿಂದ ಒಪ್ಪಿಕೊಂಡಿರುತ್ತಾರೆ. ಮೇಷ್ಟ್ರು ಗಾಂಧಿ ವೇಷಧಾರಿಗಾಗಿ ಹುಡುಕುತ್ತಿರುವಾಗ ಬಾಲಕ ಗಾಂಧಿ ತರಗತಿಗೆ ಬರುತ್ತಾನೆ.

ಆಗ ಮೇಷ್ಟ್ರು ಬಾಲಕ ಗಾಂಧಿಗೆ ನೀನು ಗಾಂಧಿಯಾಗು 'ಆಗಸ್ಟ್ ೧೫ ರಂದು' ಎನ್ನುತ್ತಾರೆ. ಅದಕ್ಕೆ ಗಾಂಧಿ 'ನಾನೀಗಲು ಗಾಂಧಿನೇ ಸಾ' ಎಂದು ಮುಗ್ಧವಾಗಿ ನುಡಿಯುತ್ತಾನೆ. ಅದಕ್ಕೆ ಮಾಹಾತ್ಮ ಗಾಂಧಿಯವರ ವೇಷ ಹಾಕು ಅಂದಾಗ ಹುಡುಗ ಆಶ್ಚರ್ಯದಿಂದ 'ನಾನು ಅಷ್ಟು ಸಮರ್ಥನೆ' ಎಂದು ಕೇಳುತ್ತಾನೆ ಅದಕ್ಕೆ ಮೇಷ್ಟ್ರು ನೀನು ಮಾತ್ರ ಅದನ್ನ ಮಾಡಬಹುದು 'ನೀನೆ ಗಾಂಧಿ' ಎಂದು ಹುರಿದುಂಬಿಸುತ್ತಾರೆ.

ನಂತರ ಮನೆಗೆ ಬರುವ ಗಾಂಧಿ ಕನ್ನಡಿಯ ಮುಂದೆ ಗಾಂಧಿ ತಾತನ ವೇಷ ಹಾಕಿ ತನ್ನನ್ನು ತಾನೆ ನೋಡಿ ಆನಂದಿಸುತ್ತಿರುತ್ತಾನೆ. ಈ ದೃಶ್ಯವನ್ನು ನೋಡಿದ ಆತನ ತಾತ ಮತ್ತು ತಾಯಿ ಬಾಲಕ ಗಾಂಧಿಯ ವೇಷ ನೋಡಿ ಸಂತೋಷಪಡುತ್ತಾರೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-೫ರಲ್ಲಿ ನೋಡಬಹುದು)

ಮಾರನೆ ದಿನ ಶಾಲೆಯಲ್ಲಿ ಸ್ವಾತಂತ್ರ ದಿನಾಚರಣೆ ಸಮಾರಂಭ ನಡೆಯುತ್ತಿರುತ್ತದೆ. ಅಸಹಕಾರ ಚಳುವಳಿಯಲ್ಲಿ ಗಾಂಧಿಯ ನೇತೃತ್ವದ ದೃಶ್ಯವನ್ನು ಮಕ್ಕಳು ವೇದಿಕೆಯ ಮೇಲೆ ಅಭಿನಯಿಸಿ ತೋರಿಸುತ್ತಾರೆ. ಎಲ್ಲರಿಗೂ ಅ ವಿಚಾರ ಬಹಳ ಹಿಡಿಸುತ್ತದೆ. ಅಭಿನಯದ ನಂತರ ಆ ಭಾಗದ ಎಂ.ಎಲ್.ಎ ಮುದ್ದೇಗೌಡರ ಭಾಷಣ.

ಭಾಷಣದಲ್ಲಿ ಮುದ್ದೇಗೌಡ ಬಾಲಕ ಗಾಂಧಿಯ ಅಭಿನಯವನ್ನು ಬಹುವಾಗಿ ಹೊಗಳುತ್ತಾನೆ. ಜೊತೆಗೆ ಅವನನ್ನು ವೇದಿಕೆಯ ಮೇಲೆ ಕರೆದು ಬೆನ್ನು ತಟ್ಟಿ ಹೆಸರನ್ನು ಕೇಳುತ್ತಾನೆ. ಅದಕ್ಕೆ ಬಾಲಕ ಗಾಂಧಿ 'ನಾನು ಗಾಂಧಿ' ಎನ್ನುತ್ತಾನೆ.

ಅದಕ್ಕೆ ಮುದ್ದೇಗೌಡ ನಿನ್ನ ವೇಷ ಗಾಂಧಿ ಅಂತಾ ಗೊತ್ತಾಯ್ತು ನಿನ್ನ ಹೆಸರೇನು ಎಂದು ಕೇಳುತ್ತಾನೆ. ಅದಕ್ಕೆ ಗಾಂಧಿ ಎಂದು ಮತ್ತೆ ಹೇಳುತ್ತಾನೆ. ಈ ಸಂದರ್ಭಕ್ಕೆ ಮೇಷ್ಟ್ರು ರಾಮಪ್ಪ ಮಧ್ಯೆ ಪ್ರವೇಶಿಸಿ ಅವನ ಹೆಸರೇ ಗಾಂಧಿ ಎಂದು ಹೇಳಿದಾಗ ಎಂ.ಎಲ್.ಎ 'ಈ ಊರಾಗ್ಯಾರಪ್ಪ ಅಂತ ಹೆಸರಿಟ್ಟವರು' ಎಂದು ಆಶ್ಚರ್ಯಪಡುತ್ತಾನೆ. ಆಗ ಮೇಷ್ಟ್ರು ಅದೇ ವೇದಿಕೆಯಲ್ಲಿ ಸನ್ಮಾನಿತವಾಗಿ ಕುಳಿತಿದ್ದ ಸ್ವಾತಂತ್ರ ಹೋರಾಟಗಾರ ರಂಗಪ್ಪಜ್ಜನನ್ನು ತೋರಿಸಿ ಇವರ ಮೊಮ್ಮಗ ಎಂದು ಪರಿಚಯಿಸುತ್ತಾನೆ.

ಆಗ ಮುದ್ದೇಗೌಡ ಹೌದೆ ರಂಗಪ್ಪಜ್ಜನಿಗೆ 'ನೀವಲ್ಲದೇ ಇನ್ಯಾರು ಅಂಥ ದೇಶ ಭಕ್ತರು ನಮ್ಮೂರಿನಾಗವರೆ' ಎಂದು ರಂಗಪ್ಪಜ್ಜನನ್ನು ಅಭಿನಂದಿಸುತ್ತಾನೆ. ಇದಾದ ನಂತರ ಎಂ.ಎಲ್.ಎ ಯ ಭಾಷಣ ಮುಂದುವರಿಯುತ್ತದೆ.

ಎಂ.ಎಲ್.ಎ. ಭಾಷಣದಲ್ಲಿ ಬಾಲಕ ಗಾಂಧಿಯ ಅಭಿನಯವನ್ನು ಹೊಗಳುತ್ತಾನೆ ಅದಕ್ಕೆ ಗುಂಪಿನಲ್ಲಿದ್ದ ಕುಡುಕ 'ಬಣ್ಣ ಇಲ್ಲದೇ ನೀನು ಮಾಡೋ ನಟನೆ "ಯಾರು" ತಾನೆ ಮಾಡೋಕಾಗುತ್ತೆ ಬಿಡಪ್ಪ' ಎಂದು ಛೇಡಿಸುತ್ತಾನೆ. ಈ ದೃಶ್ಯದಲ್ಲಿ ರಾಜಕಾರಣಿಗಳ ಮನಸ್ಸು ಮತ್ತು ಪ್ರಸ್ತುತ ಹದಗೆಟ್ಟ ರಾಜಕಾರಣದ ಸ್ಥಿತಿಗತಿಗಳ ಮೇಲೆ ಬೆಳಕು ಚಲ್ಲುವ ಪ್ರಯತ್ನವಿದೆ.

ಭಾಷಣವನ್ನು ಮುಂದುವರಿಸುವ ಮುದ್ದೇಗೌಡ "ನಾನು ನಾಲ್ಕನೆ ಕ್ಲಾಸು ಓದಿ ರಾಜಕೀಯಕ್ಕೆ ಬಂದೆ. ಆದರೆ ನಮ್ಮ ಮಕ್ಕಳು ಇನ್ನೂ ಹೆಚ್ಚಿನ ವ್ಯಾಸಂಗವನ್ನು ಮಾಡಬೇಕು ಅವರ ಕ್ಷೇಮಾಭಿವೃದ್ಧಿಗಾಗಿ ಸರ್ಕಾರ ಸಕಲ ಸವಲತ್ತುಗಳನ್ನು ಕೊಡುತ್ತದೆ ಆ ವಿಷಯದಲ್ಲಿ ನಾನು ಪ್ರಸ್ತುತ ಶಿಕ್ಷಣ ವಲಯದಲ್ಲಿನ ಸುಧಾರಣೆಗಾಗಿ ನಮ್ಮೂರಿನ ಸ್ಕೂಲಿಗೆ ಕಂಪ್ಯೂಟರ್ ಕೊಡಸ್ತೆನೆ. ಇಂದು ಪ್ರಪಂಚದಾದ್ಯಂತ ಕಂಪ್ಯೂಟರ್ ಜ್ಞಾನದ ಅಗತ್ಯವಿದೆ.

ಅದಕ್ಕಾಗಿ ಕಂಪ್ಯೂಟರ್ ಈ ಊರಿನ ಮಕ್ಕಳಿಗೆ ಬೇಕೆ ಬೇಕು" ಎಂದು ಹೇಳಿ ತನ್ನ ಭಾಷಣವನ್ನು ಮುಗಿಸುತ್ತಾನೆ. ಈ ದೃಶ್ಯದಲ್ಲಿ ಮುದ್ದೇಗೌಡ ಅನಕ್ಷರಸ್ಥ ದೇಶದ ಉನ್ನತಿಗೆ

ಬೇಕಾಗಿರುವ ಮೂಲ ಶಿಕ್ಷಣ ಯಾವುದು ಎಂಬುದರ ಪರಿವೆಯಿಲ್ಲದಿರುವುದು ಅವನ ಮಾತುಗಳಿಂದಲೇ ತಿಳಿಯುತ್ತದೆ. ಜೊತೆಗೆ ತನ್ನ ಅಜ್ಞಾನದ ಪರಮಾವಧಿಯೆಂಬಂತೆ ಆಧುನಿಕ ಶಿಕ್ಷಣದ ಕನಸನ್ನು ಮಕ್ಕಳಲ್ಲಿ ಬಿತ್ತುವ ಪ್ರಯತ್ನ ಮಾಡುತ್ತಾನೆ.

ಇವೆಲ್ಲದರ ಜೊತೆಗೆ ಅರ್ಹತೆಯಿಲ್ಲದ್ದರೂ ಮುಗ್ಧ ಜನರ ಭಾವನೆಗಳಿಗೆ ಕನಸುಗಳನ್ನು ಕೊಟ್ಟು ತನ್ನ ಬೇಳೆಬೇಯಿಸಿಕೊಳ್ಳುವ ರಾಜಕಾರಣಿಗಳ ದುರ್ನಡತೆಗೆ ಈ ವ್ಯಕ್ತಿ ಸಾಕ್ಷಿಯಾಗಿ ನಿಂತಂತೆ ಕಂಡು ಬರುತ್ತದೆ.

ಇದಾದ ನಂತರ ರಂಗಪ್ಪಜ್ಜ ತನ್ನ ಮನೆಯಲ್ಲಿ ನೇಗಿಲು ಮಾಡುವ ಕೆಲಸದಲ್ಲಿ ನಿರತನಾಗಿರುವ ದೃಶ್ಯವಿದೆ. ನೇಗಿಲು ಮಾಡುತ್ತಾ ಕುಳಿತಿದ್ದಾಗ ಅಲ್ಲಿಗೆ ಬರುವ ಊರಿನ ರೈತನೊಬ್ಬ ತಾನು ತುಂಬಾ ದಿನಗಳ ಹಿಂದೆಯೇ ನೇಗಿಲು ಮಾಡಲು ಕೊಟ್ಟಿದ್ದೆ ನೀನಿನ್ನು ಸಿದ್ದಗೊಳಿಸಿಯೇ ಇಲ್ಲ ಎಂದು ದೂರುತ್ತಾನೆ. ಆಗ ರಂಗಪ್ಪಜ್ಜ ಅದಕ್ಕೆ ಊರಿನಲ್ಲಿ ನಾನೊಬ್ಬನೆ ಈ ಕೆಲಸ ಮಾಡುವವ ಎಷ್ಟೂಂತ ಮಾಡಲಿ ಬೇರೆಯವರ ಕೆಲಸಗಳ ಒತ್ತಡ ಇತ್ತು ಎನ್ನುತ್ತಾನೆ.

ಬದಲಾದ ಶಿಕ್ಷಣ ಪದ್ಧತಿ ಮತ್ತು ಜೀವನ ಅಗತ್ಯಗಳಿಗೆ ತಕ್ಕಂತೆ ಉದ್ಯೋಗದಲ್ಲಿಯೂ ಬದಲಾವಣೆ ಬಂದಿವೆ. ಕೃಷಿ ಸಲಕರಣೆಗಳನ್ನು ಸಿದ್ಧಗೊಳಿಸುವ ಕಲೆ ರಂಗಪ್ಪಜ್ಜನಿಗೆ ಗೊತ್ತು. ಆದರೆ ಆತ ಹಳೆ ತಲೆಮಾರಿನವ ಆತನ ಕೌಶಲ್ಯತೆಯೂ ಕೂಡ ಹಳೆ ಪರಂಪರೆಯ ಹಾದಿಯಲ್ಲಿಯೇ ಇದೆ. ಆಧುನಿಕ ಯುಗಕ್ಕೆ ತಕ್ಕಂತೆ ಬದಲಾಗಿಲ್ಲ. ಆದ್ದರಿಂದ ಮತ್ತು ಆ ಕೆಲಸವನ್ನು ಮಾಡುವ ಬೇರೊಬ್ಬ ವ್ಯಕ್ತಿ ಕೂಡ ಆ ಊರಿನಲ್ಲಿಲ್ಲ.

ಈ ದೃಶ್ಯದಲ್ಲಿ ಪ್ರಸ್ತುತ ಸಂದರ್ಭದಲ್ಲಿ ನಾಶವಾಗುತ್ತಿರುವ ಮೂಲಕಸುಬುಗಳ ಬಗೆಗಿನ ವಿವರಣೆಯಿದೆ. ಜೊತೆಗೆ ಅಗತ್ಯವಾಗಿ ಮೂಲ ದೇಸಿ ಸಂಸ್ಕೃತಿಗಳ ಉಳಿಕೆಯ ಕಡೆಗೆ ಗಮನ ಹರಿಸಬೇಕಾದ ಅಗತ್ಯವನ್ನು ಕೂಡ ಈ ದೃಶ್ಯದ ಮೂಲಕ ಹೇಳುವ ಪ್ರಯತ್ನವಿದೆ.

ಈ ದೃಶ್ಯದಲ್ಲಿ ತಾತನ ಅಸಹಾಯಕತೆ ಮತ್ತು ಜನರನ್ನು ಸಮಾಧಾನಿಸುವ ಪ್ರಯತ್ನವನ್ನು ಕಂಡು ಬಾಲಕ ಗಾಂಧಿ ತಾತನಿಗೆ ಸಹಾಯ ಮಾಡಲು ಮುಂದಾಗುತ್ತಾನೆ. ತಾತ ಮಾಡುವ ಮರದ ಕೆಲಸದಲ್ಲಿ ಕೈ ಜೋಡಿಸುತ್ತಾನೆ. ಮಗನ ಆಸಕ್ತಿಯನ್ನು ಕಂಡು ತಾಯಿಯೂ ಕೂಡ ಸಂತೋಷದಿಂದ ರಂಗಪ್ಪಜ್ಜನಿಗೆ ಹೇಳುತ್ತಾಳೆ. 'ಅವನಿಗೂ ನಿಮ್ಮ ಕೆಲಸವನ್ನು ಕಲಿಸಿಕೊಡಿ ಕಲಿತುಕೊಳ್ಳಲಿ' ಎಂದು ಹೇಳಿದಾಗ ತಾತನೂ ಅದಕ್ಕೆ ಪ್ರೋತ್ಸಾಹ ಕೊಡುತ್ತಾನೆ. ಬಾಲಕ ಗಾಂಧಿ ತಾತನ್ನ ಬಿಡಿಸಿ ಅವನ ಕೆಲಸವನ್ನು ತಾನು ಮುಂದುವರಿಸುತ್ತಾನೆ.

ಈ ದೃಶ್ಯದ ಮೂಲಕ ಕುಶಲಕರ್ಮಿಯೂ ಸ್ವಾತಂತ್ರ ಹೋರಾಟಗಾರನೂ ದೇಶಭಕ್ತನೂ ಆದ ರಂಗಪ್ಪಜ್ಜ ಬಾಲಕ ಗಾಂಧಿಯ ವ್ಯಕ್ತಿತ್ವವೂ ಸರ್ವತೋಮುಖವಾಗಿ ರೂಪಗೊಳ್ಳಲು ಹೇಗೆ ಪ್ರೇರಣೆಯನ್ನು ಕೊಡುತ್ತಾನೆ ಎಂಬುದು ತಿಳಿಯುತ್ತದೆ.

ಒಂದು ದಿನ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಗಾಂಧಿಯ ತಾಯಿ ಬಿಸಿಲಿನಲ್ಲಿ ದುಡಿಯುತ್ತಿದ್ದ ದೃಶ್ಯ ಅಲ್ಲಿಗೆ ಊರಿನ ಇನ್ನೊಬ್ಬ ಹೆಣ್ಣುಮಗಳು ಹುಲ್ಲಿನ ಹೊರೆಯನ್ನು ಹೊತ್ತುಕೊಂಡು ಬರುತ್ತಾಳೆ. ಬಂದವಳು ನೆನ್ನೆ ನಿನ್ನ ಮಗ ಗಾಂಧಿ ಪಾರ್ಟು ಚನ್ನಾಗಿ ಮಾಡಿದ್ದ ಎಂದು ಹೊಗಳುತ್ತಾಳೆ ತಿನ್ನಲಿಕ್ಕೆ ಅಡಿಕೆಯೆಲೆ ಕೇಳುತ್ತಾಳೆ ಗಾಂಧಿಯ ತಾಯಿ ಕೊಡುತ್ತಾಳೆ.

ಹೌದು ಊರಿನವರೆಲ್ಲ ಹಾಗೆ ಅಂದ್ರು ಅದಕ್ಕೆ ಯಾರ್ಯಾರ ಕಣ್ಣು ಬಿದ್ದಿರುತ್ತೋ ಅಂತ ದೃಷ್ಟಿ ತೆಗೆದೆ ಅನ್ನುತ್ತಾಳೆ. ಅದಕ್ಕೆ ಆ 'ಹೆಂಗಸು ಅಯ್ಯೋ ನಂದೇನು ಕೆಟ್ಟಕಣ್ಣಲ್ಲ' ತಗಿ ಎಂದು ಬಿಂಕದಿಂದಲೇ ಅಲ್ಲಿಂದ ಹೊರಡುತ್ತಾಳೆ. ಅಷ್ಟೊತ್ತಿಗೆ ಬಾಲಕ ಗಾಂಧಿ ಅಲ್ಲಿಗೆ ಬರುತ್ತಾನೆ. ಊರಿನ ದೊಡ್ಡ ಒಕ್ಕಲು ಕೃಷ್ಣಪ್ಪಣ್ಣ ತನ್ನ ಆಳಿನೊಂದಿಗೆ ಇವರ ಹೊಲಕ್ಕೆ ಬಂದು ಹಲಸಿನ ಕಾಯಿ ಕಿತ್ತಿದ್ದಿಯಾ ಎಂದು ಗಾಂಧಿಯನ್ನು ಬೈಯಲಾರಂಭಿಸುತ್ತಾನೆ. ಇದರಿಂದ ಅವಮಾನದಿಂದ ಕುಗ್ಗಿ ಹೋಗುವ ಗಾಂಧಿ ನಾನು ಕಳ್ಳತನ ಮಾಡಿಲ್ಲವೆಂದು ಮಾರುತ್ತರ ಕೊಡುತ್ತಾನೆ. ಆದರೂ ನಂಬದ ಕೃಷ್ಣಪ್ಪ 'ಗಾಂಧಿ ಅಂತ ಹೆಸರಿಟ್ಕೊಂಡು ಕಳ್ಳತನ ಮಾಡ್ತೀಯಾ' ಎಂದು ಗದರುತ್ತಾನೆ.

ಈ ಮಾತಿನಿಂದ ಮತ್ತೂ ಕುಗ್ಗಿಹೋಗುವ ಗಾಂಧಿ 'ನಮ್ಮ ಹೊಲದಲ್ಲೇ ಹಲಸಿನ ಮರ ಇದೆ ನಿನ್ ಹೊಲಕ್ಕೆ ನಾನ್ಯಾಕೆ ಬರಲಿ' ಎಂದು ಪ್ರಶ್ನೆ ಮಾಡುತ್ತಾನೆ. ಅದಕ್ಕೂ ಬಗ್ಗದ ಕೃಷ್ಣಪ್ಪ 'ಮೊನ್ನೆದಿನ ಗಾಂಧಿ ಪಾರ್ಟನ್ನೆ ಅಷ್ಟು ಚನ್ನಾಗಿ ಮಾಡಿದೋನು ಇವತ್ತು ಈ ಪಾರ್ಟು ಮಾಡ್ತಿದೀಯಾ' ಎನ್ನುತ್ತಾನೆ. ಅದಕ್ಕೆ ಗಾಂಧಿ ನಿಮ್ಮನೆ ಆಳು ಹಲಸಿನ ಹಣ್ಣನ್ನು ಕಿತ್ಕೊಂಡು ಹೋಗಿದ್ದನ್ನ ನಾನೇ ನೋಡಿದಿನಿ ಬೇಕಾದರೆ ಅವನನ್ನೇ ಕೇಳಿ ಎಂದು ಸತ್ಯ ನುಡಿಯುತ್ತಾನೆ.

ಅದಕ್ಕೆ ಕೃಷ್ಣಪ್ಪನ ಜೊತೆಗಿದ್ದ ಆಳು 'ಯಲಾ ಗಾಂಧಿ ನಾನು ನಮ್ಮ ಧನೀರ ಮನೆಲಿ ಮನೆಮಗನಂತೆ ಬೆಳಿದಿದೀನಿ ನನ್ನ ಹೆಸ್ರು ಕೆಡಸಬೇಕೆಂತ ಮಾಡಿದಿಯಾ' ಎಂದು ಗದರುತ್ತಾನೆ. ಈ ಮಧ್ಯೆ ಕೃಷ್ಣಪ್ಪನ ಸಿಟ್ಟು ಹೆಚ್ಚಾಗಿ ಗಾಂಧಿಯನ್ನು ಹೊಡೆಯಲಿಕ್ಕೆ ಬರುತ್ತಾನೆ.

ಆಗ ಅವನ ತಾಯಿ ಮಧ್ಯೆ ಬಂದು 'ನಾವು ಬಡವರೇ ಇರಬಹುದಾದರೂ ಕಳ್ಳರಲ್ಲ ನಿನ್ನ ಆರೋಪ ಸರಿಯಲ್ಲವೆಂದು' ಆಕ್ಷೇಪಣೆ ಮಾಡುತ್ತಾಳೆ. ಆದರೂ ಆ ಮಾತಿಗೆ ಗಮನ ಕೊಡದ ಕೃಷ್ಣಪ್ಪ ತನ್ನ ಬೈಗಳದ ಸರಣಿಯನ್ನು ಮುಂದುವರಿಸುತ್ತಾನೆ. ಇದರಿಂದ ಕುಪಿತನಾದ ಬಾಲಕ ಗಾಂಧಿ 'ನಿನ್ನ ಮರದಲ್ಲಿ ಕಳುವಾಗಿರೋ ಒಂದು ಹಣ್ಣಿಗೆ ಬದಲಾಗಿ ನನ್ನ ಮರದಲ್ಲಿನ ಎರಡು

ಹಣ್ಣನ್ನು ಕಿತ್ಕೊ ನಾವೇನೂ ಬ್ಯಾಡ ಅನ್ನಲ್ಲ. ಆದ್ರೆ ಈ ರೀತಿಯಾಗಿ ತಗಾದೆ ತೆಗಿಬೇಡ' ಎಂದು ಕಣ್ಣೀರಿಡಲು ಆರಂಭಿಸುತ್ತಾನೆ.

ಈ ದೃಶ್ಯದಲ್ಲಿ ಬಾಲಕ ಗಾಂಧಿಗೆ ಮಹಾತ್ಮನ ಹೆಸರಿಗೆ ಆಗುವ ಅವಮಾನ ಮತ್ತು ಮಾಡದೇ ಇರುವ ತಪ್ಪಿಗೆ ಅನುಭವಿಸಬೇಕಾದ ಅವಮಾನಗಳಿಂದಾಗಿ ತೀವ್ರ ನೋವಾಗುತ್ತದೆ. ಕೃಷ್ಣಪ್ಪನ ಮನೆಯ ಇನ್ನೊಬ್ಬ ಆಳು ಕುಡುಕನನ್ನು ಹಿಡಿದೆಳೆದು ತರುತ್ತಾನೆ. ತಲೆಯ ಮೇಲೆ ಹಲಸಿನ ಕಾಯಿಹೊತ್ತ ಕುಡುಕ ತೂರಾಡುತ್ತಾ ಬರುತ್ತಾನೆ. ಹಲಸಿನ ಕಾಯಿ ಕದ್ದವನು ಅವನೆ ಎಂಬುದು ಎಲ್ಲರಿಗೂ ತಿಳಿಯುತ್ತದೆ.

ಕುಡಿದ ಅಮಲಿನಲ್ಲೇ ಇದ್ದ ಮನುಷ್ಯ ಅಮಲಿನಲ್ಲಿ ತೂರಾಡುತ್ತಲೇ ಬಂದ ವ್ಯಕ್ತಿ 'ಕೃಷ್ಣಪ್ಪನ ಮನೆಯ ಆಳಿಗೆ ಹೇಳಿಯೇ ನಾ ಹಲಸಿನ ಹಣ್ಣನ್ನು ಕಿತ್ತದ್ದು ಅವನಿಗೂ ಕಿತ್ತು ಕೊಟ್ಟೆ ತಿನ್ನೋ ಪದಾರ್ಥ ಅಲ್ವಾ ಅದಕ್ಕಾಗಿ ಕಿತ್ತೆ' ಎಂದು ಸಮಜಾಯಿಷಿಯನ್ನು ಹೇಳುತ್ತಾನೆ.

ಆಗ ಪಕ್ಕದಲ್ಲೇ ನಿಂತಿದ್ದ ಆಳು ತಲೆ ತಗ್ಗಿಸುತ್ತಾನೆ. ಇದರಿಂದ ಅಪಮಾನಿತನಾಗುವ ಕೃಷ್ಣಪ್ಪ ಗಾಂಧಿ ಮತ್ತು ಆತನ ತಾಯಿಯ ಬಳಿ ಕ್ಷಮೆಯನ್ನು ಕೇಳಿ ಅಲ್ಲಿಂದ ಆಳನ್ನು ಬಯ್ಯುತ್ತಾ ಹೊರಟು ಹೋಗುತ್ತಾನೆ. ಹೋಗುವ ಮುನ್ನ ಗಾಂಧಿಯೆಂಬ ಹೆಸರಿಗೆ ತಕ್ಕನಾದವನಪ್ಪ ನೀನು ಎಂದು ಹೇಳಿ ಕ್ಷಮೆಯನ್ನು ಕೇಳಿ ಹೋಗುತ್ತಾನೆ. ಈ ದೃಶ್ಯದಲ್ಲಿ ಸತ್ಯಸಂಧನಾದ ಗಾಂಧಿ ಹೇಗೆ ತನಗೆ ಎದುರಾಗಿ ಬರುವ ಸಮಸ್ಯೆಗಳನ್ನು ಶಾಂತಿ ಸಮಾಧಾನದಿಂದಲೇ ಬಗೆ ಹರಿಸಿಕೊಳ್ಳುತ್ತಾನೆ. ಎಂಬುದರ ಚಿತ್ರಣವಿದೆ.

ಊರಿನಲ್ಲೆಲ್ಲಾ ಹೊಸ ಸಂಭ್ರಮದ ಸುದ್ದಿಯೊಂದು ಬರುತ್ತದೆ. ತರಗತಿಯಲ್ಲಿ ಪಾಠ ಹೇಳಿತ್ತಿದ್ದ ಮೇಷ್ಟ್ರ ಮುಂದೆ ನಾಲ್ಕು ಜನ ಸರ್ಕಾರಿ ಅಧಿಕಾರಿಗಳು ಕಂಪ್ಯೂಟರನ್ನು ತಂದು ಇಟ್ಟು 'ಎಮ್.ಎಲ್.ಎ ಅವರು ನಿಮ್ಮೂರಿಗೆ ಕಂಪ್ಯೂಟರನ್ನು ಮಂಜೂರು ಮಾಡಿದ್ದಾರೆ' ಎನ್ನುತ್ತಾರೆ.

ಮೇಷ್ಟ್ರು ಒಂದು ಕ್ಷಣ ಅವಕ್ಕಾಗುತ್ತಾರೆ ಯಾಕೆಂದರೆ ಕಂಪ್ಯೂಟರನ್ನು ಏನುಮಾಡಬೇಕೆಂದು ಅವರಿಗೆ ತೋಚುವುದಿಲ್ಲ. ಅದೇ ವೇಳೆಗೆ ಗ್ರಾಮಪಂಚಾಯ್ತಿ ಸದಸ್ಯೆ ಗೌರಮ್ಮನ ಗಂಡ ಅಲ್ಲಿಗೆ ಬಂದು ಕಂಪ್ಯೂಟರ್ ಬಂದಿದ್ದಕ್ಕೆ ಸಂತೋಷಗೊಂಡು 'ಸ್ವಾತಂತ್ರ್ಯ ದಿನಾಚರಣೆ ದಿನ ಎಮ್.ಎಲ್.ಎ. ಹೇಳಿದ್ದರಲ್ಲಾ ಅದ್ಕೆ ನಾನೇ ಹೋಗಿ ಜೋರು ಮಾಡಿ ಕಂಪ್ಯೂಟರ್‌ನ ತಂದೆ' ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾನೆ.

ಕಂಪ್ಯೂಟರ್ ಕೊಡಲು ಬಂದಿದ್ದ ಅಧಿಕಾರಿಗಳು ಮೇಷ್ಟ್ರಿಂದ ಸಹಿ ಪಡೆಯುತ್ತಾರೆ. ಹಾಗೆಯೇ ಗ್ರಾಮ ಪಂಚಾಯ್ತಿ ಸದಸ್ಯೆಯ ಸಹಿಯೂ ಬೇಕೆಂದು ಕೇಳುತ್ತಾರೆ. ಆಗ ಗೌರಮ್ಮನ ಗಂಡ 'ನಾನೇ ಸಹಿ ಮಾಡುತ್ತೇನೆ' ಎನ್ನುತ್ತಾನೆ. ಆಗ ಅಧಿಕಾರಿಗಳು ಅದಕ್ಕೆ ಒಪ್ಪುವುದಿಲ್ಲ.

ಕುಪಿತನಾದ ಗೌರಮ್ಮನ ಗಂಡ ಶಾಲೆಯಲ್ಲಿ ಓದುತ್ತಿದ್ದ ಮಗನನ್ನು ಕರೆದು 'ನೋಡ್ಲಾ ಇವರಿಗೆ ಸಹಿ ಹಾಕಿಕಳ್ಸಬೇಕಂತೆ ಅಂತಾ ನಿಮ್ಮಮ್ಮನಿಗೆ ಹೇಳು ಹೊಲದ ತಾವ ದನ ಕಾಯ್ತಾವಳ ಕರ್ಕೊಂಡ್ ಹೋಗು ಇವರನ್ನ ಅಲ್ಲಿಗೆ ಎಂದು ಕೋಪದಲ್ಲೇ ನುಡಿಯುತ್ತಾನೆ. ಸರ್ಕಾರಿ ಅಧಿಕಾರಿಗಳು ಅಲ್ಲಿಂದ ಹೊರಡುತ್ತಾರೆ.

ಎಲ್ಲರಿಗೂ ಅಧಿಕಾರಿಗಳು ಕಂಪ್ಯೂಟರ್‌ನ ಬಗ್ಗೆ ಹೇಳಿರುತ್ತಾರೆ. ಕಂಪ್ಯೂಟರನ್ನು ಜೋಪಾನವಾಗಿ ನೋಡಿಕೊಳ್ಳಬೇಕು. ಚಪ್ಪಲಿ ಹಾಕೊಂಡು ಕಂಪ್ಯೂಟರ್ ರೂಮ್‌ಗೆ ಬರಬಾರದು ಎಂದು. ಆ ಮಾತಿಗೆ ಗಾಂಧಿ ಕೇಳ್ತಾನೆ 'ಶೂ ಹಾಕೊಂಡು ಬರಬೋದ ಸಾ' ಎಂದು. ಅಲ್ಲಿಗೆ ಮೇಷ್ಟ್ರು ರಾಮಪ್ಪನ ತಲೆಗೆ ಹೊಸದೊಂದು ಸಮಸ್ಯೆ ತಲೆಯ ಮೇಲೆ ಏರಿ ಕುಳಿತಂತಾಗುತ್ತದೆ.

ಮಕ್ಕಳಿಂದ ಅದನ್ನು ಕಾಪಾಡೋದು ಹೇಗೆ ಎಂಬ ಪ್ರಶ್ನೆ ಸಮಸ್ಯೆ ಹುಟ್ಟು ಹಾಕುತ್ತದೆ. ಮಾರನೆದಿನ ಮಕ್ಕಳೆಲ್ಲ ಶಾಲೆಗೆ ಬರುತ್ತರೆ. ಕಂಪ್ಯೂಟರ್ ಬಂದ ಖುಷಿಯಲ್ಲಿ ತರಗತಿಗೆ ನುಗ್ಗುವ ಮಕ್ಕಳು ಕಂಪ್ಯೂಟರನ್ನು ನೋಡುವ ಭರದಲ್ಲಿ ನೂಕು ನುಗ್ಗಲು ಮಾಡಿ ಕಂಪ್ಯೂಟರ್ ಮೇಲೆ ಬೀಳುತ್ತಾರೆ. ಇದ್ದಕ್ಕಿದ್ದಂತೆ ಕಂಪ್ಯೂಟರ್ ಆನ್ ಆಗುತ್ತದೆ.

ಆಗ ತರಗತಿಗೆ ಬರುವ ಮೇಷ್ಟ್ರು ಕಂಪ್ಯೂಟರ್ ಆನಾಗಿದ್ದನ್ನು ನೋಡಿ ಮಕ್ಕಳ ಮೇಲೆ ರೇಗುತ್ತಾರೆ. ಜೊತೆಗೆ ತಮಗೂ ಅದನ್ನು ಹೇಗೆ ಆಫ್ ಮಾಡಬೇಕೆಂದು ತೋಚದೇ ಗಾಬರಿಗೊಳ್ಳುತ್ತಾರೆ. ಮಕ್ಕಳನ್ನೆಲ್ಲಾ ಹೊರಗೊಡಿಸಿ ಕಂಪ್ಯೂಟರ್ ಕೋಣೆಯನ್ನು ಮುಚ್ಚುತ್ತಾರೆ. ಮಕ್ಕಳನ್ನು ಮರದಡಿಗೆ ಕರೆದುಕೊಂಡು ಹೋಗಿ ಪಾಠ ಆರಂಭಿಸುತ್ತಾರೆ.

ಈ ದೃಶ್ಯ ಆಧುನಿಕ ಶಿಕ್ಷಣ ಕ್ಷೇತ್ರ ಕಂಪ್ಯೂಟರ್ ಬಂದು ಅದನ್ನು ಆಪರೇಟ್ ಮಾಡಲು ಅರಿಯದ ಜನ ಹೇಗೆ ಸಮಸ್ಯೆಯಲ್ಲಿ ಸಿಕ್ಕು ನರಳುತ್ತಾರೆ ಎಂಬುದನ್ನು ಅದ್ಭುತವಾಗಿ ಚಿತ್ರಿಸಿದೆ.

ನಂತರ ಊರಿನಲ್ಲೆಲ್ಲಾ ಕಂಪ್ಯೂಟರ್ ಬಂದಿದೆ ಎಂದು ತಿಳಿದ ಹಳ್ಳಿಯ ಜನ ತಮ್ಮೂರಿನ ಶಾಲೆಗೆ ಕಂಪ್ಯೂಟರ್ ಬಂದಿದ್ದರಿಂದ ಇನ್ನೂ ಮುಂದೆ ತಮ್ಮ ಮಕ್ಕಳೆಲ್ಲಾ ನಿಜವಾದ ವಿದ್ಯಾವಂತವಾಗುತ್ತಾರೆಂದು ಸಂಭ್ರಮಿಸುತ್ತಾರೆ. ನಲ್ಲಿಯ ಬಳಿ ನೆರೆದ ಹೆಂಗಸರು 'ಕುಡಿಯಲು ನೀರಿಲ್ಲ ಶಾಲೆಗೆ ಕಂಪ್ಯೂಟರ್ ಹಾಕ್ಸವ್ನೆ ಎಮ್.ಎಲ್.ಎ 'ಎಂದು ಆಡಿಕೊಳ್ಳುತ್ತಾರೆ.

ಹಳ್ಳಿಯ ಕುಡುಕ ಗೌಡನ ಬಳಿ ಬಂದು' ಸ್ಕೂಲಿಗೆ ಕಂಪ್ಯೂಟರ್ ಹಾಕ್ಸಿದೀರಂತೆ ಸಾರಾಯಿ ಅಂಗಡಿಗೂ ಒಂದ್ ಹಾಕ್ಸಿ. ಸಾರಾಯಿ ಅಂಗಡಿಯವ ಲೆಕ್ಕ ಸರಿಯಾಗಿ ಮಾಡದೆ ಮೋಸಮಾಡ್ತಾನೆ 'ಎಂದು ಗೋಳು ತೋಡಿಕೊಳ್ಳುತ್ತಾನೆ. ಅದಕ್ಕೆ ಗೌಡ 'ಸಾರಾಯಿ ಅಂಗಡಿಗೆ ಕಂಪ್ಯೂಟರ್ ಬಂದ್ರೆ ಬೆಳಿಗ್ಗೆಯಿಂದ ಅಂಗಡಿಗೆ ಯಾರ್ಯಾರು ಎಷ್ಟೇಷ್ಟು ಬಾರಿ ಬಂದ್ರು ಅನ್ನೊ

ಲೆಕ್ಕಾನು ಸಿಗುತ್ತೆ ಹಾಕಸೋಣ' ಎಂದು ಕೇಳುತ್ತಾನೆ. ಅದಕ್ಕೆ ಕುಡುಕ 'ಬೇಡಪ್ಪೊ ಹಂಗೆನಾದ್ರು ಆದ್ರೆ ನನ್ ಹೆಂಡ್ತಿಗೆ ಲೆಕ್ಕಾ ಸಿಗುತ್ತೆ ನಾ ಬರ್ತಿನಿ' ಎಂದು ಅಲ್ಲಿಂದ ಜಾಗ ಖಾಲಿ ಮಾಡ್ತಾನೆ.

ಗೌಡ ಕುಡುಕನಿಗೆ 'ಕಂಪ್ಯೂಟರ್ ಬರೋಹಂಗೆ ಮಾಡಿದವ ನಾನೆ' ಎಂದು ಜಂಭಕೊಚ್ಚಿ ಕೊಳ್ಳುತ್ತಿರುವಾಗ ಅವನ ಹೆಂಡತಿ ಪಂಚಾಯ್ತಿ ಸದಸ್ಯೆ ಗೌರಮ್ಮ ಅಲ್ಲೆ ಸಗಣಿ ಎತ್ತಿ ಹಾಕುತ್ತಿದ್ದವಳು ಒಂದು ಕ್ಷಣ ಅಸಹನೆಯಿಂದ ಗೌಡನ ಕಡೆ ನೋಡಿ ತನ್ನ ಕೆಲಸ ಮುಂದುವರಿಸುತ್ತಾಳೆ. ಇಲ್ಲಿ ಅವಳ ಸ್ವಾತಂತ್ರ ಹರಣದ ಅಸಹನೆ ಅವಳಿಗಿದೆ ಎಂಬುದು ತಿಳಿಯುತ್ತದೆ.

ಸ್ಥಳೀಯ ರಾಜಕಾರಣದಲ್ಲಿ ಮಹಿಳಾ ಮೀಸಲಾತಿ ಮಸೂದೆಯೂ ಯಾವ ರೀತಿಯ ಪ್ರಭಾವವನ್ನೂ ಕೂಡ ಉಂಟು ಮಾಡಲಾರದೆಂಬ ಸತ್ಯ ಇದರಿಂದ ತಿಳಿಯುತ್ತದೆ. ಏಕೆಂದರೆ ಮೀಸಲಾತಿಯ ಅಡಿಯಲ್ಲಿ ಗೌರಮ್ಮ ಗೆದ್ದು ಪಂಚಾಯ್ತಿ ಸದಸ್ಯೆಯಾದರೂ ಸಹ ಗೌಡನ ಆಳ್ವಿಕೆಯೇ ಹೆಚ್ಚಾಗಿದ್ದು ಗೌರಮ್ಮ ಕೇವಲ ಸಹಿ ಮಾಡಲು ಇರುವವಳು ಎಂಬಂತಾಗಿರುವುದು ಭ್ರಷ್ಟಾಚಾರ ಮತ್ತು ಈಡೇರದ ಮಹಿಳಾಮೀಸಲಾತಿಯ ಬಗೆಗೆ ವಿವರಿಸುತ್ತದೆ.

ಗೌಡನ ಅಜ್ಞಾನದ ಪರಮಾವಧಿಯೆಂದರೆ 'ನಮ್ಮ ಸ್ಕೂಲಿಗೆ ಕಂಪ್ಯೂಟರ್ ಬಂದಿದೆ ಇನ್ಮುಂದೆ ಮಕ್ಕಳು ಓದೋದೆ ಬೇಡ ಕಂಪ್ಯೂಟರ್ ಎಲ್ಲಾ ಓದ್ಕೋಳುತ್ತೆ' ಎನ್ನುವವರೆಗೆ.

ಇತ್ತ ಶಾಲೆಯಲ್ಲಿ ಕಂಪ್ಯೂಟರ್ ಹೇಗೆ ಆಪರೇಟ್ ಮಾಡಬೇಕೆಂದು ಅರಿಯದ ಮೇಷ್ಟ್ರ ರಾಮಪ್ಪ ಕಂಪ್ಯೂಟರ್ ಕೋಣೆಗೆ ಬೀಗ ಹಾಕಿ ಕಿಡಕಿಯಲ್ಲಿ ಕಂಪ್ಯೂಟರ್ ನೋಡಿ ಅದು ಅಲ್ಲಿ ಇರುವುದನ್ನು ನೋಡಿ ಸಮಾಧಾನಗೊಂಡು ಮಕ್ಕಳನ್ನು ಕರೆದುಕೊಂಡು ಮರದಡಿಗೆ ಪಾಠ ಮಾಡಲು ಹೋಗುತ್ತಾರೆ.

ಇದನ್ನು ಕಂಡ ಹಳ್ಳಿಯ ವ್ಯಕ್ತಿಯೊಬ್ಬ 'ಮೇಷ್ಟ್ರಿಗೆ ನಿಮ್ಮಿಂದ ನಮ್ಮ ಮಕ್ಕಳು ಬೀದೀಲಿ ಕೂತವೇ' ಎಂದು ಗೇಲಿ ಮಾಡುತ್ತಾನೆ. ಇದರಿಂದ ಅಸಹಾಯಕರಾದ ಮೇಷ್ಟ್ರ ಗೌಡನ ಮನೆಗೆ ಹೋಗಿ ಗೌಡನಿಗೆ ಹೇಳಿ ಸರ್ಕಾರಕ್ಕೆ ಕಂಪ್ಯೂಟರ್ ಶಿಕ್ಷಕನೊಬ್ಬನ ಅಗತ್ಯವಿದೆ ಎಂದು ಹೇಳಿ ಅರ್ಜಿ ಕೊಡಿಸುತ್ತಾರೆ.

ಸ್ವಲ್ಪ ದಿನಗಳ ನಂತರ ಊರಿಗೆ ಕಂಪ್ಯೂಟರ್ ಶಿಕ್ಷಕ ನಾರಾಯಣಮೂರ್ತಿ ಬರುತ್ತಾನೆ. ನಾರಾಯಣಮೂರ್ತಿ ಹಳ್ಳಿಯನ್ನು ಪ್ರವೇಶಿಸುವುದೇ ಒಂದು ರೀತಿ ಸೋಜಿಗ. ಹುಲ್ಲಿನ ಹೊರೆಯನ್ನು ಹೊತ್ತ ಗಾಂಧಿ ಹೊಲದಿಂದ ಬರುತ್ತಿರುತ್ತಾನೆ.

ಎದುರುಗಡೆ ಇಯರ್ ಪೋನ್‌ನಲ್ಲಿ ಮಾತನಾಡುತ್ತಾ ನಾರಾಯಣಮೂರ್ತಿ ಗಾಡಿಯ ಮೇಲೆ ಬರುತ್ತಾನೆ. ಮಳೆ ಬಂದು ರಸ್ತೆಯೆಲ್ಲ ನೀರು ತುಂಬಿಕೊಂಡಿರುತ್ತದೆ. ಡ್ರೈವ್ ಮಾಡುವಾಗ

(ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-೬ರಲ್ಲಿ ನೋಡಬಹುದು)ಹಳ್ಳಿಯ ರಸ್ತೆಯನ್ನು ಬೈದುಕೊಂಡು ಬರುತ್ತಿರುತ್ತಾನೆ. ರಸ್ತೆಗೆ ಅಡ್ಡಲಾಗಿ ಗಾಂಧಿ ಹುಲ್ಲಿನ ಹೊರೆಯೊಂದಿಗೆ ಬರುತ್ತಾನೆ. ಆ ಸಮಯದಲ್ಲಿ ಆಯತಪ್ಪಿ ನಾರಾಯಣಮೂರ್ತಿ ಹಳ್ಳಕ್ಕೆ ಬೀಳುತ್ತಾನೆ.

ಮೊದಲೇ ಹಳ್ಳಿಯನ್ನ ಕಂಡು ರೋಸಿ ಹೋಗಿದ್ದ ಆತನ ಮನಸ್ಸು ಗಾಂಧಿಯಿಂದಾಗಿ ಇನ್ನಷ್ಟು ರೊಚ್ಚಿಗೇಳುತ್ತದೆ. ಗಾಂಧಿಯನ್ನು ಬೈಯುತ್ತಲೇ ಶಾಲೆಯ ಕಡೆಗೆ ಹೊರಡುತ್ತಾನೆ. ಮಾರನೆದಿನ ಶಾಲೆಗೆ ಬಂದಾಗ ಕಂಪ್ಯೂಟರ್ ರೂಮ್ ಗಲೀಜಾಗಿದ್ದನ್ನು ನೋಡಿ ಮೇಷ್ಟ್ರು ಮತ್ತು ಹುಡುಗರಿಗೆ ದಡ್ಡರೆಂದು ಬಯ್ಯುತ್ತಾನೆ. ಶಾಲೆಯ ಮುಖ್ಯ ಶಿಕ್ಷಕರಾದ ರಾಮಪ್ಪನವರೂ ಸಹ ನಾರಾಯಣಮೂರ್ತಿಯ ಎದುರು ದಡ್ಡನಂತೆ ನಿಲ್ಲಬೇಕಾಗುತ್ತದೆ.

ಇವರಿಂದ ಕಂಪ್ಯೂಟರ್ ಶಿಕ್ಷಣವಿಲ್ಲದವರು ಪ್ರಸ್ತುತ ಕಾಲ ಘಟ್ಟದಲ್ಲಿ ಹೇಗೆ ಬೆಪ್ಪರಂತಾಗಿ ತುಚ್ಛ ಮಾತುಗಳಿಗೆ ಗುರಿಯಾಗಬೇಕಾಗುತ್ತದೆ ಎಂಬುದು ತಿಳಿಯುತ್ತದೆ. ಇದಾದ ನಂತರ ಮಕ್ಕಳಿಗೆ ನಾರಾಯಣಮೂರ್ತಿಯ ಕಂಪ್ಯೂಟರ್ ಪಾಠ ಆರಂಭವಾಗುತ್ತದೆ.

ಬರೀ ಇಂಗ್ಲೀಷ್ ಪದಗಳಲ್ಲೇ ಪಾಠ ಮಾಡುವುದರಿಂದ ಇದು ಮಕ್ಕಳಿಗೆ ಒಂದು ರೀತಿಯ ಕಷ್ಟದ ತರಗತಿ ಎಂದೆನಿಸುತ್ತದೆ ಆದರೆ ಅನಿವಾರ್ಯಗಳಿಗೋಸ್ಕರ ಹೆದರಿಕೊಂಡೆ ಮಕ್ಕಳು ಈ ತರಗತಿಯಲ್ಲಿ ಹಾಜರಿರಬೇಕಾಗುತ್ತದೆ. ಓದಿನಲ್ಲಿ ಮುಂದಿದ್ದ ಗಾಂಧಿಯು ಕೂಡ ಈ ತರಗತಿಯಲ್ಲಿ ಮನಃ ಪೂರ್ವಕವಾಗಿ ಪಾಠ ಕಲಿಯಲು ಸಾಧ್ಯವಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿ ಮಕ್ಕಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸುತ್ತದೆ.

ನಾರಾಯಣಮೂರ್ತಿಯ ಪಾಠದ ಶೈಲಿಯೂ ಸಹ ಭಯಾನಕವಾಗಿರುತ್ತದೆ. ಮಕ್ಕಳನ್ನು ಮಾತು ಮಾತಿಗೆ ಹಳ್ಳಿಯವರು ದಡ್ಡರೆಂದೇ ಬಯ್ಯುತ್ತಾ ಪಾಠ ಮಾಡುವ ಆವನ ಶೈಲಿಗೆ ಮಕ್ಕಳು ಭಯಭೀತರಾಗುತ್ತಾರೆಯೇ ವಿನಃ ಕಲಿಕೆ ಎಂಬುದು ಅಲ್ಲಿ ಸಾಧ್ಯವಾಗುವುದಿಲ್ಲ.

ರಂಗಪ್ಪಜ್ಜ ಗೊಂಬೆಗಳನ್ನು ಸಿದ್ಧ ಮಾಡಿಕೊಂಡು ಪಟ್ಟಣದ ಅಂಗಡಿಗೆ ಮಾರಲು ಹೊರಡುವ ಸಂದರ್ಭ. ವಯಸ್ಸಾದದ್ದರಿಂದ ಆಯಾಸದಿಂದಲೇ ಹೊರಡಲು ಸಿದ್ಧತೆ ಮಾಡಿಕೊಳ್ಳುತ್ತಿರುತ್ತಾನೆ. ಅದೇ ಸಮಯಕ್ಕೆ ಮನೆಗೆ ಬರುವ ಗಾಂಧಿ, ತಾತನ ಬದಲಿಗೆ ಪಟ್ಟಣಕ್ಕೆ ತಾನೇ ಹೊರಡುವುದಾಗಿ ಹೇಳುತ್ತಾನೆ. ಅದಕ್ಕೆ ಅವನ ತಾಯಿ ಮಗನೂ ವ್ಯವಹಾರ ಜ್ಞಾನ ಕಲಿಯಲಿ ಕಳಿಸಿಕೊಡಿ ಎಂದು ಕೇಳುತ್ತಾಳೆ. ತಾತನೂ ಒಪ್ಪಿಗೆ ಕೊಡುತ್ತಾನೆ. ತಾತ ಮಾಡಿದ ಗೊಂಬೆಗಳನ್ನು ಹೊತ್ತು ಗಾಂಧಿ ಅಂಗಡಿಗೆ ಬರುತ್ತಾನೆ. ಅಲ್ಲಿ ಆಧುನಿಕತೆಯ ಸ್ಪರ್ಶಕ್ಕೆ ಒಳಗಾಗಿ ಮಿಂಚುವ ಗೊಂಬೆಗಳ ಎದಿರು ಇವರು ಮಾಡಿದ ಗೊಂಬೆಗಳು ಕಳೆಗುಂದಿದಂತೆ ಕಾಣುತ್ತವೆ.

ಅದಕ್ಕೆ ಅಂಗಡಿಯಾತ ಇದೊಂದು ಬಾರಿ ತಂದಿದ್ದೀಯಾ. ಆದ್ದರಿಂದ ತೆಗೆದುಕೊಳ್ಳುತ್ತೇನೆ. ಇನ್ನೊಮ್ಮೆ ಇಂಥವೇ ಗೊಂಬೆಗಳನ್ನು ತಂದರೆ ತೆಗೆದುಕೊಳ್ಳುವುದಿಲ್ಲವೆಂದು ನಿಮ್ಮ ತಾತನಿಗೆ ತಿಳಿಸು ಎಂದು ಹೇಳಿ ಐದುನೂರು ರೂಪಾಯಿಗಳನ್ನು ಕೊಟ್ಟು ಕಳಿಸುತ್ತಾನೆ. ಅಲ್ಲಿದ್ದ ಗೊಂಬೆಗಳನ್ನು ಕಂಡು ಕುತೂಹಲದಿಂದ ಅವುಗಳ ಬಗ್ಗೆ ಕೇಳುತ್ತಾನೆ. ಆಗ ಅಂಗಡಿಯಾತ ಅವು ಗಾಂಧಿಯ ಮೂರು ಮಂಗಗಳು ಎಂದು ಹೇಳುತ್ತಾನೆ.

ಇದರಿಂದ ಕುತೂಹಲಿಯಾದ ಬಾಲಕ ಗಾಂಧಿ ಅವುಗಳ ರಚನಾ ವಿನ್ಯಾಸವನ್ನೇ ಗಮನದಲ್ಲಿಟ್ಟುಕೊಂಡು ಮನೆಯ ಕಡೆಗೆ ಮರಳುತ್ತಾನೆ. ಮನೆಗೆ ಬರುವ ದಾರಿಯಲ್ಲಿ ಪುಸ್ತಕಗಳ (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-೭ರಲ್ಲಿ ನೋಡಬಹುದು) ರಾಶಿ ಹಾಕಿಕೊಂಡು ಮಾರಾಟಮಾಡುತ್ತಿರುವ ಅಂಗಡಿಯೊಂದು ಸಿಗುತ್ತದೆ.

ಅದರ ಮುಂದೆ ನಿಂತ ಗಾಂಧಿ ಆ ಪುಸ್ತಕಗಳ ರಾಶಿಯಲ್ಲಿ ಬೊಳುವಾರು ಮೊಹಮ್ಮದ್ ಕುಂಞ ಅವರು ಬರೆದಿರುವ 'ಪಾಪು ಗಾಂಧಿ ಬಾಪು ಗಾಂಧಿ ಆದ ಕತೆ' ಪುಸ್ತಕವನ್ನು ಕೊಂಡುಕೊಳ್ಳಲು ಬಯಸುತ್ತಾನೆ. ಅದಕ್ಕೆ ಅಂಗಡಿಯಾತ ಇದು ದೊಡ್ಡೋರಿಗೆ ಬೇಡ ನಿಂಗೇಬೇಕು ಎಂದು ಹೇಳುತ್ತಲೇ ನೂರು ರೂಪಾಯಿಗೆ ಆ ಪುಸ್ತಕವನ್ನು ಗಾಂಧಿಗೆ ಕೊಡುತ್ತಾನೆ. ಪುಸ್ತಕವನ್ನು ಕೊಂಡು ಮನೆಗೆ ಬರುವ ಗಾಂಧಿ ಅವನ ಮಿತ್ರರು ದಾರಿಯಲ್ಲಿ ಸಿಕ್ಕಿದ್ದರಿಂದ ಅವರೊಂದಿಗೆ ಆ ಪುಸ್ತಕದಲ್ಲಿನ ಸ್ವಾರಸ್ಯವನ್ನು ವಿವರಿಸುತ್ತಾನೆ. [3]

ಗುಜರಾತಿನ ವ್ಯಕ್ತಿಯೊಬ್ಬ ಆಫ್ರಿಕಾದಲ್ಲಿ ತೆರಿಗೆ ವಂಚಿಸಿ ನ್ಯಾಯಾಲಯದಲ್ಲಿ ನ್ಯಾಯ ಹೂಡಿ ತನ್ನ ಪರ ವಾದಿಸಲು ಗಾಂಧಿಜೀಯವರನ್ನು ಕರೆದುಕೊಂಡು ಹೋಗಿರುತ್ತಾನೆ. ನ್ಯಾಯ ಪರಿಶೀಲನೆ ಮಾಡಿದ ಗಾಂಧೀಜಿ ಗುಜರಾತಿನ ಮೂಲದವನಾದ ತನ್ನ ಕಕ್ಷಿದಾರನಿಗೆ ಇನ್ನೂ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕೆಂದು ಸತ್ಯದ ಪರವಾಗಿ ಕೋರ್ಟಿನಲ್ಲಿ ವಾದ ಮಾಡಿದ ಘಟನೆಯನ್ನು ಬಾಲಕ ಗಾಂಧಿ ಪುಸ್ತಕದಲ್ಲಿ ಓದಿ ತನ್ನ ಸ್ನೇಹಿತರಿಗೆ ಹೇಳುತ್ತಾನೆ. ಜೊತೆಗೆ ತನ್ನ ತಾತ ನನಗೆ ಗಾಂಧಿಯ ಇಂಥ ಹಲವು ಕತೆಗಳನ್ನು ಹೇಳುತ್ತಾರೆ ಎಂದು ಹೇಳುತ್ತಾನೆ.

ಆಗ ಉಳಿದ ಮಕ್ಕಳೆಲ್ಲ ತಮಗೂ ಗಾಂಧಿಯ ಕತೆಯನ್ನು ಕೇಳಬೇಕೆಂದು ಆಸೆಯಿದೆ ಎಂದೂ ಅಲ್ಲದೇ ಪುಸ್ತಕದಲ್ಲಿ ಗಾಂಧಿಯ ಬಗ್ಗೆ ಒಂದೇ ಪುಟದ ಕತೆಯಿದೆ ಎಂದು ಹೇಳುತ್ತಾರೆ. ಆಗ ಬಾಲಕ ಗಾಂಧಿ ತನ್ನ ಸ್ನೇಹಿತರನ್ನೆಲ್ಲ ತನ್ನ ತಾತನ ಬಳಿಗೆ ಕರೆದೊಯ್ದು ಗಾಂಧಿಯ ಬಗೆಗೆ

---

[3] ಪಾಪು ಗಾಂಧಿ ಬಾಪು ಗಾಂಧಿಯಾದ ಕತೆ ಕೃತಿಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ ಅನುಬಂಧದಲ್ಲಿ ಚಿತ್ರ 1ನ್ನು ನೋಡಬಹುದು

ಕೇಳಲು ಇವರಿಗೂ ಆಸಕ್ತಿಯಿದೆ. ಆದ್ದರಿಂದ ಇವರಿಗೂ ಗಾಂಧಿಯ ಬಗ್ಗೆ ಹೇಳು ಎಂದು ತನ್ನ ತಾತನಿಗೆ ತನ್ನ ಸ್ನೇಹಿತರ ಬಯಕೆಯನ್ನು ಹೇಳುತ್ತಾನೆ.

ಪಟ್ಟಣದಿಂದ ಮನೆಗೆ ಬರುವಾಗ ಗಾಂಧಿ ತನ್ನ ಸ್ನೇಹಿತರನ್ನು ಮನೆಗೆ ಕರೆತಂದದ್ದು ರಂಗಪ್ಪಜ್ಜನಿಗೆ ಆಶ್ಚರ್ಯವಾಗುತ್ತದಾದರೂ ಗಾಂಧಿಯ ಬಗ್ಗೆ ತಿಳಿದುಕೊಳ್ಳಬೇಕೆಂದು ಬಂದ ಮಕ್ಕಳ ಬಯಕೆಗೆ ಕುತೂಹಲದಿಂದಲೇ ತಿಳಿ ಹೇಳುವ ಪ್ರಯತ್ನ ಮಾಡುತ್ತಾನೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-ಆರಲ್ಲಿ ನೋಡಬಹುದು) ಗಾಂಧೀಜಿಯ ಸರಳತೆ ಸಹಜ ಬದುಕಿನ ಪ್ರಯತ್ನ ಮತ್ತು ಯಂತ್ರನಾಗರೀಕತೆಯನ್ನು ವಿರೋಧಿಸುತ್ತಿದ್ದ ಅವರ ಗುಣಗಳ ಪರಿಚಯ ಮಾಡಿಕೊಡುತ್ತಾನೆ.

ಇದೇ ಸಮಯಕ್ಕೆ ಬಾಲಕ ಗಾಂಧಿ ಗೊಂಬೆಗಳ ಅಂಗಡಿಯಲ್ಲಿ ಗಾಂಧಿಯ ಮೂರು ಮಂಗಗಳನ್ನು ನೋಡಿದ್ದನ್ನು ನೆನಪಿಸಿಕೊಂಡು ತನ್ನ ತಾತನನ್ನು ಕೇಳುತ್ತಾನೆ. 'ಗಾಂಧಿಜಿ ಮಂಗಗಳನ್ನೂ ಸಾಕಿದ್ದರಾ?' ಎಂದು ಅದಕ್ಕೆ ರಂಗಪ್ಪಜ್ಜ ನಕ್ಕು 'ಇಲ್ಲ ಮಗು ಅದು ಸತ್ಯವನ್ನು ಪ್ರತಿಪಾದಿಸುವ ಮನುಷ್ಯನ ಮೂರು ಹಂತಗಳನ್ನು ಕುರಿತು ಗಾಂಧಿ ಹೇಳಿದ ಮಾತು'. ಎಲ್ಲ ಭಂಗಿಗಳನ್ನು ಒಂದೇ ಮಂಗದಲ್ಲಿ ತೋರಿಸಲು ಸಾಧ್ಯವಿಲ್ಲವಲ್ಲ ಅದಕ್ಕೆ ಮೂರು ಮಂಗಗಳಲ್ಲಿ ಮೂರು ಆಶಯಗಳನ್ನು ಹೇಳುವ ಪ್ರಯತ್ನವಿದೆ ಎನ್ನುತ್ತಾನೆ.

ಇದೇ ಸನ್ನಿವೇಶದಲ್ಲಿ ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿಯ ಪ್ರಸ್ತಾಪವು ಬರುತ್ತದೆ. ಅದಕ್ಕೆ ತಾತ 'ದೇಶದ ಅಭಿವೃದ್ಧಿಗೆ ಯಂತ್ರಗಳ ಅಗತ್ಯವಿದೆ. ಆದರೆ ಅದು ಮನುಷ್ಯನ ಶ್ರಮವನ್ನು ಕಿತ್ತುಕೊಳ್ಳಬಾರದು. ಮನುಷ್ಯ ಮಾಡುವ ಕೆಲಸವನ್ನು ಮನುಷ್ಯನೇ ಮಾಡಬೇಕು' ಎಂದು ಹೇಳುತ್ತಾ, ತಾನು ಮರದ ಕೆತ್ತನೆ ಮಾಡುತ್ತಿರುವುದನ್ನು ತೋರಿಸುತ್ತಾನೆ. ಇಲ್ಲಿ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನ ಮಕ್ಕಳಿಗೆ ತಿಳಿಸುವ ಪ್ರಯತ್ನ ಮಾಡುತ್ತಾನೆ. ಚಿತ್ರ ವೀಕ್ಷಣೆಯ ನಂತರ ಪ್ರೋ.ಕಿಕ್ಕೇರಿ ನಾರಾಯಣ್ ಗಾಂಧಿ ತತ್ವವನ್ನು ಈ ರೀತಿ ನೆನಪಿಸಿಕೊಳ್ಳುತ್ತಾರೆ. "ಗಾಂಧೀಜಿ ವಿದ್ಯಾಭ್ಯಾಸ ಮುಗಿಸಿ ಭಾರತಕ್ಕೆ ವಾಪಸಾದಾಗ ಹಳ್ಳಿಗಳನ್ನು ನೋಡು ಎಂದು ಗೋಖಲೆ ಸಲಹೆ ನೀಡಿದ್ದರ ಪರಿಣಾಮ ಗ್ರಾಮಸ್ವರಾಜ್ಯ ಹುಟ್ಟಿತು. ಅದರಂತೆ ಚಲನಚಿತ್ರವು ಹಳ್ಳಿಯನ್ನೇ ಪ್ರಮುಖ ಕೇಂದ್ರವನ್ನಾಗಿರಿಸಿಕೊಂಡು ಗಾಂಧೀಜಿ ಅನ್ವೇಷಣೆಯತ್ತ ಸಾಗುತ್ತದೆ. ಆಧುನಿಕ ಯುಗದಲ್ಲಿ ಕಂಪ್ಯೂಟರ್ ಒಂದು ದೊಡ್ಡ ಸವಾಲಾಗಿದ್ದರೂ ಕೂಡ ಆಧುನೀಕರಣವನ್ನು ಗಾಂಧೀಜಿ

ವಿರೋಧಿಸಿರಲಿಲ್ಲ. ಬದಲಿಗೆ ಅಭಿವೃದ್ಧಿಗೂ ಕಂಪ್ಯೂಟರ್ ಗಮನ ನೀಡಬೇಕು ಎನ್ನುವುದಾಗಿತ್ತು. ಅದಕ್ಕಾಗಿ ಈ ಚಿತದಲ್ಲಿ ಕಂಪ್ಯೂಟರ್ ವಿಷಯವನ್ನು ಬಳಸಿಕೊಳ್ಳಲಾಗಿದೆ".[4]

ಲೋಕದ ಆಗುಹೋಗುಗಳನ್ನು ತಿಳಿಯಲು ಕಂಪ್ಯೂಟರ್ ಕಲಿಕೆಯ ಅನಿವಾರ್ಯತೆಯನ್ನು ಸಹ ಹೇಳುತ್ತಾನೆ. ಎಲ್ಲ ಜ್ಞಾನಗಳಂತೆ ಕಂಪ್ಯೂಟರ್ ಜ್ಞಾನವನ್ನು ಸಹ ಪಡೆಯಬೇಕಾದ ಅಗತ್ಯವನ್ನು ಹೇಳುತ್ತಾನೆ. ಮಕ್ಕಳು ಮೇಷ್ಟ್ರಿಂದ ಹೆದರಿಕೊಳ್ಳದೇ ಕಲಿಯಬೇಕಾದ ಅಗತ್ಯವಿರುವುದರಿಂದ ಕಷ್ಟಪಟ್ಟು ಕಲಿಯಲೇಬೇಕೆಂದು ಹೇಳುತ್ತಾನೆ.

ಗಾಂಧಿಯ ಮಂಗಗಳನ್ನು ನೋಡಿದ ಬಾಲಕ ಗಾಂಧಿ ತನ್ನ ತಾತನಿಂದ ಕಲಿತ ಗೊಂಬೆ ಮಾಡುವ ಕಲೆಯನ್ನು ಬಳಸಿಕೊಂಡು ಆಧುನಿಕವಾಗಿ ಗೊಂಬೆ ತಯಾರಿಸುವ ಪ್ರಯತ್ನ ಮಾಡುತ್ತಾನೆ. ಮೂರು ಮಂಗಗಳ ಆಶಯವನ್ನು ಒಂದೇ ಮಂಗನಲ್ಲಿ ತೋರಿಸುತ್ತಾನೆ.

ಇವನು ಸಿದ್ಧಪಡಿಸಿದ ಗೊಂಬೆಯಲ್ಲಿ ಕಣ್ಣು, ಕಿವಿ, ಬಾಯಿಯನ್ನು ಮುಚ್ಚುವಂತೆ ಇರುತ್ತದೆ. ಗೊಂಬೆಯ ಕೈಗಗಳನ್ನು ಅಗತ್ಯಕ್ಕೆ ತಕ್ಕಂತೆ ಮಡಚಬಹುದಾಗಿರುತ್ತದೆ. ಇದನ್ನು ತೆಗೆದುಕೊಂಡು ಅಂಗಡಿಗೆ ಮಾರಾಟ ಮಾಡಿ ಬರುತ್ತಾನೆ. ಹೊಸ ರೀತಿಯ ಗೊಂಬೆಯನ್ನು ನೋಡಿ ಅಂಗಡಿಯಾತ ಅದಕ್ಕೆ ೫೦೦ ರೂಪಾಯಿಗಳನ್ನು ಕೊಡುತ್ತಾನೆ. ನಂತರದ ದೃಶ್ಯದಲ್ಲಿ ಅದೇ ಅಂಗಡಿಗೆ ಗೊಂಬೆಯನ್ನು ಕೊಳ್ಳಲೆಂದು ಬರುವ ವಿದೇಶಿ ಮಹಿಳೆ ಆ ಮಂಗದ ಗೊಂಬೆಯನ್ನು ನೋಡಿ ಅದರ ವಿಶೇಷತೆಯನ್ನು ಕೇಳುತ್ತಾಳೆ.

ಅದಕ್ಕೆ ಅಂಗಡಿಯಾತ ಅದು ಗಾಂಧೀಜಿಯ ಮಂಗವೆಂದು ಅದನ್ನು ಶಾಲೆಯ ಹುಡುಗನೊಬ್ಬ ಮಾಡಿದ್ದಾನೆ ಎಂದು ಹೇಳಿ ೫೦೦೦ ರೂಪಾಯಿಗಳಿಗೆ ಅದನ್ನು ಮಾರಾಟಮಾಡುತ್ತಾನೆ. ಇಲ್ಲಿ ಹಲವು ದಿನಗಳಿಂದ ಶ್ರಮವಹಿಸಿ ದುಡಿದ ಬಾಲಕ ಗಾಂಧಿಗೆ ೫೦೦ ರೂಗಳನ್ನು ಕೊಟ್ಟು ಅಂಡಿಯಾತ ೫೦೦೦ ರೂಗಳನ್ನು ಪಡೆಯುವಲ್ಲಿ ಭಾರತೀಯ ಕಾರ್ಮಿಕನ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದರ ಪರಿಚಯವಾಗುತ್ತದೆ.

ಈ ದೃಶ್ಯದಲ್ಲಿನ ಅಂಶವನ್ನು ಪರಿಗಣಿಸಿ ಹೇಳುವುದಾದರೆ ದುಡಿಯುವವನೆ ನೇರವಾಗಿ ಮಾರುಕಟ್ಟೆಯಲ್ಲಿ ತಾನು ಸಿದ್ಧಗೊಳಿಸಿದ ವಸ್ತುಗಳನ್ನು ಮಾರಾಟ ಮಾಡಬೇಕಾದ ವ್ಯವಸ್ಥೆ ಬರಬೇಕಾಗಿದೆ. ಎಂಬ ಅಂಶದ ಮೇಲೆ ಬೆಳಕು ಚಲ್ಲುವಂತಿದೆ ಈ ದೃಶ್ಯ.

ಇತ್ತ ತರಗತಿಯಲ್ಲಿ ಎಂದಿನಂತೆ ಕಂಪ್ಯೂಟರ್ ಮೇಷ್ಟ್ರು ಒರಟುತನದ ಪಾಠ ಮುಂದುವರಿಯುತ್ತಿರುತ್ತದೆ. ಇದು ಆಧುನಿಕತೆಯ ಲಕ್ಷಣವೇನೋ ಎಂಬಂತಿದೆ. ತಾಳ್ಮೆಯಿಲ್ಲದ ಒರಟುಮಾತುಗಳು ಮತ್ತು ಎದುರಿರುವವರನ್ನು ಹಂಗಿಸುವ ಶೈಲಿಯ ನಾರಾಯಣಮೂರ್ತಿಯ

---

[4] ಜುಲೈ 11 ಪ್ರಜಾವಾಣಿ ಪತ್ರಿಕೆಯ ವರದಿ

ಪಾಠದಿಂದ ಮಕ್ಕಳು ದಿನದಿನಕ್ಕೂ ಮಾನಸಿಕವಾಗಿ ಕುಗ್ಗಿ ಹೋಗುತ್ತಿರುತ್ತಾರೆ. ಊರಿನ ಗೌಡ ತನ್ನ ಮಗ ಸುರೇಶನಿಗೆ ಕಂಪ್ಯೂಟರ್ ಚನ್ನಾಗಿ ಕಲಿಸಲೆಂದು ನಾರಾಯಣ ಮೂರ್ತಿಯನ್ನು ಮನೆಗೆ ಕರೆಸಿ ಬೆಣ್ಣೆ ರೊಟ್ಟಿ ತಿನ್ನಿಸಿ ಉಪಚರಿಸುವ ಸನ್ನಿವೇಶ ಆಧುನಿಕತೆಗೆ ಮರುಳಾಗಿ ಅದರ ತಾಳಕ್ಕೆ ಕುಣಿಯಲು ಸಿದ್ಧರಾಗಿರುವ ಜನರ ಮನಸ್ಥಿತಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಶಾಲೆಯ ಮಕ್ಕಳೆಲ್ಲರೂ ಶಾಲೆ ಮುಗಿಸಿ ಮನೆಗೆ ಬರುವ ದಾರಿಯಲ್ಲಿ ಕೃಷ್ಣಪ್ಪನ ಹೊಲಕ್ಕೆ ನುಗ್ಗಿ ಸೀಬೆಹಣ್ಣು ಕದ್ದು ತಿನ್ನುತ್ತಿರುತ್ತಾರೆ. ಅದೇ ಸಮಯಕ್ಕೆ ಇವರನ್ನು ನೋಡುವ ಕೃಷ್ಣಪ್ಪ ಅವರನ್ನು ಹಿಡಿದುಕೊಳ್ಳಲು ಯತ್ನಿಸುತ್ತಾನೆ. ಹುಡುಗರು ತಪ್ಪಿಸಿಕೊಳ್ಳುತ್ತಾರೆ.

ಗೌಡ ಕೆಂಚಪ್ಪನ ಮಗ ಸುರೇಶನನ್ನು ಗುರುತಿಸುವ ಕೃಷ್ಣಪ್ಪ ಅವರ ಮನೆಯ ಮುಂದೆ ಬಂದು ಗಲಾಟೆ ಮಾಡಲು ಶುರುಮಾಡುತ್ತಾನೆ. ಆಗ ಗೌಡ ತನ್ನ ಮಗನ ಪರವಾಗಿ ನಿಲ್ಲುತ್ತಾನೆ. ಜೊತೆಗೆ ಸಾಕ್ಷಿಯನ್ನು ತೋರಿಸು ಎಂದು ಸವಾಲು ಹಾಕುತ್ತಾನೆ.

ಈ ನಡುವೆ ಕೃಷ್ಣಪ್ಪ ಚುನಾವಣೆಯಲ್ಲಿ ಸೋತದ್ದರಿಂದಲೇ ಕ್ಯಾತೆ ತೆಗಿತೀದಾನೆ ಎಂದು ಅಣಕಿಸುತ್ತಾನೆ. ಇದರಿಂದ ರೊಚ್ಚಿಗೆದ್ದ ಕೃಷ್ಣಪ್ಪ ಸುರೇಶನ ಜೊತೆಗಿದ್ದ ಇತರ ಹುಡುಗರನ್ನು ಕರೆಸಿ ಪಂಚಾಯ್ತಿ ಸಾಕ್ಷಿ ಹೇಳುವ ಮಕ್ಕಳೆಲ್ಲರೂ ತಮಗೇನೂ ಗೊತ್ತೇ ಇಲ್ಲವೆಂದು ಸುಳ್ಳು ಹೇಳುತ್ತವೆ. ಕಡೆಗೆ ಕೃಷ್ಣಪ್ಪ ಗಾಂಧಿಯನ್ನು ಕರೆಸಿ ಅವನಿಂದ ಸತ್ಯ ಹೇಳಿಸುತ್ತಾನೆ. ಮಕ್ಕಳ ವಿಷಯವನ್ನು ದೊಡ್ಡದು ಮಾಡಿಕೊಂಡು ನನಗೆ ಅವಮಾನ ಮಾಡಬೇಡವೆಂದು ಕೆಂಚಪ್ಪಗೌಡನಿಗೆ ಛೀಮಾರಿ ಹಾಕುತ್ತಾನೆ. ಈ ನಡುವೆ ಬಾಲಕ ಗಾಂಧಿಯನ್ನು ಸಾಕ್ಷಿ ಹೇಳಲು ಕರೆಸುತ್ತಾರೆ.

ಒಂದು ಕ್ಷಣ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಗಾಂಧಿ ದೃಢವಾದ ಮನಸ್ಸಿನಲ್ಲಿ ಸತ್ಯವನ್ನೇ ಹೇಳುತ್ತಾನೆ 'ಸುರೇಶ ಸೀಬೆಕಾಯಿ ಕದ್ದದ್ದು ನಿಜ. ಕೃಷ್ಣಪ್ಪಣ್ಣ ಕೇಳಿದರೆ ಕೊಡ್ತಾರೆ ಕದಿಯೋದು ಬ್ಯಾಡ ಅಂದ್ರು ಕೇಳಲಿಲ್ಲ' ಎಂದು ಹೇಳುತ್ತಾನೆ. ಇದರಿಂದ ಸತ್ಯ ಎಲ್ಲರಿಗೂ ಗೊತ್ತಾಗುತ್ತದೆ. ಇದರಿಂದ ಗೌಡನಿಗೆ ಅವಮಾನವಾಗುತ್ತದೆ. ಜೊತೆಗೆ ಸುರೇಶನಿಗೆ ಗಾಂಧಿಯ ಮೇಲೆ ವೈಷಮ್ಯ ಬೆಳೆಯುತ್ತದೆ. ಬಾಲ್ಯದಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನದ ಹಂತದಲ್ಲಿ ಕಂಡುಬರುವ ಲೋಪದೋಷಗಳು ಈ ದೃಶ್ಯದಲ್ಲಿ ಕಂಡು ಬರುತ್ತವೆ. ಡಾ.ಸಿ.ಎಸ್.ದ್ವಾರಕನಾಥ್‌ರವರು 'ತಾರೆ ಜಮೀನ್ ಪರ್' ಚಿತ್ರಕ್ಕೆ ಸಂವಾದಿಯಾಗಿ ನಾನು ಗಾಂಧಿ ಚಿತ್ರವನ್ನು ಹೋಲಿಕೆ ಮಾಡಿ ಈ ರೀತಿಯಾಗಿ ಮಾತನಾಡಿದ್ದಾರೆ. " 'ತಾರೆ ಜಮೀನ್ ಪರ್' ನೋಡಿ ಬಹು ಇಷ್ಟಪಟ್ಟಿದ್ದೆ. ಆದರೆ ಈ ಚಿತ್ರ ನೋಡಿದ ಮೇಲೆ ಹಿಂದಿಯ 'ತಾರೆ ಜಮೀನ್ ಪರ್' ಗಿಂತ ಭಿನ್ನ ಮತ್ತು ಮಹತ್ವದ

ಚಿತ್ರ ಇದು ಎಂದು ಎನಿಸಿತು. ಈ ಚಿತ್ರ ಮಗುವಿನ ಮನಸ್ಸು, ಆಧುನಿಕತೆ ಮತ್ತು ಗಾಂಧಿವಾದ ಮೂರರ ಸಂಗಮ ಎನ್ನಿಸಿತು".[5]

ಒಮ್ಮೆ ದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದ ರಂಗಪ್ಪಜ್ಜನಿಗೆ ನಾರಾಯಣಮೂರ್ತಿ ಎದುರಾಗುತ್ತಾನೆ. ಮಾತನಾಡುತ್ತಾ ರಂಗಪ್ಪಜ್ಜ ಭಾರತದ ಸ್ವಾತಂತ್ರ್ಯಾನಂತರದ ಪರಾವಲಂಬನೆಯ ಕುರಿತಾಗಿ ಮಾತನಾಡುತ್ತಾರೆ. ಜೊತೆಗೆ ಮಕ್ಕಳೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳಬೇಕಾದ ಅಗತ್ಯವನ್ನು ಮನದಟ್ಟು ಮಾಡಿಸುವ ಪ್ರಯತ್ನ ಮಾಡುತ್ತಾನೆ.

ಇದೆಲ್ಲದರ ಜೊತೆಗೆ ಭಾವಿ ಪ್ರಜೆಗಳನ್ನು ರೂಪಿಸಬೇಕಾದ ಅಗತ್ಯವನ್ನು ಕುರಿತಾಗಿ ಮಾತನಾಡುತ್ತಾನೆ. ಆದರೆ ನಾರಾಯಣಮೂರ್ತಿ ಇದ್ಯಾವುದಕ್ಕೆ ತಲೆಯನ್ನೇ ಕೆಡಿಸಿಕೊಳ್ಳದೆ ತನ್ನ ಪಾಡಿಗೆ ತಾನು ಎಂಬಂತೆ ಉಡಾಫೆಯ ಮಾತುಗಳನ್ನಾಡಿ ಅಲ್ಲಿಂದ ಹೊರಡುತ್ತಾನೆ.

ಆಧುನಿಕ ಸಂಸ್ಕೃತಿಗೆ ಒಗ್ಗಿ ಹೊಸ ಜನ ಹೇಗೆ ನಮ್ಮ ಮೂಲ ಪರಂಪರೆ ಮತ್ತು ಸಂಸ್ಕೃತಿಗೆ ಬೆನ್ನು ಮಾಡಿ ನಡೆಯುತ್ತಾರೆ. ಎಂಬ ಅಂಶ ನಮಗೆ ಇದರಿಂದ ತಿಳಿಯುತ್ತದೆ. ಅಲ್ಲದೇ ಹಳ್ಳಿಯಲ್ಲಿ ತನ್ನ ಕುಲಕಸುಬನ್ನು ಮಾಡಿಕೊಂಡಿರುವ ಮುದುಕ ರಂಗಪ್ಪಜ್ಜ ದೇಶದ ಬಗ್ಗೆ ತೋರುವ ಕಾಳಜಿ ಮತ್ತು ಅಭಿಮಾನದಲ್ಲಿ ಒಂದಿಷ್ಟಾದರೂ ಆಧುನಿಕ ಶಿಕ್ಷಣದಲ್ಲಿ ಇಲ್ಲದೇ ಇರುವುದನ್ನು ನೋಡಿದಾಗ ಶಿಕ್ಷಣ ಪದ್ಧತಿ ಸಾಗುತ್ತಿರುವ ದಾರಿ ಯಾವುದು ಎಂಬುದರ ಬಗ್ಗೆ ಸಹಜವಾಗಿಯೇ ಎಂಬಂತೆ ಪ್ರಶ್ನೆಗಳು ಏಳುತ್ತವೆ.

ರಂಗಪ್ಪಜ್ಜನ ಮಾತು ಮಕ್ಕಳಿಗೆ ಮೂಲದಲ್ಲಿಯೇ ಶಿಕ್ಷಣ ಭದ್ರವಾಗಿದ್ದರೇ ಭಾರತದ ಭವ್ಯ ಭವಿಷ್ಯವನ್ನು ನಿರ್ಮಿಸಲು ಪ್ರೇರಕವಾಗಬಲ್ಲದು ಎಂಬುದನ್ನು ಹೇಳುತ್ತದೆ.

ತರಗತಿಯಲೊಮ್ಮೆ ನಾರಾಯಣಮೂರ್ತಿ ಪಾಠ ಮಾಡುತ್ತಿರುತ್ತಾನೆ. ಮಕ್ಕಳೆಲ್ಲಾ ಜಾಮಿಟ್ರಿ ಬಾಕ್ಸ್ ತೆಗೆದುಕೊಂಡು ಚಿತ್ರ ಬರೆದುಕೊಳ್ಳುತ್ತಿರುತ್ತಾರೆ. ಆಗ ಸುರೇಶ ಎದ್ದು ನಿಂತು ನನ್ನ ಜಾಮಿಟ್ರಿ ಬಾಕ್ಸ್ ಕಳೆದಿದೆ ಎಂದು ಸುತ್ತುಮುತ್ತೆಲ್ಲ ಹುಡುಕಿ ಗಾಂಧಿಯ ಚೀಲದಿಂದ ಜಾಮಿಟ್ರಿ ಬಾಕ್ಸ್‌ನ್ನು ತೆಗೆದು ಗಾಂಧಿಯನ್ನು ಕಳ್ಳ ಎಂದು ದೂರುತ್ತಾನೆ.

ಇದರಿಂದ ತರಗತಿಯಲ್ಲೆಲ್ಲಾ ಕೋಲಾಹಲವೇಳುತ್ತದೆ. ನಾರಾಯಣಮೂರ್ತಿ ಗಾಂಧಿಯನ್ನು ಹೀನಾಯವಾಗಿ ಬಯ್ಯುತ್ತಾನೆ. 'ಹೆಸ್ರು ಮಾತ್ರ ಗಾಂಧಿ ಕಳ್ಳತನ ಮಾಡ್ತಿಯಾ' ಎಂದು ಕೂಗಾಡುತ್ತಾನೆ. ಇದರಿಂದ ಗಾಂಧಿಗೆ ಏನು ಮಾಡಬೇಕೆಂದು ತಿಳಿಯುವುದಿಲ್ಲ.

ಅಸಲಿಗೆ ಗಾಂಧಿ ಜಾಮಿಟ್ರಿ ಬಾಕ್ಸನ್ನ ಕದ್ದಿರುವುದೇ ಇಲ್ಲ ಆದರು ಎಲ್ಲರೆದುರು ಬೈಸಿಕೊಳ್ಳಬೇಕಾಗುತ್ತದೆ. ಇದರಿಂದ ಗಾಂಧಿಗೆ ಅವಮಾನವಾಗುತ್ತದೆ. ಇದೇ ಅವಮಾನದಲ್ಲಿ

---

[5] ಜುಲೈ 11ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿ

ಮನೆಗೆ ಬರುವ ಗಾಂಧಿ ತನ್ನ ತಾತನ ಬಳಿ ತನ್ನ ನೋವನ್ನು ಹೇಳಿಕೊಂಡು ಅಳುತ್ತಾನೆ. ಆದರು ಏನೂ ಮಾಡಿದರೂ ಅವನಿಗೆ ಸಮಾಧಾನವಾಗುವುದಿಲ್ಲ. ಗಾಂಧಿಯ ತಾಯಿ ಶಾಂತವ್ವ ತನ್ನ ಮಗನ ಮೇಲೆ ಊರಿನ ಜನರೆಲ್ಲ ಹೊರಿಸುವ ಸುಳ್ಳು ಆಪಾದನೆಗಳನ್ನು ಕೇಳಿ ಸಿಟ್ಟಿಗೇಳುತ್ತಾಳೆ.

ಹಿಂದೊಮ್ಮೆ ಕೃಷ್ಣಪ್ಪ ಹಲಸಿನಕಾಯಿ ಕದ್ದ ಆರೋಪ ಹೊರೆಸಿದರೆ, ಈಗ ಗೌಡನ ಮಗ ಜಾಮಿಟ್ರಿ ಕದ್ದ ಆರೋಪವನ್ನು ಹೊರೆಸುತ್ತಾನೆಂದು ಸಂಕಟ ಪಡುತ್ತಾಳೆ. ಬಡವರೆಂದರೆ ಕಳ್ಳರು ಎಂದು ನೋಡುವ ಸಮಾಜದ ಎದಿರು ಹೇಗೆ ಬಾಳುವುದು? ಆ ನಾರಾಯಣಮೂರ್ತಿಗೆ ಬುದ್ಧಿ ಕಲಿಸಲೇಬೇಕೆಂದು ಹೊರಡುತ್ತಿರುತ್ತಾಳೆ. ಆದರೆ ರಂಗಪ್ಪಜ್ಜ ಆಕೆಯನ್ನು ತಡೆದು ಬುದ್ಧಿವಾದವನ್ನು ಹೇಳುತ್ತಾನೆ. ಆದರೆ ಗಾಂಧಿಯ ಮನಸ್ಸು ಶಾಂತಗೊಳ್ಳುವುದೇ ಇಲ್ಲ. ತರಗತಿಯಲ್ಲಿ ಕಂಪ್ಯೂಟರ್ ಮೇಷ್ಟ್ರು ಅಂದಂತಹ ಮಾತುಗಳು ಮತ್ತೆ ಮತ್ತೆ ನೆನಪಾಗಿ ಅವನ ದುಃಖ ಮತ್ತೂ ಹೆಚ್ಚಾಗುತ್ತದೆ. ಮಹಾತ್ಮ ಗಾಂಧಿಯ ಹೆಸರಿಗೆ ತನ್ನಿಂದ ಅವಮಾನವಾಯಿತಲ್ಲ ಎಂದು ಒಳಗೊಳಗೆ ವ್ಯಥೆಯಿಂದ ಕೊರಗುತ್ತಾನೆ.

ಇದೇ ಕೊರಗಿನಲ್ಲಿ ಮಲಗುವ ಗಾಂಧಿ ಕನಸಿನಲ್ಲಿ ತನ್ನ ತಾಯಿ ಸ್ಕೂಲಿಗೆ ಬಂದು ನಾರಾಯಣಮೂರ್ತಿಯನ್ನು ಪೊರಕೆಯಿಂದ ಹೊಡೆದಂತೆ ಕನಸ್ಸು ಕಾಣುತ್ತಾನೆ. ನಾರಾಯಣಮೂರ್ತಿ ಕನಸಿನಲ್ಲಿಯೂ ತನ್ನನ್ನು ಕಳ್ಳನೆಂದು ಹಂಗಿಸಿದಂತೆ ಕನಸುಕಂಡು ಬೆಚ್ಚಿ ಬಿದ್ದು ಭಯದಿಂದ ಕಿರಿಚಿಕೊಂಡು ಎದ್ದು ಕುಳಿತುಕೊಳ್ಳುತ್ತಾನೆ. ಅವನ ತಾಯಿ ನೀನು ಕಳ್ಳ ಅಲ್ಲಪ ಸುಮ್ನೆ ಮಲಗು ಎಂದು ಸಮಧಾನ ಮಾಡಿ ಮಲಗಿಸುತ್ತಾಳೆ.

ಮಾರನೆ ದಿನ ತಾನು ಕಳ್ಳನಲ್ಲವೆಂದು ಸಾಬೀತು ಮಾಡಲಿಕ್ಕಾಗಿ ಗಾಂಧಿ ಮಹಾತ್ಮ ಗಾಂಧಿಯ ಪ್ರೇರಣೆಯಿಂದ 'ನಾನು ಕಳ್ಳ ಅಲ್ಲ' ಎಂದು ಬೋರ್ಡನ್ನು ಹಾಕಿಕೊಂಡು ಸ್ಕೂಲಿನ ವರಾಂಡದಲ್ಲಿ ಸತ್ಯಾಗ್ರಹಕ್ಕೆ ಕುಳಿತುಕೊಳ್ಳುತ್ತಾನೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ-೯ರಲ್ಲಿ ನೋಡಬಹುದು) ಅವನ ಸುತ್ತ ಅವನ ಸಹಪಾಠಿಗಳು ಸ್ನೇಹಿತರು ಸ್ಕೂಲಿನ ಮುಖ್ಯೋಪಾಧ್ಯಾಯರು ಊರಿನ ಜನರೆಲ್ಲ ಸೇರಿರುತ್ತಾರೆ. ಎಲ್ಲರೂ ಗಾಂಧಿಯನ್ನು ನೋಡಿ ಆಡಿಕೊಳ್ಳುತ್ತಿರುತ್ತಾರೆ. ಅದೇ ಸಮಯಕ್ಕೆ ಅಲ್ಲಿಗೆ ಬರುವ ನಾರಾಯಣಮೂರ್ತಿಯೂ ಮತ್ತೆ ಗಾಂಧಿಯನ್ನು ಹಂಗಿಸುತ್ತಾನೆ.

ರಂಗಪ್ಪಜ್ಜನೂ ಅಲ್ಲಿಗೆ ಬಂದು ಗಾಂಧಿಯನ್ನು ಸಮಧಾನ ಮಾಡುತ್ತಾನೆ. ಊರಿನವರು ರಂಗಪ್ಪಜ್ಜನಿಗೆ ನೀನು ಸ್ವಾತಂತ್ರ ಹೋರಾಟಗಾರ ನೀನೆ ಮೊಮ್ಮಗನಿಗೆ ಹೇಳಿಕೊಟ್ಟು ಈ ಕೆಲಸವನ್ನು ಮಾಡುತ್ತಿದ್ದೀಯಾ ಎಂದು ದೂರುತ್ತಾರೆ. ಇದರಿಂದ ನೊಂದ ರಂಗಪ್ಪಜ್ಜ ಗಾಂಧಿಗೆ

'ಇದೆಲ್ಲ ಇಲ್ಲಿರುವ ಯಾರಿಗೂ ಅರ್ಥವಾಗುವುದಿಲ್ಲ. ನಿನ್ನ ಸತ್ಯಾಗ್ರಹವನ್ನು ಕೈ ಬಿಡು' ಎಂದು ಕೋರಿಕೊಳ್ಳುತ್ತಾನೆ.

ಆದರೆ ಬಾಲಕ ಗಾಂಧಿ ತನ್ನ ತಾತನಿಗೆ 'ನೀನೆ ನನ್ನಲ್ಲಿ ಗಾಂಧಿಯ ಉದಾರ ಗುಣಗಳನ್ನು ಹೇಳಿ ಗಟ್ಟಿಗೊಳಿಸಿದೆ. ಈಗ ಸತ್ಯವನ್ನು ಕಾಪಾಡಲು ನಾ ಹೊರಟಿರುವಾಗ ನೀನೆ ಬಿಡು ಎನ್ನುತ್ತೀಯಾ ಇದು ನನ್ನಿಂದ ಸಾಧ್ಯವಿಲ್ಲ ತಾತ' ಎಂದು ಬಿಸಿಲಿನಲ್ಲಿ ಹಾಗೆಯೇ ಕುಳಿತುಕೊಂಡಿರುತ್ತಾನೆ. ಇಲ್ಲಿ ಬಾಲಕ 'ಗಾಂಧಿ' ಗಾಂಧಿ ತತ್ವಗಳನ್ನು ತನ್ನಲ್ಲಿ ಮೇಳೈಸಿಕೊಂಡಿರುವುದನ್ನು ಕಾಣಬಹುದು. ಈ ಚಿತ್ರವನ್ನು ವಿಕ್ಷೀಸಿದ ನಂತರ ಖ್ಯಾತ ಸಾಹಿತಿಗಳು ಮತ್ತು ವಿಮರ್ಶಕರು ಆದ ಸಾ.ಶಿ.ಮರುಳಯ್ಯನವರು "ನನಗೆ ತುಂಬಾ ಇಷ್ಟವಾದ ಚಿತ್ರವಿದು. ಬಾಲಕನೊಬ್ಬ ಮತ್ತೆ ಮತ್ತೆ ಗಾಂಧೀವಾದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವ ವಿಷಯವನ್ನು ವಿಸ್ತಾರವಾಗಿ ಹೇಳುತ್ತಾ ಹೋಗುವ ಚಿತ್ರವಿದು. ಕಂಪ್ಯೂಟರ್ ಅಗತ್ಯತೆಯನ್ನು ತುಂಬಾ ಚನ್ನಾಗಿ ಪ್ರಶ್ನಿಸುತ್ತದೆ. ಶಿಕ್ಷಕರಿಗೆ ಪೋಷಕರಿಗೆ ಬಹು ಮುಖ್ಯ ಚಿತ್ರ ಇದಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. [6]

ಈ ಮಧ್ಯೆ ಊರಿನ ಒಬ್ಬ ವ್ಯಕ್ತಿ 'ಓದುತ್ತಿರುವಾಗಲೇ ಸ್ಟ್ರೈಕ್ ಮಾಡೋರು ಮುಂದೆ ರಾಜಕಾರಣಿಗಳಾಗ್ತಾರಂತೆ. ನೀನು ಮುಂದೊಮ್ಮೆ ಎಂ.ಎಲ್.ಎ ಆಗ್ತೀಯಾ 'ಎಂದು ಗೇಲಿ ಮಾಡುತ್ತಾನೆ. ಈ ಮಾತಿನಿಂದ ಸುತ್ತ ಇದ್ದವರೆಲ್ಲಾ ನಗಾಡುತ್ತಾರೆ. ಆಗ ಗಾಂಧಿಯ ದುಃಖ ಇನ್ನೂ ಹೆಚ್ಚಾಗುತ್ತದೆ.

ಯಾರು ಏನೆ ಹೇಳಿದರೂ ತನ್ನ ಪಟ್ಟನ್ನು ಬಿಡದ ಗಾಂಧಿ ಅಲ್ಲಿಂದ ಮೇಲೇಳುವುದಿಲ್ಲ. ಆ ಹೊತ್ತಿಗೆ ಬಿಸಿಲಿನಲ್ಲಿ ಕುಳಿತ ತನ್ನ ಮಗನನ್ನು ಕಂಡು ಗೋಳಾಡುತ್ತಾ ಶಾಂತವ್ವ ಮಗನನ್ನು ಮೇಲೇಳಿಸುವ ಪ್ರಯತ್ನ ಮಾಡುತ್ತಾಳೆ. ಆದರೂ ಮಗನನ್ನು ಒಲಿಸುವುದರಲ್ಲಿ ಸೋಲುತ್ತಾಳೆ.

ಈ ದೃಶ್ಯವನ್ನು ನೋಡಿದ ಗಾಂಧಿಯ ಸ್ನೇಹಿತರೆಲ್ಲ ಸುರೇಶನನ್ನು ದೂರಮಾಡುವುದಾಗಿ ಮಾತಾಡಿಕೊಳ್ಳುತ್ತಾರೆ. ಇದರಿಂದ ಸುರೇಶ ಗಾಂಧಿಯ ಬಳಿ ಬಂದು ತಪ್ಪೊಪ್ಪಿಕೊಳ್ಳುತ್ತಾನೆ. ಸೀಬೆ ಹಣ್ಣನ್ನು ಕದ್ದದ್ದನ್ನು ಕೃಷ್ಣಪ್ಪನಿಗೆ ಹೇಳಿದ್ದರಿಂದ ನಾನು ಈ ರೀತಿ ದ್ವೇಷ ತೀರಿಸಿಕೊಂಡೆ ಎಂದು ಅಳುತ್ತಾ ಗಾಂಧಿಯ ಕ್ಷಮೆ ಕೇಳುತ್ತಾನೆ. ಇದರಿಂದ ಜನರಿಗೆಲ್ಲಾ ಗಾಂಧಿ ಕಳ್ಳನಲ್ಲವೆಂಬ ಸತ್ಯ ತಿಳಿಯುತ್ತದೆ.

ಗಾಂಧಿಯನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ಸಂಜೆಯ ಹೊತ್ತಿಗೆ ರಂಗಪ್ಪಜ್ಜ ಗಾಂಧಿಗೆ ಜಾಮೆಟ್ರಿ ಬಾಕ್ಸನ್ನು ತಂದು ಕೊಡುತ್ತಾನೆ. ಆದರೆ ಗಾಂಧಿ ವಿಪರೀತ ಜ್ವರದಿಂದ

---

[6] ಜುಲೈ 4ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟವಾದ ವರದಿ

ಬಳಲುತ್ತಿರುತ್ತಾನೆ. ಇದನ್ನು ಕಂಡು ಗಾಬರಿಗೊಂಡ ಶಾಂತವ್ವ ಮಾವನಿಗೆ ಹೇಳಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾಳೆ.

ಆಸ್ಪತ್ರೆಯ ದೃಶ್ಯದಲ್ಲಿ ಕಾಯಿಲೆಯಿಂದ ನರಳುತ್ತಿರುವ ಗಾಂಧಿಯನ್ನು ಪರೀಕ್ಷಿಸುತ್ತಾ ಡಾಕ್ಟರ್ ಅವನ ಹೆಸರನ್ನು ಕೇಳುತ್ತಾನೆ. ಗಾಂಧಿ ಎಂದು ಹೇಳಿದಾಗ ಆಶ್ಚರ್ಯಗೊಂಡು ಎಲ್ಲೋ ಕೇಳಿದ ನೆನಪು ನನ್ನ ಕಾರಿಗೆ ಚಂಡನ್ನು ಹೊಡೆದವ ನೀನೆ ಅಲ್ಲವೇ ನಿನಗೂ ಕಾಯಿಲೆಯೇ ಎಂದು ಹಾಸ್ಯಮಾಡುತ್ತಾನೆ.

ಅಷ್ಟಕ್ಕೆ ಸುಮ್ಮನಾಗದೇ ತನ್ನ ಆಸ್ಪತ್ರೆಯಲ್ಲಿನ ಸಿಬ್ಬಂದಿಯನ್ನೆಲ್ಲಾ ಕರೆದು ಗಾಂದಿ ಕಾಯಿಲೆಯಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದಾನೆ ನೋಡಿ ಎಂದು ನಗಾಡುತ್ತಾನೆ. ಇದರಿಂದ ಗಾಂಧಿ ಮತ್ತು ಆತನ ತಾತ, ತಾಯಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತೋಚುವುದಿಲ್ಲ. ಪ್ರೊ.ರವಿವರ್ಮಕುಮಾರ್ ಚಿತ್ರವನ್ನು ಕುರಿತು "ಮಕ್ಕಳಿಗೆ ಗಾಂಧಿ ಮುಂತಾದ ಹೆಸರುಗಳನ್ನಿಡುವುದು ಈಗ ಕಷ್ಟಕರವಾಗಿದೆ. ಇಂದಿನ ದಿನಗಳಲ್ಲಿ ಗಾಂಧಿ ಹೆಸರಿಟ್ಟರೂ ಮಕ್ಕಳು ಹಿಂಸೆ ಎದುರಿಸುವ ವಾತಾವರಣವಿದೆ. ಪ್ರತಿಯೊಂದು ಸನ್ನಿವೇಶಗಳು ಗಾಂಧಿಯನ್ನು ಮತ್ತೆ ಮತ್ತೆ ನೆನಪಿಗೆ ತರುವ ಚಿತ್ರವಾಗಿದೆ" ಎಂದಿದ್ದಾರೆ.

ಈ ಸಂದರ್ಭದಲ್ಲಿ ಬಾಲಕ ಗಾಂಧಿ ತಾತ ಮತ್ತು ತಾಯಿ ಡಾಕ್ಟರನ್ನು ಎದುರು ಹಾಕಿಕ್ಕೊಳ್ಳುವುದು ಹೇಗೆ ಎಂಬ ಸಂದಿಗ್ಧದಲ್ಲಿಯೇ ತೊಳಲಾಡುವ ಮೂವರು ಅವಮಾನದಿಂದ ಕುಸಿದು ಹೋಗುತ್ತಾರೆ ಎಂಬುದು ಕಾಣುತ್ತದೆ.

ಈ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿಯೂ ಗಾಂಧಿ ಎಂಬ ಹೆಸರಿಗೆ ಆಗುವ ಅವಮಾನ ಬಾಲಕ ಗಾಂಧಿಯನ್ನು ಕೆರಳಿಸುತ್ತದೆ. ಜೊತೆಗೆ ರಂಗಪ್ಪಜ್ಜನೂ ಸಹ ಮಹಾತ್ಮನ ಹೆಸರಿಗೆ ಆಗುತ್ತಿರುವ ಅವಮಾನವನ್ನು ಕಂಡು ಸಿಡಿದೇಳುತ್ತಾನೆ. ಡಾಕ್ಟರ್, ಸ್ವಾತಂತ್ರ್ಯ ಹೋರಾಟಗಾರನೆಂಬ ಕಾರಣಕ್ಕಾಗಿ ರಂಗಪ್ಪಜ್ಜನನ್ನು ಸಹ ಗೇಲಿ ಮಾಡುತ್ತಾನೆ.

ಈ ಸನ್ನಿವೇಶವನ್ನು ಸಹಿಲಾರದೆ ರಂಗಪ್ಪಜ್ಜ ಭಾರತದ ಭವ್ಯ ಪರಂಪರೆಗೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಿರೆಂದು ಬೈಯ್ಯುತ್ತಾನೆ. 'ಬಡವರಾದ ಕಾರಣಕ್ಕಾಗಿ' ನನ್ನ ಮೊಮ್ಮಗನ ಜೀವ ಮಹಾತ್ಮರ ಜೀವನ ನಿಮಗೆ ನಗೆಪಾಟಲಾಯ್ತು' ಎಂದು ಆಕ್ರೋಶದಿಂದ ಪ್ರಶ್ನಿಸುತ್ತಾನೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ–೧೧ರಲ್ಲಿ ನೋಡಬಹುದು)

ಈ ಮಾತಿನಿಂದ ಡಾಕ್ಟರ್ ಅವಮಾನಿತನಾಗಿ ಗಾಂಧಿಯನ್ನು ಪರೀಕ್ಷಿಸಲೆಂದು ಕೈ ಹಿಡಿಯುತ್ತಾನೆ. ಈಗಾಗಲೇ ಮಾನಸಿಕವಾಗಿ ಬಹುವಾಗಿ ಘಾಸಿಗೊಂಡಿದ್ದ ಬಾಲಕ ಗಾಂಧಿ

ಡಾಕ್ಟರ್‌ನ ಕೈಯನ್ನು ದೂರ ತಳ್ಳಿ 'ಮಹಾತ್ಮ ಗಾಂಧಿಗೆ ಅವಮಾನವಾದ ಈ ಜಾಗದಲ್ಲಿ ನಾವಿರೋದು ಬೇಡ. 'ನಾ ಸತ್ರೆ ನನ್ನ ನಮ್ಮ ಹೊಲದಲ್ಲಿರೋ ಹಲಸಿನ ಮರದ ಬುಡದಲ್ಲಿ ಹಾಕಿ' ಎಂದು ಕೇಳಿಕೊಳ್ಳುತ್ತಾನೆ.

ಇದರಿಂದ ಹತಾಶಳಾದ ತಾಯಿ ಅವನನ್ನ ಸಂತೈಸುವ ಪ್ರಯತ್ನ ಮಾಡುತ್ತಾಳೆ. ಗ್ಲುಕೋಸ್ ಹಾಕಿಸಿಕೊಂಡು ಮಲಗಿದ ಗಾಂಧಿಯನ್ನು ನೋಡಲು ಸ್ಕೂಲಿನ ಮುಖ್ಯೋಪಾಧ್ಯಾಯ ರಾಮಪ್ಪ ಬರುತ್ತಾರೆ. ಶಾಲೆಯ ಇತರ ಮಕ್ಕಳನ್ನು ಜೊತೆಗೆ ಕರೆದುಕೊಂಡು ಗಾಂಧಿಗೆ ಹಣ್ಣು ಹಂಪಲು ತಂದು ಕೊಡುತ್ತಾರೆ. ಅವನ ಯೋಗಕ್ಷೇಮವನ್ನು ವಿಚಾರಿಸುತ್ತಾರೆ. (ಸಿನಿಮಾದ ದೃಶ್ಯವನ್ನು ಅನುಬಂಧದಲ್ಲಿ ಕೊಟ್ಟಿರುವ ಚಿತ್ರ–೧೧ರಲ್ಲಿ ನೋಡಬಹುದು)

ರಂಗಪ್ಪಜ್ಜ ಮತ್ತು ಶಾಂತವ್ವನಿಗೆ ಸಮಾಧಾನವನ್ನು ಮಾಡಿ ಗಾಂಧಿಗೆ ಬೇಗ ಗುಣಮುಖನಾಗುವಂತೆ ಹೇಳುತ್ತಾರೆ. ಹಾಸಿಗೆಯಲ್ಲಿ ಮಲಗಿದ್ದಲ್ಲೇ ಗಾಂಧಿ 'ಕಂಪ್ಯುಟರ್ ಮೇಷ್ಟ್ರ ನಾರಾಯಣಮೂರ್ತಿ ಹೇಗಿದ್ದಾರೆ. ಕಂಪ್ಯೂಟರ್ ಹೇಗಿದೆ' ಎಂದು ಕೇಳುತ್ತಾನೆ. ಇದರಿಂದ ಮೇಷ್ಟ್ರು ರಾಮಪ್ಪನಿಗೂ ದುಃಖವಾಗುತ್ತದೆ. ನೀನು ಬೇಗ ಗುಣವಾಗಿ ಬಂದರೆ ಎಲ್ಲವೂ ಸರಿಯಾಗುತ್ತದೆ. ಎಂದು ಹೇಳಿ ಅಲ್ಲಿಂದ ಹೊರಟು ಬಿಡುತ್ತಾರೆ.

ಇತ್ತ ಶಾಲೆಯಲ್ಲಿ ನಾರಾಯಣಮೂರ್ತಿಯನ್ನು ಕರೆದು ಗಾಂಧಿಯ ದೇಹ ಸ್ಥಿತಿ ಸರಿಯಿಲ್ಲ. ಒಮ್ಮೆ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳುತ್ತಾನೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಬದಲಿಗೆ ನಾರಾಯಣಮೂರ್ತಿ 'ಅವನ ಕಾಯಿಲೆಗೆ ಕಾರಣ ನಾನಲ್ಲ. ಅದೂ ಅಲ್ಲದೇ ಒಬ್ಬ ಮೇಷ್ಟ್ರಾಗಿ ಅವನನ್ನು ತಿದ್ದಲು ಹೋಗಿದ್ದೇ ನನ್ನ ತಪ್ಪಾ' ಎಂದು ವಾದಿಸುತ್ತಾನೆ. ಇದರಿಂದ ಇದುವರೆಗೂ ಎಲ್ಲವನ್ನು ಮೌನವಾಗಿಯೇ ಸಹಿಸಿಕೊಳ್ಳುತ್ತಿದ್ದ ಮುಖ್ಯೋಪಾದ್ಯಾಯ ರಾಮಪ್ಪ ನಾರಾಯಣಮೂರ್ತಿಗೆ ಬುದ್ದಿವಾದವನ್ನು ಹೇಳುತ್ತಾರೆ.

ಮಕ್ಕಳಿಗೆ ಪ್ರೀತಿಯಿಂದ ಪಾಠ ಹೇಳಿಕೊಡಬೇಕಾದ ಗುರುತರ ಜವಾಬ್ದಾರಿಯನ್ನು ಮನದಟ್ಟು ಮಾಡಿಕೊಡುವ ಪ್ರಯತ್ನ ಮಾಡುತ್ತಾರೆ. ಇದೇ ಸಂದರ್ಭದಲ್ಲಿ ನಾರಾಯಣಮೂರ್ತಿ ಗಾಂಧಿ ಹೆಸರಿಗೆ ಮಾಡಿದ ಅವಮಾನವನ್ನು ತಿದ್ದಿಕೊಳ್ಳುವಂತೆ ಬುದ್ದಿಹೇಳುತ್ತಾರೆ. ಅದಕ್ಕೆ ನಾರಾಯಣಮೂರ್ತಿ 'ಹೆಸರಿನಲ್ಲೇನಿದೆ ಸಾರ್ ನನ್ನ ಹೆಸರು ಮೊದಲು ಮಂಗೇಶ ಅಂತಾ ಇತ್ತು ಕಂಪ್ಯೂಟರ್ ಕಲಿತೆ. ಆಮೇಲೆ ಅದೇ ಸಂದರ್ಭದಲ್ಲಿ ನಾರಾಯಣಮೂರ್ತಿ ಅನ್ನೋ ಹೆಸರು ಚಾಲ್ತಿಯಲ್ಲಿತ್ತು. ನನ್ನ ಹೆಸರನ್ನು ಬದಲಾಯಿಸಿಕೊಂಡೆ' ಎನ್ನುತ್ತಾನೆ. ಆಗ ಮೇಷ್ಟ್ರು ರಾಮಪ್ಪ ಸಿಟ್ಟಿಗೆದ್ದು ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಪಾಠ ಮಾಡಿದರೆ ಮಾತ್ರ ಅವರಿಗೆ ಬುದ್ದಿ

ಹೇಳಬಹುದು. ಪಾಠವನ್ನು ಕಲಿಸಬಹುದು. ಇಲ್ಲದಿದರೇ ಏನೂ ಸಾಧ್ಯವಿಲ್ಲ. ಪ್ರೀತಿಯಿಂದಲ್ಲದೇ ಅಹಂನಿಂದ ಮಕ್ಕಳಿಗೆ ಬುದ್ದಿವಾದವನ್ನು ಹೇಳಲು ಸಾಧ್ಯವಿಲ್ಲ ಎಂದು ತಿಳಿಹೇಳಿದಾಗ ನಾರಾಯಣಮೂರ್ತಿಗೆ ತನ್ನ ತಪ್ಪಿನ ಅರಿವಾಗಿ ಅವರ ಬಳಿ ಕ್ಷಮೆ ಕೇಳುತ್ತಾನೆ. ಮಕ್ಕಳ ಮನಸ್ಸನ್ನು ಅರಿತು ಪಾಠ ಮಾಡುವುದಾಗಿ ಒಪ್ಪಿಕೊಳ್ಳುತ್ತಾನೆ. ಬಾಲಕ ಗಾಂಧಿಯ ಬಳಿ ಕ್ಷಮೆ ಕೇಳುವುದಾಗಿಯೂ ಮುಂದೆ ಎಂದಿಗೂ ಇಂತಹ ತಪ್ಪನ್ನು ಮಾಡುವುದಿಲ್ಲವೆಂದು ಪಶ್ಚಾತ್ತಾಪದ ದನಿಯಲ್ಲಿ ರಾಮಪ್ಪನವರ ಬಳಿ ಕ್ಷಮೆಕೋರುತ್ತಾನೆ.

ಇತ್ತ ಬಾಲಕ ಗಾಂಧಿ ಆಸ್ಪತ್ರೆಯಿಂದ ಗುಣವಾಗಿ ಊರಿಗೆ ಮರಳುತ್ತಾನೆ. ಆಸ್ಪತ್ರೆಯಲ್ಲಿದ್ದಾಗಲೇ ತನ್ನ ಹೆಸರನ್ನು ಬದಲಾಯಿಸಬೇಕೆಂದು ಕೇಳಿಕೊಂಡಿದ್ದರಿಂದ ತನ್ನ ತಾತ ಮತ್ತು ತಾಯಿಯ ಒಪ್ಪಿಗೆಯ ಮೇರೆಗೆ ತನ್ನ ಹೆಸರನ್ನು ಬದಲಾಯಿಸಿಕೊಳ್ಳುವ ಆಲೋಚನೆಯನ್ನು ಮಾಡುತ್ತಿರುತ್ತಾನೆ.

ಆ ದಿನ ಮನೆಯಲ್ಲಿ ಹಬ್ಬದಡಿಗೆಯನ್ನು ಮಾಡಿದ ತಾಯಿ ಮಗನನ್ನು 'ವಿದ್ಯಾಸಾಗರ'ನೆಂದು ಕರೆದು ಆತನ ಹೆಸರನ್ನು ಬದಲಿಸುತ್ತಾಳೆ. ತಾತನು ಇದಕ್ಕೆ ಒಪ್ಪಿಕೊಳ್ಳುತ್ತಾನೆ. ರಂಗಪ್ಪಜ್ಜ ಗಾಂಧಿಯ ಮೇಲಿನ ಅಭಿಮಾನದಿಂದ ಇಟ್ಟ ಹೆಸರು ಈ ರೀತಿಯಾಗಿ ಜನರ ಅವಮಾನದಿಂದ ಬದಲಿಸಬೇಕಾದ ಸಂದರ್ಭದಿಂದ ಬಹಳ ದುಃಖಿಸುತ್ತಾನಾದರೂ ಮೊಮ್ಮಗನ ಮಾನಸಿಕ ಸ್ವಾಸ್ಥ್ಯ ಮತ್ತು ಮಹಾತ್ಮ ಗಾಂಧಿಯ ಹೆಸರಿಗೆ ಅವಮಾನವಾಗಬಾರದೆಂದು ಮೊಮ್ಮಗನ ಹೆಸರನ್ನು ವಿದ್ಯಾಸಾಗರನೆಂದು ಬದಲಿಸುತ್ತಾನೆ. ಈ ಮೂಲಕ ಬಾಲಕ ಗಾಂಧಿ ವಿದ್ಯಾಸಾಗರನಾಗುತ್ತಾನೆ.

ಮರುದಿನ ಶಾಲೆಗೆ ಬರುವ ಗಾಂಧಿ ತನ್ನ ಹೆಸರನ್ನು ಬದಲಾಯಿಸಿರುವುದನ್ನು ಹೇಳುತ್ತಾನೆ. ಇದರಿಂದ ಎಲ್ಲರೂ ನಿರಾಶರಾಗುತ್ತಾರೆ. ಇನ್ನ್ಯಾವತ್ತು ಗಾಂಧಿಯ ಹೆಸರಿಗೆ ಅವಮಾನ ಮಾಡುವುದಿಲ್ಲವೆಂದು ನಾರಾಯಣಮೂರ್ತಿಯು ಸಹ ಕ್ಷಮೆ ಕೇಳುತ್ತಾನೆ. ಆದರೂ ಗಾಂಧಿ ಒಪ್ಪುವುದಿಲ್ಲ. ಕಡೆಗೆ ಎಲ್ಲರೂ ಒತ್ತಾಯಿಸುತ್ತಾರೆ. ಆಗ ಗಾಂಧಿ ತನ್ನ ಹೆಸರನ್ನು ಬದಲಾಯಿಸಿಕೊಳ್ಳುವುದಿಲ್ಲವೆಂದು ಹೇಳಿ ಸಂತಸದಿಂದ ಹೊರಡುತ್ತಾನೆ. ಆಗ ಶಾಲೆಯ ಮುಖ್ಯೋಪಾಧ್ಯಾಯರು ರಾಮಪ್ಪ 'ವಿದ್ಯಾಸಾಗರ' ಎಂದು ಕೂಗುತ್ತಾರೆ. ಆಗ ಗಾಂಧಿ ತಿರುಗಿ ನಿಂತು 'ಅಲ್ಲ ಸರ್ ನಾನು ಗಾಂಧಿ' ಎನ್ನುವಲ್ಲಿಗೆ ಚಿತ್ರ ಮುಗಿಯುತ್ತದೆ.

ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಚಲನ ಚಿತ್ರದ ಕತೆಯನ್ನು ಸ್ಥೂಲವಾಗಿ ಪರಿಚಯಿಸುವ ಕೆಲಸವನ್ನಷ್ಟೇ ಮಾಡಲಾಗಿದೆ. ಚಿತ್ರದಲ್ಲಿರುವ ಪಾತ್ರಗಳು ಮತ್ತು ಪಾತ್ರ ಪಾತ್ರಗಳ ನಡುವಿನ ಪರಸ್ಪರ ಸಂಬಂಧ ಮತ್ತು ಕಥೆಯ ಓಟಕ್ಕೆ ಆ ಪಾತ್ರಗಳು ಸಲ್ಲಿಸುವ ನ್ಯಾಯ ಇವುಗಳನ್ನು

ಆಧರಿಸಿ ಇಲ್ಲಿ ಸಿನಿಮಾಕತೆಯ ಮೂಲ ಆಶಯವನ್ನು ಹೇಳುವ ಪ್ರಯತ್ನ ಮಾಡಿದ್ದೇನೆ. ಸ್ಥೂಲವಾಗಿ ಸಿನಿಮಾ ಕತೆಯನ್ನು ಹೇಳುವುದಾದರೆ ಸ್ವಾತಂತ್ಯ ಹೋರಾಟಗಾರ ರಂಗಪ್ಪ ಹಳ್ಳಿಯಲ್ಲಿ ನಾನಾ ರೀತಿಯ ಕುಶಲ ಕೆಲಸ ಮಾಡಿಕೊಂಡಿರುವ ವ್ಯಕ್ತಿ ಗಾಂಧಿವಾದಿ. ಸೊಸೆ ಶಾಂತವ್ವ ರಂಗಪ್ಪನ ಮೊಮ್ಮಗನೇ ಗಾಂಧಿ ಬಡತನದ ಮಡಿಲಿನಲ್ಲಿ ದಿನದಿನವೂ ಕಷ್ಟದ ಜೋಗುಳ ಒಂದು ಕಡೆ. ಅದನ್ನು ಹಿಮ್ಮೆಟ್ಟಿ ಏನಾದರೂ ಸಾಧಿಸಬಲ್ಲೆನೆಂಬ ಛಲ ಮತ್ತೊಂದು ಕಡೆ. ಕಷ್ಟವಿದೆಯೆಂದು ನೈತಿಕತೆ ಬಿಟ್ಟುಕೊಡದ ದಿಟ್ಟತನ. ಹಳ್ಳಿಯ ಬಾಲಕನ ಹೆಸರು ಗಾಂಧಿ. ಎಲ್ಲರೂ ನಗೆಪಾಟಲು ಮಾಡಬಲ್ಲ ಸ್ಥಿತಿ. ತಾತ ರಂಗಪ್ಪ ತಾಯಿ ಶಾಂತವ್ವ ಇಬ್ಬರ ವ್ಯಕ್ತಿತ್ವಗಳನ್ನು ಜೀರ್ಣಿಸಿಕೊಂಡ ಗಾಂಧಿ ಗಟ್ಟಿಯಾದ ನೈತಿಕ ತಳಹದಿಯ ಮೇಲೆ ತನ್ನ ವಯಸ್ಸಿಗೆ ಮೀರಿದ ಆದರ್ಶಗಳಿಗೆ ಬದುಕಿನ ವಾಸ್ತವಗಳಿಗೆ ಮುಖಾಮುಖಿಯಾಗುತ್ತಾನೆ. ಎಲ್ಲದಕ್ಕಿಂತ ಹೆಚ್ಚು ಶಕ್ತಿಶಾಲಿಯಾದ ಮೌಲ್ಯ ನೈತಿಕತೆ ಎಂಬುದನ್ನು ಗಾಂಧಿ ಹೆಜ್ಜೆಹೆಜ್ಜೆಗೂ ಪ್ರತಿಪಾದಿಸುತ್ತಾ ಹೋಗುತ್ತಾನೆ.

ಬಾಲಕ ಗಾಂಧಿಗೆ ತನ್ನ ಶಾಲೆಗೆ ಬರುವ ಕಂಪ್ಯೂಟರ್ ಮತ್ತು ಅದನ್ನು ಕಲಿಸಲು ಬರುವ ನಾರಾಯಣಮೂರ್ತಿ ಹೊಸ ಅನುಭವವಾಗಿ ಮತ್ತು ಗಾಂಧಿಯ ನೈತಿಕತೆಯನ್ನು ಪ್ರಶ್ನಿಸುವ, ಪರೀಕ್ಷಿಸುವ ಅಣಕಿಸುವ, ಅವಮಾನ ಮಾಡುವ ಮತ್ತು ಅಪ್ರಸ್ತುತಗೊಳಿಸುವ ದುಃಸ್ಥಿತಿಯಾಗಿ ಪರಿಣಮಿಸಿದಾಗ ಅದನ್ನು ಗಾಂಧಿ ಗೆಲ್ಲುವ ಬಗೆಯನ್ನು ಚಿತ್ರ ನಿರೂಪಿಸುತ್ತದೆ. ನೈತಿಕತೆಯ ಪರವಾದ ಹೆಡ್‌ಮೇಷ್ಟ್ರು ಗಾಂಧಿಗೆ ಮತ್ತೊಂದು ಬಲ. ಮಕ್ಕಳ ನಡುವಿನ ಪ್ರೀತಿ, ಸ್ನೇಹ, ಈರ್ಷೆ, ಮನಃಪರಿವರ್ತನೆಗಳು ಈ ಚಿತ್ರದಲ್ಲಿ ಪ್ರಮುಖ ದೃಶ್ಯಗಳಾಗಿವೆ. ಗಾಂಧಿ ತನ್ನ ಹೆಸರನ್ನು ಬದಲಾಯಿಸಿಕೊಳ್ಳಬೇಕೆಂಬ ನಿರ್ಧಾರ ಮತ್ತು ಅದರ ಪ್ರತಿಕ್ರಿಯೆಯೊಂದಿಗೆ ಸಿನಿಮಾ ಮುಕ್ತಾಯವಾಗುತ್ತದೆ. ಚಿಕ್ಕ ಚಿಕ್ಕ ಘಟನೆಗಳೂ, ಮನಕಲಕುವ ದೃಶ್ಯಾವಳಿಗಳು, ಸತ್ವಯುತ ಮೌಲ್ಯಾಧಾರಿತ ಸಂಭಾಷಣೆ ಮತ್ತು ಅದಕ್ಕೆ ತಕ್ಕ ಅಭಿನಯದಿಂದ ಚಿತ್ರ ಮನಕಲಕುತ್ತದೆ. ಗಾಂಧಿ ಮತ್ತು ಅವನ ಸ್ನೇಹಿತರ ಆಟ. ಪಾಠ, ಚಿಂತನೆಗಳ ಮೇಲೆ ಚಿತ್ರ ಸಾಗುತ್ತದೆ.

ಗಾಂಧಿಯೆಂಬ ಹೆಸರನ್ನು ಇಟ್ಟುಕೊಂಡಿದ್ದರಿಂದಲೇ ಸ್ವಾತಂತ್ರ ಹೋರಾಟಗಾರ ರಂಗಪ್ಪಜ್ಜನ ಮೊಮ್ಮಗ ಗಾಂಧಿ ಸಾಮಾಜಿಕವಾಗಿ ಎದುರಿಸುವ ಸಮಸ್ಯೆಗಳನ್ನು ಸನ್ನಿವೇಶಗಳ ಹಿನ್ನೆಲೆಯಲ್ಲಿ ವಿವರಿಸಿದ್ದೇನೆ. ಘಟನಾವಳಿಗಳ ಮೂಲ ಅರ್ಥ ಮತ್ತು ಅವುಗಳ ಅಗತ್ಯ ಚಿತ್ರದಲ್ಲಿ ಯಾಕಾಗಿದೆ ಎಂಬುದನ್ನು ಅಧ್ಯಯನದ ದೃಷ್ಟಿಯಲ್ಲಿ ವಿಮರ್ಶೆಮಾಡುವ ಕಾರ್ಯವನ್ನು ಮಾತ್ರವೇ ಈ ಅಧ್ಯಾಯದ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ. ಚಿತ್ರದಲ್ಲಿನ

ಪಾತ್ರಪೋಷಣೆ ಮಾಡಿದ ಪಾತ್ರವರ್ಗದ ಪರಿಚಯವನ್ನು ಈ ಅಧ್ಯಾಯದ ಕಡೆಯ ಭಾಗದಲ್ಲಿ ಕೊಡಲಾಗಿದೆ. ಚಿತ್ರತಂಡದ ಸಂಪೂರ್ಣ ವಿವರಣೆ ಇಲ್ಲಿದೆ.

ಮೂಲಕತೆ ಮತ್ತು ಸಿನಿಮಾ ಕತೆಗಳ ನಡುವಿನ ಭಿನ್ನತೆಗಳನ್ನು ಮುಂದಿನ ಅಧ್ಯಾಯದಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ.

ನಿರ್ಮಾಪಕರು

ಶ್ರೀಮತಿ ಕೋಕಿಲಾ ಎನ್ ಗೌಡ

ಚಿತ್ರಕಥೆ-ನಿರ್ದೇಶನ

ಎನ್.ಆರ್. ನಂಜುಂಡೇಗೌಡ

ಕಥೆ	:	ಡಾ. ಬೆಸಗರಹಳ್ಳಿ ರಾಮಣ್ಣ
ಸಹ ನಿರ್ಮಾಪಕರು	:	ಕೆ.ಬಿ. ನಾಗಭೂಷಣ್
ಸಾಹಿತ್ಯ, ಸಂಭಾಷಣೆ	:	ಡಾ. ರಾಜಪ್ಪ ದಳವಾಯಿ
ಸಂಗೀತ	:	ರಾಜು ಉಪೇಂದ್ರಕುಮಾರ್
ಛಾಯಾಗ್ರಹಣ	:	ನಾಗರಾಜ್ ಆದವಾನಿ
ಸಂಕಲನ	:	ಬಿ.ಎಸ್. ಕೆಂಪರಾಜ್
ಕಲೆ	:	ಇಸ್ಮಾಯಿಲ್
ವಸ್ತ್ರಾಲಂಕಾರ	:	ಮುತ್ತುರಾಜ್
ಧ್ವನಿಗ್ರಹಣ	:	ಎಸ್. ಮಹೇಂದ್ರನ್
ಸಹ ನಿರ್ದೇಶನ	:	ಹರೀಶ್‌ಕುಮಾರ್, ಮೈಸೂರು
ಕಲಾವಿದರು	:	ಮಾ॥ ಲಿಖಿತ್, ಸದಾಶಿವ ಬ್ರಹ್ಮಾವರ್ ರಮೇಶ್ ಭಟ್, ಸುಂದರ್ ರಾಜ್, ಪ್ರಮೀಳಾ ಜೋಷಾಯ್, ಮಂಡ್ಯ ರಮೇಶ್ ಮುಂತಾದವರು

ಈ ಕಲಾತ್ಮಕ ಚಿತ್ರದ ಯಶಸ್ಸಿಗೆ ದುಡಿದ ತಂಡದ ಎಲ್ಲಾ ಸದಸ್ಯರ ಪ್ರತಿಫಲವೆಂಬಂತೆ ಈ ಕೆಳಕಂಡ ಪ್ರಶಸ್ತಿಗಳು ಮಾ॥ಲಿಖಿತ್‌ನನ್ನು ಅತ್ಯುತ್ತಮ ಬಾಲನಟನಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯುವಂತೆ ಮಾಡಿದೆ.

"NAANU GANDHI" (I AM GANDHI) – Children's Film

Participated festivals:

SL. NO	Festivals	Place	Month /Year
01	Children's India Film Festival at TRoronto.	Canada	September. 2008
02	International Festival Columbia	Columbia	September. 2008
03	International Children's Film Festival, India	India	January. 2009
04	FIFEJ(Festival International du Film pour l'Enfane et la Jeunesse de Sousse. Tunisia	Tunisia	March. 2009
05	10th Qingdao-China International Children's Film Festival	China	September 2009
06	Global Cinema Festival. Indore. Madya Pradesh	Madya Pradesh	July 2009
07	1st Cinecita Kid's Film Festival, Santa marta,	Santa marta	July 2010

AWARDS

SL.No	Details of Awards	Award Category
01	Karnataka State Award, India	Best Child Artist Award,
02	KANFIDA Award (Karnataka Film Director's Association)	Best Children's Film and Best Child Artist Award
03	10th Cartagena International Children's Film Festival Columbia.	Children's Educational Film Award

ಅಧ್ಯಾಯ –೪

ಮೂಲಕಥೆ ಮತ್ತು ಸಿನಿಮಾಗಳ ತೌಲನಿಕ ವಿವೇಚನೆ

ಅಧ್ಯಾಯ -೪

ಮೂಲಕಥೆ ಮತ್ತು ಸಿನಿಮಾಗಳ ತೌಲನಿಕ ವಿವೇಚನೆ

ಸಿನಿಮಾ ಮತ್ತು ಸಾಹಿತ್ಯ ಕೃತಿ ಒಂದಿಲ್ಲೊಂದು ಸಂದರ್ಭದಲ್ಲಿ ಪರಸ್ಪರ ಕೊಡುಕೊಳ್ಳುವಿಕೆಯನ್ನು ಸಾಧಿಸುತ್ತಲೇ ಬಂದಿವೆ ಎಂಬುದನ್ನು ಮರೆಯುವಂತಿಲ್ಲ. ಚಿತ್ರರಂಗದ ಇತಿಹಾಸದಲ್ಲಿ ಪ್ರಸಿದ್ಧ ಸಾಹಿತ್ಯ ಕೃತಿ ಸಿನಿಮಾ ಆದಂತೆಯೇ ಪ್ರಸಿದ್ಧ ಸಿನಿಮಾವೊಂದು ಕೃತಿಯಾಗಿ ಪ್ರಕಟಣೆ ಕಂಡ ಉದಾಹರಣೆಗಳಿವೆ. ಇತ್ತೀಚೆಗೆ ಪ್ರಕಟಣೆಯಾದ 'ಆಪ್ತಮಿತ್ರ' ಮತ್ತು 'ಕುಮಾರ ರಾಮ' ಕೃತಿಗಳು ಇದಕ್ಕೆ ಮಹತ್ವಪೂರ್ಣ ಉದಾಹರಣೆಗಳೆಂದು ಹೇಳಬಹುದಾಗಿದೆ.

ಇಂತಹುದೆ ಹಲವು ಸಾಕ್ಷ್ಯಗಳನ್ನು ಕೊಡಬಹುದು. ಪುಟ್ಟಣ್ಣ ಕಣಗಾಲ್ ಅವರ ನಿರ್ದೇಶನದಲ್ಲಿ ಮೂಡಿ ಬಂದ ಅನೇಕ ಚಿತ್ರಗಳು ಸಾಹಿತ್ಯ ಕೃತಿಗಳನ್ನಾಧರಿಸಿದ್ದವೆಂಬುದನ್ನು ಗಮನಿಸಬೇಕು. ಬರಗೂರು ರಾಮಚಂದ್ರಪ್ಪ ಅವರು 'ಕನ್ನಡ ಸಾಹಿತ್ಯ ಸಿನಿಮಾ ಮತ್ತು ಉಪಧಾರೆ'ಯೆಂಬ ಲೇಖನದಲ್ಲಿ ಪುಟ್ಟಣ್ಣ ಕಣಗಾಲ್ ಅವರ ಚಿತ್ರ ನಿರ್ದೇಶನದ ಬಗೆಗೆ ಪ್ರಸ್ತಾಪಿಸುತ್ತಾ ಸಾಹಿತ್ಯ ಕೃತಿಯೊಂದು ಚಿತ್ರವಾದಾಗ ನಿರ್ದೇಶಕ ಮತ್ತು ಕೃತಿಕಾರರ ನಡುವಿನ ಸಂಬಂಧಗಳ ಬಗೆಗೆ ಪ್ರಸ್ತಾಪಿಸುತ್ತಾ ಸಾಹಿತ್ಯ ಕೃತಿ ಸಿನಿಮಾ ಕೃತಿಯಾದಾಗಿನ ಸಂದರ್ಭದಲ್ಲಿನ ಭಿನ್ನಾಭಿಪ್ರಾಯಗಳನ್ನು ಈ ರೀತಿಯಾಗಿ ಹೇಳುತ್ತಾರೆ.

"ಕನ್ನಡದಲ್ಲೂ ನಿರ್ದೇಶಕನ ಪ್ರತಿಭೆಯನ್ನು ಪ್ರಶ್ನಿಸಿದ ಸಾಹಿತ್ಯ ಪ್ರಕರಣಗಳು ಉಂಟು. ಸಾಹಿತ್ಯ ಕೃತಿಯೊಂದರ ಅಳವಡಿಕೆಯಿಂದ ಸಿನಿಮಾ ಮಾಧ್ಯಮಕ್ಕೆ ಭಂಗ ಬರುತ್ತದೆಂದು ಲಿಂಡ್ಸೆ ಭಾವಿಸಿದರೆ, ಇಂಥ ಅಳವಡಿಕೆಯಿಂದ ತಮ್ಮ ಸಾಹಿತ್ಯ ಕೃತಿಗಳಿಗೆ ಭಂಗ ಉಂಟಾಯಿತೆಂದು ಕನ್ನಡದ ಕಾದಂಬರಿಕಾರರಾದ ಶ್ರೀ.ತ.ರಾ.ಸು. ಸಿಡಿದರು. ಶ್ರೀಮತಿ ಎಂ.ಕೆ. ಇಂದಿರಾ ಅವರು ಸಾಹಿತಿಗೆ ಸಲ್ಲಬೇಕಾದ 'ಗೌರವ' ನಿರ್ದೇಶಕನಿಗೆ ಹೋಯಿತೆಂದು ಸಿಡಿಮಿಡಿಗೊಂಡರು.

'ಶುಭಮಂಗಳ' ದಂತೆ ಈ ಎರಡೂ ಪ್ರಕರಣಗಳೂ ನಿರ್ದೇಶಕ ಶ್ರೀ ಪುಟ್ಟಣ್ಣ ಕಣಗಾಲ ಅವರಿಗೆ ಸಂಬಂಧಿಸಿರುವುದು ಒಂದು ವಿಶೇಷ. ತ.ರಾ.ಸು. ಅವರ ಮೂರು ಕಾದಂಬರಿಗಳನ್ನು ಆಧರಿಸಿ ಪುಟ್ಟಣ್ಣ ಅವರು 'ನಾಗರಹಾವು' ಚಿತ್ರವನ್ನು ಮಾಡಿದಾಗ ಸಾಹಿತ್ಯ ಕೃತಿಗಳ ಮಾನವೀಯ ಕೇಂದ್ರ ಮಾಯವಾಗಿದೆಯಿಂದು ಭಾವಿಸಿದ ತ.ರಾ.ಸು. ಅವರು ಇದು 'ನಾಗರಹಾವಲ್ಲ ಕೇರೆ ಹಾವು' ಎಂದು ಸಿಡಿದರು" ಎಂದು ಹೇಳುತ್ತಾರೆ.[7]

---

[7] ಕನ್ನಡ ಸಾಹಿತ್ಯ-ಸಿನಿಮಾ ಮತ್ತು ಉಪಧಾರೆ -ಬರಗೂರು ರಾಮಚಂದ್ರಪ್ಪ (ಪುಟ ಸಂಖ್ಯೆ -೪೯)

ಇದೇ ರೀತಿಯಾಗಿ ಎಂ.ಕೆ. ಇಂದಿರಾ ಅವರು ಕೂಡ 'ಗೆಜ್ಜೆ ಪೂಜೆ' ಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ ಬಂದ ಸಮಯದಲ್ಲಿ ಅಸಮಧಾನಗೊಂಡದ್ದನ್ನು ಈ ಲೇಖನದಲ್ಲಿ ಬರಗೂರು ಅವರು ಉಲ್ಲೇಖಿಸಿದ್ದಾರೆ.

ಇವರ ಅಭಿಪ್ರಾಯದಿಂದ ತಿಳಿದು ಬರುವುದೇನೆಂದರೆ ಸಿನಿಮಾ ಲೋಕದಲ್ಲಿ ಸಾಹಿತ್ಯ ಕೃತಿಯೊಂದು ಸಿನಿಮಾ ಕೃತಿಯಾಗಿ ರೂಪಗೊಳ್ಳುವ ಹಂತದಲ್ಲಿ ಹಲವು ರೀತಿಯ ಬದಲಾವಣೆಗಳಿಗೆ ಗುರಿಯಾಗುತ್ತದೆಂದು ಅದು ಕೆಲವು ಸಲ ಕೃತಿಕಾರನ ಮನಸ್ಸನ್ನು ಘಾಸಿಗೊಳಿಸುತ್ತದೆ.

ಓದುಗರು ಕೃತಿಯೊಂದನ್ನು ಓದುವಾಗ ತಮ್ಮ ಮನೋರಂಗ ಭೂಮಿಕೆಯಲ್ಲಿ ಚಿತ್ರಿಸಿಕೊಳ್ಳುವುದಕ್ಕೂ ಕಲ್ಪನೆಯು ವಾಸ್ತವಕ್ಕಿಳಿದು ಚಿತ್ರವೊಂದು ಸಿದ್ಧಗೊಳ್ಳುವುದಕ್ಕೂ ಹಲವು ತಾಂತ್ರಿಕ ಅಡೆತಡೆಗಳು ಇರುವುದನ್ನು ಗಮನಿಸಬೇಕು.

ಪಾತ್ರಗಳ ಆಯ್ಕೆ ಇರಬಹುದು ಅಥವಾ ಕಲಾವಿದನ ಅಭಿನಯದ ಸಾಮರ್ಥ್ಯವೇ ಇರಬಹುದು ಯಾವುದೋ ಒಂದು ಕೊರತೆಯಿದ್ದೇ ಇರುತ್ತದೆ. ಅಂಥ ಕೊರತೆಗಳಿಂದಾಗಿ ಚಿತ್ರ ಮೂಲಕ್ಕೆ ನಿಷ್ಠವಾಗಿರದೇ ಭಿನ್ನ ಸ್ವರೂಪದಲ್ಲಿ ಮೂಡಿ ಬರುವ ಸಾಧ್ಯತೆಗಳೇ ಹೆಚ್ಚು.

ಹೀಗಿರುವಾಗ ಹಲವು ತಂತ್ರಗಳನ್ನು ಬಳಸಿ ಒಂದು ಚಿತ್ರವನ್ನು ಸಿದ್ಧಗೊಳಿಸಬೇಕಾಗುತ್ತದೆ ಅದೂ ಅಲ್ಲದೇ ಇದು ಗುಂಪು ಚಟುವಟಿಕೆಯಾದ್ದರಿಂದ ಹಲವಾರು ಕಾರಣಗಳಿಗಾಗಿ ಮೂಲಕೃತಿಯ ಆಶಯಕ್ಕೆ ಒಂದಿಲ್ಲ ಒಂದು ಕಡೆ ಧಕ್ಕೆ ಬಂದೇ ಬರುತ್ತದೆ. ಆದರೂ ಸಹ ಸಾಹಿತ್ಯ ಕೃತಿಯೊಂದನ್ನು ಸಿನಿಮಾಕೃತಿಗೆ ಅಳವಡಿಸಿ ಆ ಮೂಲಕ ಪ್ರೇಕ್ಷಕರಿಗೆ ಸರಳವಾಗಿ ಸಾಹಿತ್ಯ ಕೃತಿಯನ್ನು ತಲುಪಿಸಬಲ್ಲ ಸಾಧ್ಯತೆಯನ್ನು ನಾವು ಅಲ್ಲಗೆಳೆಯುವಂತಿಲ್ಲ.

ಸಿನಿಮಾವೊಂದು ರೂಪುಗೊಳ್ಳಲು ಒಂದು ಕತೆಯ ಅವಶ್ಯಕತೆ ಇದ್ದೆ ಇದೆ ಎಂದಾದ ಮೇಲೆ ಯಾವುದೋ ಕಳಪೆ ಅಭಿರುಚಿಯ ಪ್ರೇಮ ಕಾಮಗಳ ಸುತ್ತ ಗಿರಕಿ ಹೊಡೆಯುವ ವಸ್ತುಗಳನ್ನು ಚಿತ್ರವಾಗಿಸುವುದಕ್ಕಿಂತಲೂ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯಬಲ್ಲ ಸಾಮರ್ಥ್ಯವನ್ನು ಹೊಂದಿರುವಂತಹ ಸಾಹಿತ್ಯ ಕೃತಿಗಳನ್ನು ಸಿನಿಮಾ ಆಗಿಸುವುದರಲ್ಲಿ ಯಾವುದೇ ರೀತಿಯ ಲೋಪದೋಷಗಳು ಇಲ್ಲ ಎಂಬ ಅಂಶವನ್ನು ಗಮನಿಸಲೇಬೇಕಾದ ಅಗತ್ಯವಿದೆ.

ಇಂತಹುದೇ ಹಲವು ಉದ್ದೇಶಗಳನ್ನು ಒಳಗೊಂಡು ಸಿದ್ಧವಾದ ಚಿತ್ರ "ನಾನು ಗಾಂಧಿ" ಅಧ್ಯಾಯ ೨ ಮತ್ತು ೩ ರಲ್ಲಿ ಬೆಸಗರಹಳ್ಳಿ ರಾಮಣ್ಣನವರ ಕತೆ ಮತ್ತು ನಂಜುಂಡೇಗೌಡರ ಸಿನಿಮಾ ಕತೆಯ ಸ್ವರೂಪಗಳ ಪರಿಚಯವನ್ನು ಮಾಡಿಕೊಂಡಿದ್ದೇವೆ. ಅಂತೆಯೇ ಈ ಎರಡು ಕತೆಗಳ ಮೂಲ ಆಶಯ ಒಂದೇ ಎಂಬುದನ್ನು ಆ ಅಧ್ಯಾಯಗಳಲ್ಲಿಯೇ ಚರ್ಚಿಸಲಾಗಿದೆ.

ಕೃತಿಗಳ ನಡುವಿನ ಪರಸ್ಪರ ಸಂಬಂಧವನ್ನು ಅರಿಯುವುದು ಮತ್ತು ಸಾಹಿತ್ಯ ಕೃತಿಗಳು ಸಿನಿಮಾ ಆಗಬೇಕಾದ ಅಗತ್ಯಗಳ ಮೇಲೆ ಬೆಳಕು ಚಲ್ಲುವ ಪ್ರಯತ್ನವಾಗಿರುವುದರಿಂದ ಇಲ್ಲಿ ಈ ಎರಡು ಅಂಶಗಳ ನಡುವಿನ ಭಿನ್ನತೆ ಮತ್ತು ಭಿನ್ನತೆಗೆ ಇರುವ ತಾಂತ್ರಿಕ ಕಾರಣಗಳನ್ನು ಚರ್ಚೆ ಮಾಡಬೇಕಾದ ಅಗತ್ಯವಿದೆ. ಆದ್ದರಿಂದಲೇ ಈ ಅಧ್ಯಾಯವು ಆ ನಿಟ್ಟಿನ ಪ್ರಯತ್ನವನ್ನು ಕೇಂದ್ರವಾಗಿಟ್ಟುಕೊಂಡು ಚರ್ಚೆ ಮಾಡುತ್ತದೆ.

೧೮೯೫ರ ಡಿಸೆಂಬರ್ ೨೮ ರಂದು ಪ್ಯಾರಿಸ್‌ನ ಗ್ರ್ಯಾಂಡ್ ಕೆಫೆ ಎಂಬ ಹೊಟೇಲ್‌ವೊಂದರಲ್ಲಿ ನೆಲಮಾಳಿಗೆಯಲ್ಲಿ ಮೂವತ್ತು ಜನ ಪ್ರೇಕ್ಷಕರೆದಿರು ಆರಂಭಗೊಂಡ ಚಲನಚಿತ್ರದ ಇತಿಹಾಸ ಇಂದು ೩ಡಿ ಚಿತ್ರಗಳ ನಿರ್ಮಾಣದ ಹಂತವನ್ನು ತಲುಪಿರುವುದನ್ನು ನೋಡಿದರೆ ಚಲನಚಿತ್ರ ಲೋಕದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಂಡು ನೈಪುಣ್ಯತೆ ಸಾಧಿಸಿರುವುದು ಕಾಣುತ್ತದೆ. ಇಂತಹ ಹಲವು ಆವಿಷ್ಕಾರಗಳೇ ದಿನದಿನಕ್ಕೂ ಚಿತ್ರ ನಿರ್ಮಾಣವನ್ನು ಸರಳ ಮತ್ತು ಸುಂದರಗೊಳಿಸುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಕಥೆ, ಕಾದಂಬರೆ, ನಾಟಕ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಬಂದಿರುವ ಕತೆಯನ್ನು ಬಳಸಿಕೊಂಡು ಆಧುನಿಕ ತಂತ್ರಗಾರಿಕೆಯೊಡನೆ ಸಂಯೋಜಿಸಿ ಹಲವು ಚಿತ್ರಗಳು ತೆರೆಯ ಮೇಲೆ ಬಂದಿವೆ. ಕನ್ನಡದಲ್ಲಿ ಕಾದಂಬರಿ ಆಧಾರಿತ ಮೊದಲ ಚಿತ್ರವೆಂದರೆ 'ಕರುಣೆಯೇ ಕುಟುಂಬದ ಕಣ್ಣು' ಇದಾದ ನಂತರ 'ಭೂತಯ್ಯನ ಮಗ ಅಯ್ಯು,' 'ಬಂಗಾರದ ಮನುಷ್ಯ,' 'ಅಬಚೂರಿನ ಪೋಸ್ಟ್ ಆಫೀಸ್', 'ಉಯ್ಯಾಲೆ', 'ಶರಪಂಜರ', 'ಸಂಸ್ಕಾರ', 'ಚೋಮನದುಡಿ', 'ಘಟಶ್ರಾದ್ಧ', 'ಬಂಧನ' ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇತ್ತೀಚಿನ ಬಹುಮಾನಿತ ಚಿತ್ರ 'ನಾನು ಗಾಂಧಿ'ಯನ್ನು ಈ ಚಿತ್ರಗಳ ಸಾಲಿಗೆ ಸೇರಿಸಬಹುದು ಏಕೆಂದರೆ ಇದು ಕೂಡ ಸಾಹಿತ್ಯ ಕೃತಿಯನ್ನಾಧರಿಸಿದ ಸಿನಿಮಾ. ಬೆಸಗರಹಳ್ಳಿ ರಾಮಣ್ಣನವರ ಸಣ್ಣಕತೆ 'ಗಾಂಧಿ' ಯನ್ನು ರಾಜಪ್ಪ ದಳವಾಯಿಯವರು ಚಿತ್ರಕತೆ ಮಾಡಿ ಚಲನ ಚಿತ್ರಕ್ಕೆ ಹೇಗೆ ಅಗತ್ಯವೋ ಹಾಗೆ ಸಂಪೂರ್ಣ ಸಿನಿಮಾ ಕೃತಿಯಾಗಿಸಿದ್ದಾರೆ.

ಸಂಭಾಷಣೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಆ ಮೂಲಕ ಅಂತರಾಷ್ಟ್ರೀಯ ಮಕ್ಕಳ ಚಿತ್ರವೊಂದು ರೂಪುಗೊಳ್ಳಲು ಮೂಲ ಕಾರಣಕರ್ತರಾಗಿದ್ದಾರೆ. ನಂಜುಂಡೇಗೌಡ ಮತ್ತು ರಾಜಪ್ಪ ದಳವಾಯಿಯವರು ಬೆಸಗರಹಳ್ಳಿ ರಾಮಣ್ಣನವರ ಆತ್ಮೀಯರು. ಅವರ ಸಾಹಿತ್ಯ ಕೃಷಿಯನ್ನು ಬಹು ಹತ್ತಿರದಿಂದ ನೋಡಿದವರು. ಅವರ ಅನುಪಸ್ಥಿತಿಯಲ್ಲಿಯೂ ಸಹ ಅವರ ಕತೆಯೊಂದು ಸಿನಿಮಾಕ್ಕೆ ಅಳವಡಿಸಲು ಇದು ಕೂಡ ಮೂಲ ಕಾರಣವೆಂದು ತಿಳಿಯಬಹುದು.

ಬೆಸಗರಹಳ್ಳಿ ರಾಮಣ್ಣನವರ ಕತೆ ಐದು ಪುಟಗಳಷ್ಟಿದೆ. ಹೀಗಿರುವ ಕತೆಯನ್ನು ಮೂರು ತಾಸಿನ ಸಿನಿಮಾ ಆಗಿಸಲು ಇರಬೇಕಾದ ಶ್ರಮ ಅತ್ಯಧಿಕವೆಂದೇ ಹೇಳಬೇಕು. ಇಂತಹ ಸವಾಲೊಂದು ಎದುರಿಸಿ 'ನಾನು ಗಾಂಧಿ' ಚಿತ್ರ ಅಂತರಾಷ್ಟ್ರೀಯ ಮನ್ನಣೆಯನ್ನು ಪಡೆಯುವಲ್ಲಿ ಇಡೀ ತಂಡದ ಪರಿಶ್ರಮ ನಮಗರಿವಾಗುತ್ತದೆ.

ಒಂದು ಚಿತ್ರ ನಿರ್ಮಾಣದ ವಿವಿಧ ಹಂತಗಳನ್ನು ನೋಡುವುದಾದರೆ ಮೊದಲು ಕತೆ, ಹಣ, ನಿರ್ದೇಶಕರು ಒಂದೆಡೆ ವ್ಯವಸ್ಥಿತವಾಗಿ ಸೇರಬೇಕು. ಅನಂತರ ಅದಕ್ಕೆ ತಕ್ಕಂತಹ ತಾಂತ್ರಿಕ ವರ್ಗದವರು ಸೇರಿದಾಗ ಕತೆಯ ವಿವಿಧ ಘಟನೆಗಳು ದೃಶ್ಯಗಳಾಗಿ ತೆರೆಗೆ ಬರಲು ಸಿದ್ಧವಾಗುತ್ತವೆಂಬುದನ್ನು ಸಂಕ್ಷಿಪ್ತವಾಗಿ ಹೇಳಬಹುದು.

ಸಂಗೀತ, ಸಂಯೋಜನೆ, ಸಂಕಲನ, ಛಾಯಾಗ್ರಹಣ ಧ್ವನಿ ಮುದ್ರಣ ಇವೆಲ್ಲವುಗಳ ಜೊತೆಗೆ ಇರಲೇಬೇಕಾದ ಮತ್ತೊಂದು ಮಹತ್ವದ ಅಂಶವೆಂದರೆ ಕಲಾವಿದರ ಆಯ್ಕೆ. ಪಾತ್ರಗಳಿಗೆ ತಕ್ಕಂತಹ ಕಲಾವಿದರ ಆಯ್ಕೆಯೂ ಸಹ ಒಂದು ಚಿತ್ರದ ಯಶಸ್ಸಿಗೆ ಮೂಲಕಾರಣವಾಗಿರುತ್ತದೆ.

ಅಂತಹ ಸಮರ್ಥ ಕಲಾವಿದರ ಆಯ್ಕೆಯೂ ಸಹ ಸಮರ್ಥವಾಗಿ ಕತೆಯ ಅಥವಾ ಚಿತ್ರದ ಮೂಲ ಆಶಯವನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ಸಹಾಯಮಾಡುತ್ತದೆ.

ಈ ಎಲ್ಲ ಹಂತಗಳ ನಂತರ ದೃಶ್ಯಗಳ ಸಂಯೋಜನೆ ಮತ್ತು ಸಮರ್ಥವಾದ ಸಂಕಲನವೂ ಕೂಡ ಚಿತ್ರ ಪ್ರೇಕ್ಷಕರಿಗೆ ತಲುಪಲು ಸಹಾಯಕವಾಗುವ ಅಂಶಗಳಲ್ಲಿ ಒಂದು. ಅಬ್ದುಲ್ ರೆಹಮಾನ್ ಪಾಷ ಅವರು 'ಸಿನಿಮಾ ಮತ್ತು ಪ್ರೇಕ್ಷಕ' ಎಂಬ ಕೃತಿಯಲ್ಲಿ ಒಂದು ಯಶಸ್ವಿಚಿತ್ರದ ಪ್ರಮುಖ ಹಂತಗಳನ್ನು ಈ ರೀತಿಯಾಗಿ ವಿಂಗಡಿಸಿದ್ದಾರೆ.

- ಚಿತ್ರೀಕರಣ ಪೂರ್ವ ಹಂತ
- ಚಿತ್ರೀಕರಣದ ಹಂತ

- ಚಿತ್ರೀಕರಣೋತ್ತರ ಹಂತ

ಈ ಮೂರು ಹಂತಗಳ ಮೂಲಕ ಒಂದು ಚಿತ್ರ ಹೇಗೆ ಸಿದ್ಧಗೊಳ್ಳುತ್ತದೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿದ್ದಾರೆ. ಚಿತ್ರೀಕರಣಕ್ಕೆ ಮುಂಚೆ, ಕತೆ, ನಾಟಕದ ಆಯ್ಕೆ, ತಂತ್ರಜ್ಞರ, ನಿರ್ವಹಣೆ ಅದಾದನಂತರ ಚಿತ್ರೀಕರಿಸಿದ್ದನ್ನು ವ್ಯವಸ್ಥಿತವಾಗಿ ಅರ್ಥವತ್ತಾಗಿ ಸಂಯೋಜಿಸಿ ಸಿದ್ಧಗೊಳಿಸಿ ಪ್ರೇಕ್ಷಕರ ಮುಂದೆ ಇಡುವವರೆಗೂ ಒಂದು ಚಿತ್ರದ ಸಿದ್ಧತೆಯು ಮುಂದುವರಿಯುತ್ತದೆಂದು ರೆಹಮಾನ್ ಪಾಷ ಅವರು ಅಭಿಪ್ರಾಯ ಪಡುತ್ತಾರೆ.[8]

---

[8] ಚಲನಚಿತ್ರ ನಿರ್ಮಾಣದ ಸ್ಥೂಲ ಪರಿಚಯ- ಅಬ್ದುಲ್ ರೆಹಮಾನ್ ಪಾಷ (ಪುಟ -೩೫)

'ನಾನು ಗಾಂಧಿ' ಸಿನಿಮಾ 'ಗಾಂಧಿ' ಕತೆಯಿಂದ ದೃಶ್ಯಕಾವ್ಯವಾಗಲು ಇಂತಹ ಎಲ್ಲ ಸಿದ್ಧತೆಗಳು ಇಲ್ಲಿದ್ದವು. ಹೆಚ್ಚಿನ ಮಾಹಿತಿಗಾಗಿ ಈ ಅಧ್ಯಾಯದಲ್ಲಿ ಕೊನೆಯಲ್ಲಿ ಕೊಟ್ಟಿರುವ ಚಿತ್ರದ ಎಲ್ಲಾ ವರ್ಗದ ಜನರ ಪಟ್ಟಿಯನ್ನು ನೋಡಬಹುದು. ಅಲ್ಲಿ ಕಲಾವಿದರು ಮತ್ತು ತಾಂತ್ರಿಕವರ್ಗದರೆಲ್ಲರ ಪರಿಚಯವನ್ನು ಕೊಡಲಾಗಿದೆ.

ಬೆಸಗರಹಳ್ಳಿ ರಾಮಣ್ಣನವರು ಬರೆದ ಸಣ್ಣಕತೆ 'ಗಾಂಧಿ' ಯಲ್ಲಿ ಅನಕ್ಷರಸ್ಥ ಹಳ್ಳಿಯ ಮುದುಕ ಕರಿಸಿದ್ದೇಗೌಡ ಅಳಿಯ ತೀರಿದ ಬಳಿಕ ತನ್ನ ಮಗಳು ನಿಂಗವ್ವ ಮತ್ತು ಆಕೆಯ ಮಕ್ಕಳನ್ನು ಸಾಕುವ ಹೊಣೆ ಹೊತ್ತು ಬಡತನದ ನಡುವೆಯೂ ಬದುಕು ಸವೆಸುತ್ತಿರುತ್ತಾನೆ.

ಕರಿಸಿದ್ದೇಗೌಡ ಓದಿದವನಲ್ಲ ಯಾವುದೋ ಒಂದು ಸಂದರ್ಭದಲ್ಲಿ ಸ್ವತಂತ್ರ ಪೂರ್ವದಲ್ಲಿ ಶಿವಪುರದ ಸತ್ಯಾಗ್ರಹದ ಸಂದರ್ಭ ಗಾಂಧೀಜಿಯನ್ನು ಹತ್ತಿರದಿಂದ ಕಂಡು ಗಾಂಧಿಯ ವ್ಯಕ್ತಿತ್ವಕ್ಕೆ ಸೋತು ಅವನ ವ್ಯಕ್ತಿತ್ವವನ್ನು ಮಹತ್ವವಾಗಿ ನೋಡಿ ಆರಾಧ್ಯ ದೈವದಂತೆ ಆತನನ್ನು ಪೂಜಿಸುತ್ತಿರುತ್ತಾನೆ. ಅಂತವನ ಮನೆಯಲ್ಲಿ ದೊಡ್ಡ ಕಿವಿಗಳ ಮುದ್ದು ಮಗು ಹುಟ್ಟುತ್ತದೆ ಗಂಡು ಮಗು ಹುಟ್ಟಿದ್ದೇ ಕರಿಸಿದ್ದೇಗೌಡನಿಗೆ ಆನಂದ ತಡೆಯಲಾಗುವುದಿಲ್ಲ. ಮಗುವಿನ ಎಲ್ಲ ಲಕ್ಷಣಗಳನ್ನು ವಿವರಿಸಿ ಹೇಳಿ ಜೋಯಿಸರಿಂದ ಒಂದು ಒಳ್ಳೆಯ ಹೆಸರನ್ನು ಕೇಳಬೇಕೆಂದು ಹೋಗುತ್ತಾನೆ.

ಕರಿಸಿದ್ದೇಗೌಡನ ಆನಂದವನ್ನು ಕಂಡ ಜೋಯಿಸರು ಅಗಲ ಕಿವಿಯ ಮಗುವಿಗೆ ಗಾಂಧಿಯೆಂದು ಹೆಸರಿಡು ಎಂದು ಹೇಳಿ ಕಳಿಸುತ್ತಾನೆ. ಅದಕ್ಕೆ ಕರಿಸಿದ್ದೇಗೌಡ ಖುಷಿಯಿಂದಲೇ ಗಾಂಧಿ ಎಂಬ ಹೆಸರಿಡುತ್ತಾನೆ.

ಸಮಸ್ಯೆಯ ಮೂಲವೇ ಆ ಮಗುವಿನ ಹೆಸರು ಗಾಂಧಿಯೆಂಬುದು ಕತೆಯಲ್ಲಿ ಈ ಹೆಸರಿನ ಸುತ್ತಲು ನಡೆಯುವ ಕುಹಕಗಳು ಭ್ರಷ್ಟ ಸಮಾಜಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಬೆಸಗರಹಳ್ಳಿ ರಾಮಣ್ಣನವರು ಈ ಕತೆಯ ಮೂಲಕ ಗಾಂಧಿ ಹೇಗೆ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಾನೆ. ಎಂಬುದನ್ನು ಹೇಳುವ ಪ್ರಯತ್ನ ಮಾಡಿದ್ದಾರೆ. ಕಾಯಿಲೆಯಿಂದ ನರಳುವ ಮಗು ಗಾಂಧಿಯೆಂಬ ಹೆಸರಿನಿಂದಾಗಿ ಆಸ್ಪತ್ರೆಯ ವೈದ್ಯಸಿಬ್ಬಂದಿಯಿಂದ ಅಪಮಾನಕ್ಕೆ ಗುರಿಯಾಗುತ್ತದೆ.

ಒಟ್ಟಾರೆ ವ್ಯವಸ್ಥೆಯಲ್ಲಿ ಸಾಮಾನ್ಯನೊಬ್ಬ ಗಾಂಧಿಯೆಂಬ ಹೆಸರಿನ್ನಿಟ್ಟುಕೊಂಡದ್ದರಿಂದಲೇ ಎಲ್ಲರಿಂದ ಅವಮಾನಗೊಂಡು ಕಡೆಯಲ್ಲಿ ಸಾವಿನಲ್ಲಿ ಅಂತ್ಯವನ್ನು ಕಾಣುತ್ತಾನೆ. ಅಧ್ಯಾಯ -೨ ರಲ್ಲಿ ಕತೆಯ ವಿಸ್ತೃತ ವಿವರಣೆಯನ್ನು ನಾವಿಗಾಗಲೇ ನೋಡಿದ್ದೇವೆ. ಈ ಅಧ್ಯಾಯದಲ್ಲಿ

ಮೂಲಕತೆಯ ಎಳೆಯೊಂದನ್ನು ಸಿನಿಮಾ ಆಗಿಸುವಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು.

ಈ ಚಿತ್ರದ ಸಾಹಿತ್ಯ ಮತ್ತು ಸಂಭಾಷಣೆಯ ಕಾರ್ಯವನ್ನು ನಿರ್ವಹಿಸಿರುವ ಸಾಹಿತಿ ಅಧ್ಯಾಪಕ ರಾಜಪ್ಪ ದಳವಾಯಿ ಅವರನ್ನು ಇದೇ ಕತೆಯನ್ನು ಆಯ್ಕೆ ಮಾಡಿಕೊಂಡದ್ದರ ಬಗೆಗೆ ಕೇಳಿದಾಗ "ಬೆಸಗರಹಳ್ಳಿ ರಾಮಣ್ಣನವರು ಆ ಕತೆಯನ್ನು ಎಪ್ಪತ್ತರ ದಶಕದಲ್ಲಿ ಬರೆದಿದ್ದರೂ ಆ ಕತೆಯಲ್ಲಿನ ವಸ್ತು ಸಾಹಿತ್ಯ ಲೋಕದಲ್ಲಿಯೇ ಅದ್ಭುತ ಮನ್ನಣೆಯನ್ನು ಪಡೆದು ಹಲವು ವಿಚಾರ ಎಲ್ಲಾ ಕಾಲಕ್ಕೂ ಪ್ರಸ್ತುತ ಎಂಬ ಅಂಶವನ್ನು ತಿಳಿಸಬೇಕೆಂಬ ಹಂಬಲವಿದ್ದುದ್ದರಿಂದ ಈ ಕತೆಯನ್ನೇ ಆಯ್ಕೆ ಮಾಡಿಕೊಂಡೆವೆಂದು ಉತ್ತರಿಸುತ್ತಾರೆ.

ಮಕ್ಕಳಿಗೆ ಗಾಂಧಿಯ ಬಗೆಗೆ ತಿಳಿಸಿಕೊಡಬೇಕಾದ ಅನಿವಾರ್ಯತೆ ಮತ್ತು ಅಗತ್ಯವೊಂದು ಇಂದು ನಿರ್ಮಾಣವಾಗಿದೆಯಾದ್ದರಿಂದ ಈ ಚಿತ್ರ ನಿರ್ಮಾಣಕ್ಕೆ ಮುಂದಾದೆವು ಎನ್ನುತ್ತಾರೆ. ನಿರ್ದೇಶಕ ನಂಜುಂಡೇಗೌಡ ಅವರು ಲೋಹಿಯಾವಾದವನ್ನು ಬಹುವಾಗಿ ಮೆಚ್ಚಿಕೊಂಡವರು. ಅವರು ಈ ಕತೆಯನ್ನು ಆಯ್ಕೆ ಮಾಡಿಕೊಳ್ಳಲು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ದೇಸಿಯತೆ ಎಂಬುದು ಎಲ್ಲ ಕಡೆಗಳಿಂದಲೂ ನಾಶವಾಗುತ್ತಿರುವ ಈ ಹೊತ್ತಿನಲ್ಲಿ ಗಾಂಧಿ ಚಿಂತನೆ ಮಕ್ಕಳಲ್ಲಿ ರಾಷ್ಟ್ರಾಭಿಮಾನವನ್ನು ಮೂಡಿಸಲು ಸಹಾಯಕವಾಗುತ್ತದೆಯಾದ್ದರಿಂದ ಮಕ್ಕಳಿಗಾಗಿ ಈ ಚಿತ್ರವನ್ನು ನಿರ್ಮಿಸಿದೆವು' ಎನ್ನುತ್ತಾರೆ.

ಇವರಿಬ್ಬರ ಮಾತುಗಳನ್ನು ಇಲ್ಲಿ ಉಲ್ಲೇಖ ಮಾಡಿದ ಉದ್ದೇಶವೆಂದರೆ ಸಾಹಿತ್ಯ ಕೃತಿಯಲ್ಲಿದ್ದ ಒಂದು ಸಣ್ಣ ಎಳೆಯನ್ನು ಹಿಡಿದು ಅದನ್ನು ಪ್ರಸ್ತುತಕ್ಕೆ ಸಲ್ಲುವಂತಹ ಇನ್ನಷ್ಟು ವಿಚಾರಗಳನ್ನು ಬೆರೆಸಿ ಹೇಳುವ ಪ್ರಯತ್ನ ಮತ್ತು ಸದ್ಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನ ಪ್ರಯತ್ನವಾಗಿ ಈ ಚಿತ್ರ ಮೂಡಿಬಂದಿದೆ ಎಂಬ ಅಂಶವನ್ನು ತಿಳಿಸುವುದಕ್ಕಾಗಿ ನಾನು ಗಾಂಧಿ ಮಕ್ಕಳಿಗಾಗಿಯೇ ಮಾಡಿದ ಚಿತ್ರವೇ ಎಂಬ ಪ್ರಶ್ನೆಗೆ ನಿರ್ದೇಶಕರು 'ಗಾಂಧಿ ಎಲ್ಲ ವಯಸ್ಸಿನವರಿಗೂ' ಎಂಬ ಮಾತನ್ನು ಹೇಳುತ್ತಾರೆ.

'ಮಕ್ಕಳನ್ನು ಬಳಸಿಕೊಂಡು ಚಿತ್ರ ಮಾಡುವುದು ಕಷ್ಟವಲ್ಲವೇ ಎಂಬ ಮಾತಿಗೆ' "ಮಕ್ಕಳಲ್ಲಿ ಕೇಳಿ ತಿಳಿದುಕೊಳ್ಳುವ ಗುಣವಿರುತ್ತದೆ. ದೊಡ್ಡವರಿಗೆ ಇರುವ ಯಾವ ಅಹಂಗಳು ಮಕ್ಕಳಲ್ಲಿರುವುದಿಲ್ಲ. ಆದ್ದರಿಂದ ಮಕ್ಕಳನ್ನು ಬಳಸಿಕೊಂಡು ಚಿತ್ರಮಾಡುವುದು ನಿಜಕ್ಕೂ ತುಂಬಾ ಸುಲಭವಾದ ಕೆಲಸ" ಎಂದು ತಮ್ಮ ತಂಡದ ಮಕ್ಕಳನ್ನು ಮೆಚ್ಚಿಕೊಳ್ಳುತ್ತಾರೆ. [9]

---

[9] ಆಗಸ್ಟ್ 17ರಂದು ನಿರ್ದೇಶಕ ನಂಜುಂಡೇಗೌಡನ ಸಂದರ್ಶಿಸಿದಾಗ ಸಿಕ್ಕ ಮಾಹಿತಿ

ನಿರ್ದೇಶಕರ ಈ ಗುಣವನ್ನು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಚಿತ್ರವನ್ನು ವೀಕ್ಷಿಸಿ ತಮ್ಮ ಅಭಿಪ್ರಾಯದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "ರಾಮಣ್ಣನವರ ಕತೆಗೆ ಇಲ್ಲಿ ನ್ಯಾಯ ಸಿಕ್ಕಿದೆ. ಈ ಕತೆಯಾಚೆಗೂ ಹಲವಾರು ಅಂಶಗಳು ಇಲ್ಲಿವೆ. ನಿರ್ದೇಶಕರಾದ ನಂಜುಂಡೇಗೌಡರು ತುಂಬಾ ಸೂಕ್ಷ್ಮ ಮನಸ್ಸಿನವರು ಎಂಬುದು ಈ ಚಿತ್ರದಿಂದ ಸಾಬೀತಾಗುತ್ತದೆ. ಇದೊಂದು ಶೈಕ್ಷಣಿಕ ಚಿತ್ರ. ಶಿಕ್ಷಕರು ತಿಳಿಯಬೇಕಾದುದು ಇಲ್ಲಿ ಬಹಳಷ್ಟಿದೆ. ಗಾಂಧಿವಾದದ ಬಗ್ಗೆ ಈ ಚಿತ್ರ ನಮಗೆ ಹೊಸ ಅರಿವನ್ನು ಮೂಡಿಸುತ್ತದೆ."[10]

ಒಂದು ಚಿತ್ರವೆಂದ ಮೇಲೆ ಅದಕ್ಕೆ ಹಲವು ಪಾತ್ರಗಳ ಅಗತ್ಯವಿರುತ್ತದೆ. ಅಲ್ಲಿ ಬರುವ ಪ್ರತಿ ಪಾತ್ರಗಳಿಗೂ ಅದರದ್ದೇ ಆದ ವ್ಯಕ್ತಿತ್ವವೂ ಇರುತ್ತದೆ. ಆ ವ್ಯಕ್ತಿತ್ವಗಳಿಗೆ ತಕ್ಕಂತೆ ಸಂಭಾಷಣೆಯನ್ನು ರೂಪಿಸಬೇಕಾಗುತ್ತದೆ. ಕೆಲವು ಪಾತ್ರಗಳು ಸಂಭಾಷಣೆಯಿಲ್ಲದಿದ್ದರೂ ಬಂದು ಹೋಗುವ ಒಂದೆರೆಡು ಸನ್ನಿವೇಶದಲ್ಲಿಯೇ ಕಥೆಯ ಓಟಕ್ಕೆ ಚಾಲನೆಯನ್ನು ಕೊಡುವ ಸಾಮರ್ಥ್ಯ ಪಡೆದಿರುತ್ತದೆ. ಈ ಎಲ್ಲ ಅಂಶಗಳನ್ನು ಪರಿಪೂರ್ಣವಾಗಿ ಕಟ್ಟಿಕೊಟ್ಟಾಗ ಮಾತ್ರವೇ ಒಂದು ಚಿತ್ರ ರೂಪ ಪಡೆಯುತ್ತದೆ. ನಾನು ಗಾಂಧಿ ಚಿತ್ರದಲ್ಲಿ ನಿರ್ದೇಶಕರು ಇಂಥ ಪ್ರಯತ್ನವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ನಿರ್ದೇಶಕರ ಈ ಪ್ರಯತ್ನವನ್ನು ಕುರಿತು ಖ್ಯಾತ ಸಾಹಿತಿಗಳು ಮತ್ತು ವಿಮರ್ಶಕರು ಆದಂತಹ ಎಸ್.ಜಿ. ಸಿದ್ಧರಾಮಯ್ಯನವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. "ಈ ಚಿತ್ರ ನನಗೆ ತುಂಬಾ ಕಾಡಿದೆ. ನಂಜುಂಡೇಗೌಡರ ಸೃಜನಶೀಲ ಮನಸ್ಸು ಈ ಚಿತ್ರದ ನಿರ್ಮಿತಿ ಹಿಂದೆ ಕೆಲಸ ಮಾಡಿದೆ. ದುಃಖ ಹಲವು ಕಡೆ ಹೊಮ್ಮಿ ಬಂತು. ಗಾಂಧಿ ಮತ್ತು ಗಾಂಧಿವಾದ ಸೆಲ್ಯುಲಾಯ್ಡ್ ಮೇಲೆ ಮಕ್ಕಳಿಗಾಗಿ ಹೀಗೆ ಬಂದಿರುವುದು ತುಂಬಾ ಮಹತ್ವದ ವಿಚಾರವಾಗಿದೆ".[11]

ಬೆಸಗರಹಳ್ಳಿ ರಾಮಣ್ಣನವರ ಕತೆಯಲ್ಲಿ ಬರುವ ಸಿಮೀತ ಪಾತ್ರಗಳನ್ನೇ ಬಳಸಿಕೊಂಡು ಆ ಕತೆಯ ಚೌಕಟ್ಟಿನಲ್ಲಿಯೇ ಇನ್ನಷ್ಟು ಹೊಸ ಪಾತ್ರಗಳನ್ನು ಅದಕ್ಕೆ ಸೇರಿಸುವುದರ ಮೂಲಕ ಬಹುತಾರಾಗಣವನ್ನು ಸೃಷ್ಟಿಸಿಕೊಳ್ಳಲಾಗಿದೆ.

ಸಿನಿಮಾ ಕತೆಯಲ್ಲಿ ಗಾಂಧಿ ಎಂಬ ಬಾಲಕ ಹಿರಿಯ ಸ್ವಾತಂತ್ರ ಹೋರಾಟಗಾರನ ಮೊಮ್ಮಗ. ಇಲ್ಲಿ ಬರುವ ರಂಗಪ್ಪಜ್ಜ ಅನಕ್ಷರಸ್ಥನಲ್ಲ. ಒಂದು ಕಾಲದಲ್ಲಿ ದೇಶವನ್ನು ಬಂಧ ಮುಕ್ತಗೊಳಿಸಲು ಹೋರಾಡಿದ ರಾಷ್ಟ್ರಭಕ್ತರ ಜೊತೆಗೆ ಗಾಂಧಿಯನ್ನು ಆತನ ತತ್ವ ಚಿಂತನೆಗಳನ್ನು

[10] ಜುಲೈ 4ರ ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ

[11] ಜುಲೈ 11ರಂದು ಪ್ರಜಾವಾಣಿ ಪ್ರಕಟವಾದ ವರದಿ

ಬದುಕಿನ ಪ್ರತಿ ಹೆಜ್ಜೆಯಲ್ಲಿಯೂ ಅನುಸರಿಸುತ್ತಾ ಬಂದ ಹಿರಿಯ ಜೀವ ಗಾಂಧಿಯಂತಹ ಹೋರಾಟಗಾರನ ಆದರ್ಶಗಳನ್ನು ಮೊಮ್ಮಗನಲ್ಲಿ ಮೂಡಿಸಲು ಪ್ರಯತ್ನ ಮಾಡುವ ಮೇಧಾವಿ. ಬದುಕನ್ನು ಬಡತನದಲ್ಲಿಯೇ ಕಳೆದರು ಸತ್ಯ ನಿಷ್ಠೆಯನ್ನು ಬಿಡದ ಸಾತ್ವಿಕ ಬದುಕನ್ನು ತನ್ನದಾಗಿಸಿಕೊಂಡ ವ್ಯಕ್ತಿ.

ರಾಮಣ್ಣನವರ 'ಗಾಂಧಿ' ಕತೆಯಲ್ಲಿ ಬರುವ ಬಾಲಕ ಗಾಂಧಿ ಕರಿಸಿದ್ದೇಗೌಡನ ಮಗಳ ಮಗ. ಸಿನಿಮಾದಲ್ಲಿ ಬರುವ ರಂಗಪ್ಪನಿಗೆ ಮಗನ ಮಗ ಕತೆಗೂ ಸಿನಿಮಾಗೂ ವ್ಯಕ್ತಿಗಳ ಹೆಸರಿನಲ್ಲಿಯೂ ಬದಲಾವಣೆಯಿದೆ. ಜೊತೆಗೆ ಕಾಲಘಟ್ಟ ಮತ್ತು ಕತೆಯನ್ನು ಆಧರಿಸಿ ವ್ಯಕ್ತಿತ್ವಗಳಲ್ಲಿಯು ಹಲ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ.

ಕತೆಯ ನಿರೂಪಣಾ ಶೈಲಿ ಮತ್ತು ಚಿತ್ರದ ನಿರೂಪಣಾ ಶೈಲಿಗಳನ್ನು ನೋಡಿದರೆ ಒಂದಕ್ಕೊಂದು ವಿರುದ್ಧವೆಂದೇ ಹೇಳಬೇಕು. ಏಕೆಂದರೆ ಚಿತ್ರಕ್ಕೆ ಅದರದ್ದೇ ಆದ ಭಾಷಾ ಶೈಲಿಯಿದ್ದಂತೆ ಕತೆಗೂ ಅದರದ್ದೇ ಆದ ಅರ್ಥಮಾಡಿಸುವಿಕೆಯ ಭಾಷೆಯಿರುತ್ತದೆ. ಇವೆರೆಡು ಭಿನ್ನವಾದರೂ ಮೂಲದ ಆಶಯಕ್ಕೆ ಎಲ್ಲಿಯೂ ಧಕ್ಕೆ ಬಂದಿಲ್ಲ ಎಂಬುದು ಗಮನಾರ್ಹ ಅಂಶ.

ಕತೆಯಲ್ಲಿ ಬಾಲಕ ಗಾಂಧಿ ಬಡತನದ ನಡುವೆಯೂ ಆಕರ್ಷಕ ವ್ಯಕ್ತಿಯಂತೆ ಕಂಡು ಬರುತ್ತಾನೆ. ಅವನಿಗೆ ಗಾಂಧಿವಾದದ ಪರಿಚಯವೇ ಇಲ್ಲ. ಅಲ್ಲಿ ಕೇವಲ ಹೆಸರಿದೆ. ಆ ಬಾಲಕನಿಗೆ ಅದರ ಅರಿವಿಲ್ಲ. ಆದರೆ ಸಮಾಜ ಆತನನ್ನು ಆತನಿಗಿಟ್ಟ ವಿರುದ್ಧ ಹೆಸರನ್ನೇ ಆಡಿಕೊಂಡು ನಗುವುದರ ಮೂಲಕ ಗಾಂಧಿಯೆಂಬ ಹೆಸರಿಗೆ ಅವಮಾನ ಮಾಡುವುದು ನಮಗೆ ಕಾಣಿಸುತ್ತದೆ.

ಚಿತ್ರದಲ್ಲಿ ಹಾಗಲ್ಲ. ಇಲ್ಲಿ ಬರುವ ಬಾಲಕ ಗಾಂಧಿಗೆ ತನ್ನ ತಾತ ರಂಗಪ್ಪಜ್ಜನ ಪ್ರೇರಣೆಯಿದೆ. ಪ್ರತಿ ಹಂತದಲ್ಲಿಯೂ ಗಾಂಧಿ ತತ್ವಗಳನ್ನು ಪಾಲಿಸಬೇಕೆಂಬ ಹುಮ್ಮಸ್ಸು ಕೂಡ ಇದೆ. ವಿದ್ಯಾವಂತ, ಹೋರಾಟದ ಮನೋಭಾವದ ತಾತನ ಗರಡಿಯಲ್ಲಿ ಪಳಗಿರುವ ಬಾಲಕ ಗಾಂಧಿ ಎಂಥ ಅವಮಾನಕರ ಪರಿಸ್ಥಿತಿಯಲ್ಲಿಯೂ ಸಹ ಅವುಗಳನ್ನು ಸಮರ್ಥವಾಗಿ ಎದುರಿಸಬಲ್ಲ.

ಹಲಸಿನ ಕಾಯಿ ಕದ್ದ ಆರೋಪವನ್ನು ಊರಿನ ಗೌಡ ಕೃಷ್ಣಪ್ಪ ಹೊರಿಸಿದಾಗ 'ನಮ್ಮ ಮರದ ಹಲಸಿನ ಕಾಯನ್ನು ಕಿತ್ಕೊ ನಾ ಏನು ಕೇಳಲ್ಲ' ಎಂಬ ದಾರ್ಷ್ಟ್ಯದ ಮಾತಿನಲ್ಲಿ ಬಾಲಕ ಗಾಂಧಿಯ ಗಟ್ಟಿ ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ. ಅದು ಅಲ್ಲದೇ ಸತ್ಯ ತನ್ನ ಪರವಾಗಿದ್ದಾಗ ಎಂಥವನನ್ನು ಎದುರಿಸಬಲ್ಲ ಬಲ ಬರುತ್ತದೆಂಬ ಗಾಂಧಿಯ ತತ್ವ ಅವನಲ್ಲಿ ಕರಗತವಾಗಿದೆ.

ಇನ್ನೊಂದು ಪ್ರಸಂಗದಲ್ಲಿ ಸೀಬೆಕಾಯನ್ನು ಕದ್ದು ಅದು ದೊಡ್ಡ ಹಗರಣವಾಗಿ ಕೃಷ್ಣಪ್ಪ ಸುರೇಶನ ಅಪ್ಪ ಕೆಂಚಪ್ಪನ ಬಳಿ ವಾದಕ್ಕಿಳಿದಾಗಲು ಎಲ್ಲ ಹುಡುಗರು ತಪ್ಪಿಸಿಕೊಳ್ಳಲು ಸುಳ್ಳು

ಹೇಳಿದರೂ ಬಾಲಕ ಗಾಂಧಿ ಸತ್ಯವನ್ನೇ ಹೇಳಿ ತನ್ನ ನೈತಿಕ ಪ್ರಜ್ಞೆಯನ್ನು ಮರೆಯುತ್ತಾನೆ. ಕೃಷ್ಣಪ್ಪನ ಬಳಿಯೇ ಎರಡು ಬಾರಿ ತನ್ನ ಸತ್ಯವನ್ನು ಸಾಬೀತು ಮಾಡುವುದರ ಮೂಲಕ ಗಾಂಧಿಯೊಬ್ಬ ಒಳ್ಳೆಯ ಹುಡುಗ ಎನಿಸುತ್ತಾನೆ. ಇದು ಒಮ್ಮೆಗೆ ಸಾಬೀತಾಗುವುದಿಲ್ಲ. ಬದಲಿಗೆ ಸತತ ಪರಿಶ್ರಮ ಮತ್ತು ಗಾಂಧಿ ತತ್ವದಲ್ಲಿನ ಆತನ ನಂಬಿಕೆಗಳು ಇಂತಹ ಮೌಲ್ಯಯುತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರೇರೇಪಿಸುತ್ತವೆ.

ಡಾ.ರಾಜಪ್ಪ ದಳವಾಯಿಯವರನ್ನು ಸಂದರ್ಶಿಸಿದ ವೇಳೆಯಲ್ಲಿ ಸಿಕ್ಕ ಹಲವು ಮಾಹಿತಿಗಳ ಆಧಾರದಲ್ಲಿ ಈ ಚಿತ್ರ ಬಗೆಗೆ ಹೇಳುವುದಾದರೆ ಈ ಚಿತ್ರ ಗಾಂಧಿ ತತ್ವಗಳನ್ನು ಪ್ರತಿ ಹಂತದಲ್ಲಿಯೂ ಬಿಂಬಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದೆ. ಶಿಕ್ಷಣದ ಆಗು ಹೋಗುಗಳ ಬಗೆಗೆ ಸವಿವರವಾಗಿ ಈ ಚಿತ್ರ ಚರ್ಚೆ ಮಾಡುತ್ತದೆ. ಜಾಗತೀಕರಣದ ಪ್ರಭಾವದಿಂದ ಬಂದಿರುವ ಕಂಪ್ಯೂಟರ್ ಶಿಕ್ಷಣದ ಹಾವಳಿಯು ಹೇಗೆ ದೇಶವೊಂದರ ಅದರಲ್ಲಿಯೂ ಅಭಿವೃದ್ಧಿಶೀಲ ರಾಷ್ಟ್ರವೊಂದರ ಆಂತರಿಕ ಕಲಹಕ್ಕೆ ಎಡೆ ಮಾಡಿಕೊಡುತ್ತಿದೆ ಎಂಬಿತ್ಯಾದಿ ವಿಷಯಗಳ ಮೇಲೆ ಬೆಳಕು ಚಲ್ಲುವ ಪ್ರಯತ್ನ ಮಾಡುತ್ತದೆ.

ಬೆಸಗರಹಳ್ಳಿ ರಾಮಣ್ಣನವರ ಕತೆ ಅಂದಿಗೆ ಗಾಂಧಿಯ ಮಹತ್ವವನ್ನು ಎತ್ತಿಹಿಡಿಯುವ ಉದ್ದೇಶದಿಂದ ಬರೆಯಲ್ಪಟ್ಟಿದ್ದರೆ ಇಂದು ಗಾಂಧಿಯ ತತ್ವಗಳನ್ನು ಬಳಕೆಗೆ ತರಬೇಕಾದ ಅನಿವಾರ್ಯತೆಯನ್ನು ಕುರಿತಾಗಿ ಈ ಚಿತ್ರ ಬೆಳಕು ಬೀರುವ ಪ್ರಯತ್ನ ಮಾಡುತ್ತವೆ.

ಮೂಲ ಕತೆಗೆ ಸಿನಿಮಾದ ಕತೆಯನ್ನು ಹೋಲಿಸಿ ನೋಡಿದರೆ ಹಲವು ಭಿನ್ನತೆಗಳಿರುವುದು ಕಂಡು ಬರುತ್ತದೆ. ಇಲ್ಲಿ ಬರುವ ಬಾಲಕ ಗಾಂಧಿ ಮಹಾತ್ಮ ಗಾಂಧಿ ತತ್ವ ಸಿದ್ಧಾಂತಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡುತ್ತಾನೆ.

ತಾನೆ ಗಾಂಧಿಯಾಗಬೇಕೆಂಬ ಹಂಬಲ ಅವನಲ್ಲಿದೆ. ಆಸ್ಪತ್ರೆಯ ದೃಶ್ಯದಲ್ಲಿ ಗೇಲಿ ಮಾಡಿ ನಗುವ ಡಾಕ್ಟರ್ ಬಳಿ ಬಾಲಕ ಗಾಂಧಿ ಹೇಳುವ ಮಾತು ಗಮನಾರ್ಹ 'ನಾ ಕಾಯಿಲೆಯಿಂದ ಸತ್ತರೂ ಸರಿಯೇ ಆ ಮಹಾತ್ಮನಿಗೆ ಅವಮಾನವಾದ ಜಾಗದಲ್ಲಿ ಇರೋದು ಬೇಡ' ಎನ್ನುವ ಮಾತಿನಲ್ಲಿ ಗಾಂಧಿಯ ಮೇಲಿನ ಅಭಿಮಾನ ಎದ್ದುಕಾಣುತ್ತದೆ. ಮೂಲಕತೆಯ ಆಶಯದ ಹಿನ್ನೆಲೆಯಲ್ಲಿಯೇ ಸಿನಿಮಾ ಕತೆ ಪ್ರಸ್ತುತ ಸಮಸ್ಯೆಗಳಾದ ಪ್ರಾದೇಶಿಕ ರಾಜಕೀಯ ಶಿಕ್ಷಣವ್ಯವಸ್ಥೆ ಬಡವ ಶ್ರೀಮಂತ ಎಂಬ ಬೇಧಗಳನ್ನು ಸಹ ಈ ಚಿತ್ರ ತೋರಿಸುತ್ತದೆ.

ಪಂಚಾಯ್ತಿ ಸದಸ್ಯೆಯಾಗಿರುವ ಗೌರಮ್ಮ ಗಂಡ ಕೆಂಚಪ್ಪನ ದರ್ಬಾರಿನಲ್ಲಿ ತೆರೆಮರೆಗೆ ಸರಿಯುತ್ತಾಳೆ. ಅದೂ ಅಲ್ಲದೇ ಅವಿದ್ಯಾವಂತೆಯಾದ ಆಕೆಗೆ ಲೋಕದ ಆಗುಹೋಗುಗಳ ಪರಿಚಯವಿಲ್ಲ. ಚಿತ್ರದಲ್ಲಿ ಆಕೆ ಒಂದೇ ಒಂದು ಮಾತನ್ನು ಕೂಡ ಆಡುವುದಿಲ್ಲ. ಈ ಪಾತ್ರದ

ಮೂಲಕ ಸಾಮಾಜಿಕವಾಗಿ ಹಿನ್ನೆಲೆಗೆ ಸರಿದ ಹೆಣ್ಣಿನ ಪರಿಚಯವನ್ನು ಈ ಚಿತ್ರ ಮಾಡಿಕೊಡುತ್ತದೆ. ಬೆಸಗರಹಳ್ಳಿ ರಾಮಣ್ಣನವರ ಕತೆ ಆಸ್ಪತ್ರೆಯ ದೃಶ್ಯದಿಂದ ಆರಂಭವಾಗಿ ಅಲ್ಲಿಯೇ ಮುಗಿಯುತ್ತದೆ.

ಹಳ್ಳಿಯ ಜೀವನದ ಚಿತ್ರಣ ನಮಗೆ ದೊರೆಯುವುದಿಲ್ಲ. ಆದರೆ ಸಿನಿಮಾದಲ್ಲಿ ಈ ಎಲ್ಲ ಸಂಭಾಷಣೆಗಳಿಗೆ ಚಿತ್ರದ ಮೂಲಕ ದೃಶ್ಯಗಳನ್ನು ಕಟ್ಟಿಕೊಡುವ ಕೆಲಸವನ್ನು ಚಿತ್ರಮಾಡಿದ್ದಾರೆ. ಕರಿಸಿದ್ದೇಗೌಡನ ಮಗಳು ನಿಂಗಮ್ಮನ ಗಂಡ ಜಮೀನ್ದಾರನ ಮನೆಯಲ್ಲಿ ಕೂಲಿಮಾಡುತ್ತಲೇ ಅಸುನೀಗಿದವ. ಅವನ ಮರಣದ ನಂತರ ತನ್ನ ಕುಟುಂಬಕ್ಕೆ ಯಾವ ಆಧಾರಗಳನ್ನು ಮಾಡಿಕೊಟ್ಟಿಲ್ಲ. ಆದ್ದರಿಂದಲೇ ಅವರು ಬಡತನದ ಬೇಗೆಯಲ್ಲಿ ಬೇಯುತ್ತಿರುವುದು ಕಂಡು ಬರುತ್ತವೆ.

ಭೂಮಿಯು ಕೂಡ ಅವರ ಕೈ ತಪ್ಪುವ ಸಾಧ್ಯತೆಗಳ ವಿವರಣೆಯಿದೆ. ಈ ಎಲ್ಲ ಸಂಕಷ್ಟಗಳ ನಡುವೆಯೂ ಬದುಕುವ ಪ್ರಯತ್ನ ಮಾಡುತ್ತಿರುವ ಕುಟುಂಬಕ್ಕೆ ಮೊಮ್ಮಗನ ಕಾಯಿಲೆ ನಿಜಕ್ಕೂ ಆಘಾತದ ಬರಸಿಡಲೆಂದು ಕಂಡು ಬರುತ್ತದೆ. ಕತೆಯಲ್ಲಿ ಬಡತನದ ಚಿತ್ರಣವಿದೆ ಅದನ್ನು ಸಿನಿಮಾ ಕತೆಗೆ ಅಳವಡಿಸಿಕೊಂಡಿದ್ದು ಹಲವು ಬದಲಾವಣೆಗಳನ್ನು ಮಾಡಿಕೊಂಡಿರುತ್ತಾರೆ.

ಕತೆಯಲ್ಲಿನ ಕರಿಸಿದ್ದೇಗೌಡ ಸಿನಿಮಾದಲ್ಲಿ ರಂಗಪ್ಪಜ್ಜನಾಗಿದ್ದಾನೆ. ಈತ ಕತೆಯಲ್ಲಿ ಅನಕ್ಷರಸ್ಥ. ಸಿನಿಮಾದಲ್ಲಿ ವಿದ್ಯಾವಂತ. ಸ್ವಾತಂತ್ರ್ಯ ಹೋರಾಟಗಾರ. ತನ್ನ ಮೊಮ್ಮಗನಲ್ಲಿ ನೈತಿಕ ಪ್ರಜ್ಞೆಯನ್ನು ಮೂಡಿಸಬಲ್ಲ ದಿಟ್ಟವ್ಯಕ್ತಿ. ಕತೆಯಲ್ಲಿ ಬರುವ ಕರಿಸಿದ್ದೇಗೌಡ ಅಸಹಾಯಕ ಪರಿಸ್ಥಿತಿಯನ್ನು ದಾಸ್ಯದಿಂದ ಒಪ್ಪಿಕೊಳ್ಳುವ ಮನುಷ್ಯ. ಯಾವುದನ್ನು ಪ್ರಶ್ನೆ ಮಾಡಲಾರ. ಆದರೆ ತನ್ನವರ ಉಳಿವಿಗಾಗಿ ಸರ್ವಸ್ವವನ್ನು ತ್ಯಾಗ ಮಾಡಿಯಾದರೂ ಅವರ ಯೋಗಕ್ಷೇಮವನ್ನು ಕಾಪಾಡಬೇಕೆಂದು ಪ್ರಯತ್ನಿಸುವ ವ್ಯಕ್ತಿ. ಈತನ ಪ್ರಯತ್ನ ಭೌತಿಕವಾದದ್ದು.

ಆದರೆ ರಂಗಪ್ಪಜ್ಜ ಮೂಲದಿಂದಲೇ ತನ್ನ ಮೊಮ್ಮಗನನ್ನು ಗಟ್ಟಿಗೊಳಿಸುವ ಸಾಮರ್ಥ್ಯ ಇರುವ ವ್ಯಕ್ತಿ. ಕರಿಸಿದ್ದೇಗೌಡನಿಗೆ ತನ್ನ ಪರಿಸ್ಥಿತಿಗೆ ಕಾರಣವಾದ ವ್ಯವಸ್ಥೆಯ ಆಗುಹೋಗುಗಳೇ ತಿಳಿದಿಲ್ಲ. ಆದರೆ ರಂಗಪ್ಪಜ್ಜ ಇಡೀ ಸಮುದಾಯವೇ ಆದರ್ಶವೆಂದು ಪರಿಗಣಿಸುವ ಸ್ವಾತಂತ್ರ್ಯ ಹೋರಾಟಗಾರ.

ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿಗೆ ಭಾರತೀಯ ಪರಂಪರೆ ಮತ್ತು ದೇಸೀಯತೆ ಕುರಿತಾಗಿ ಬುದ್ಧಿವಾದವನ್ನು ಹೇಳುವಷ್ಟು ಆತನ ಚಿಂತನೆಗಳು ದೇಶದ ಒಳಿತಿಗಾಗಿ ಶ್ರೇಯಸ್ಸನ್ನು ಬಯಸುತ್ತದೆ. ತನ್ನ ಮೊಮ್ಮಗ ತಾನು ಕಳ್ಳನಲ್ಲವೆಂದು ಮುಷ್ಕರಕ್ಕೆ ಕೂತಾಗಲೂ

ಗಾಂಧಿ ತತ್ವಗಳಿಗೆ ಆಗುತ್ತಿರುವ ಅಪಮಾನಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತೋಚದೇ ತನ್ನ ಆದರ್ಶಗಳು ಅವಗಣನೆಗೆ ಗುರಿಯಾಗುತ್ತಿರುವುದನ್ನು ಕಟುವಾಗಿ ವಿರೋಧಿಸದೇ ಜನಗಳ ಬದಲಾದ ಮನಸ್ಥಿತಿಗೆ ಯಾವ ಮದ್ದು ಇಲ್ಲವೆಂದು ವ್ಯಥೆಪಡುವಲ್ಲಿಯೇ ಆತನ ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ.

ರಂಗಪ್ಪಜ್ಜ ದೇಶಕ್ಕಾಗಿ ಹೋರಾಡಿದ ವ್ಯಕ್ತಿ. ಪ್ರಸ್ತುತದಲ್ಲಿ ದೇಶದ ಅಭಿವೃದ್ಧಿಗೆ ಬೇಕಾಗಿರುವ ವೃತ್ತಿ ಪರ ಶಿಕ್ಷಣದ ಪರವಾಗಿ ಮಾತನಾಡ ಬಲ್ಲಷ್ಟು ಆತ ಸಮರ್ಥ. ಗಾಂಧಿಯ ಬಗ್ಗೆ ತಿಳಿದುಕೊಳ್ಳಬೇಕೆಂದು ಬಯಸಿ ತನ್ನ ಬಳಿ ಬರುವ ಮಕ್ಕಳಿಗೆ ಗಾಂಧಿ ತತ್ವ ಆದರ್ಶಗಳನ್ನು ಹೇಳಿಕೊಡುವುದರ ಮೂಲಕ ದೇಶಾಭಿಮಾನವನ್ನು ಜಾಗೃತಗೊಳಿಸುವ ನಿಟ್ಟಿನ ಅವನ ಮಾತುಗಾರಿಕೆ ಪ್ರಸ್ತುತ ಮಕ್ಕಳ ಶಿಕ್ಷಣ ವ್ಯವಸ್ಥೆಯಲ್ಲಿ ಗಾಂಧಿಯ ಪರಿಚಯ ಮಕ್ಕಳಿಗೆ ಆಗಬೇಕಾದ ಅಗತ್ಯದ ಮೇಲೆ ಬೆಳಕು ಚೆಲ್ಲುತ್ತದೆ. ಗಾಂಧಿಯ ಬಗ್ಗೆ ಪಠ್ಯದಲ್ಲಿ ಒಂದೇ ಪುಟದ ಪಾಠವಿದೆ ಎಂದು ಹೇಳಿದಾಗ ಆ ಮಹಾತ್ಮನ ಬಗ್ಗೆ ಸಾವಿರ ಪುಟವಿದ್ದರೂ ಸಾಲದು.

ಬೆಳೆಯುವ ಮಕ್ಕಳಲ್ಲಿ ಆದರ್ಶವನ್ನು ತುಂಬಲು ಗಾಂಧಿಯ ಬದುಕಿನ ಪರಿಚಯ ಇರಬೇಕೆಂದು ಆಶಿಸುವ ತನ್ನ ಮೊಮ್ಮಗನಲ್ಲಿ ವೈಚಾರಿಕ ತತ್ವಗಳನ್ನು ತುಂಬಲು ಪ್ರಯತ್ನಿಸುತ್ತಿರುತ್ತಾನೆ ಬಾಲಕ ಗಾಂಧಿಯು ಕೂಡ ಬೆಲೆಯುತ್ತಿರುತ್ತಾನೆ. ಆದ್ದರಿಂದಲೇ ರಂಗಪ್ಪಜ್ಜ ಮೊಮ್ಮಗನ ಮೇಲಿನ ಆರೋಪವನ್ನು ನಂಬುವುದಿಲ್ಲ ಏಕೆಂದರೆ ಅವನು ಬೆಳೆಸಿದ ಮಗುವಿನ ಬಗೆಗೆ ಅವನ ಭರವಸೆಯೇ ಗಟ್ಟಿಯಾದದ್ದು.

ಮೊಮ್ಮಗ ಕುಶಲಕಲೆಯನ್ನು ಕಲಿಯಲು ಮುಂದಾಗಲು ಸಹ ರಂಗಪ್ಪಜ್ಜ ಅವಕಾಶ ಮಾಡಿಕೊಡುವ ದೃಶ್ಯ ತನ್ನ ಪರಂಪರೆಯನ್ನು ಮುಂದಿನ ತಲೆಮಾರಿಗೆ ದಾಟಿಸುವ ತುಡಿತವಿರುವುದನ್ನು ತೋರಿಸುತ್ತದೆ. ಹಲವು ಚಟುವಟಿಕೆಯಲ್ಲಿ ತಲ್ಲೀನನಾಗಿರುವ ರಂಗಪ್ಪಜ್ಜ ಸೃಜನಾತ್ಮಕ ಕ್ರಿಯೆಗಳ ಒಟ್ಟು ಆಗರದಂತೆ ಕಂಡು ಬರುತ್ತಾನೆ.

ಸಭ್ಯತೆಗೆ ಇನ್ನೊಂದು ಹೆಸರೇ ರಂಗಪ್ಪಜ್ಜ ಎನ್ನಬಹುದು. ಅಂತಹ ಸಾಧುವ್ಯಕ್ತಿಯೂ ಆಗಿರುವ ಈತ ಏಕಕಾಲದಲ್ಲಿ ಹಲವು ಕೆಲಸಗಳಲ್ಲಿ ತೊಡಗಿಕೊಳ್ಳಬಲ್ಲ ಸಾಮರ್ಥ್ಯ ಇರುವಂತಹ ವ್ಯಕ್ತಿ. ಹೀಗಿರುವಾಗ ಕೇವಲ ಕೃಷಿ, ಕರಕುಶಲತೆ, ಮತ್ತು ಹೊಲಿಗೆ ಕೆಲಸಕ್ಕೆ ಮಾತ್ರ ಸೀಮಿತವಾಗದೇ ಅವುಗಳೆಲ್ಲವನ್ನು ಹಂತ ಹಂತವಾಗಿ ಸಮರ್ಥವಾಗಿ ನಿರ್ವಹಿಸಬಲ್ಲ ಜಾಣ್ಮೆಯಿರುವ ವ್ಯಕ್ತಿ. ಬೆಸಗರಹಳ್ಳಿಯಲ್ಲಿ ರಾಮಣ್ಣನವರ ಕತೆಯಲ್ಲಿ ಒಂದು ಪಾತ್ರವಾಗಿ ಬರುವ ಕರಿಸಿದ್ದೇಗೌಡ ಚಿತ್ರದಲ್ಲಿ ಕತೆಯ ಕೇಂದ್ರ ಬಿಂದುವಾಗಿ ಮೂಡಿ ಬಂದಿದ್ದಾನೆ.

ಆಸ್ಪತ್ರೆಯ ದೃಶ್ಯದಲ್ಲಿ ಡಾಕ್ಟರ್‌ನ ವಿರುದ್ಧ ಸಿಡಿದೇಳುವಲ್ಲಿ ರಂಗಪ್ಪಜ್ಜನ ವ್ಯಕ್ತಿತ್ವದ ದರ್ಶನ ನಮಗಾಗುತ್ತದೆ. ಮೂಲ ಕತೆಯಲ್ಲಿ ಕರಿಸಿದ್ದೇಗೌಡ ವಿನಯದಿಂದ ಬೇಡಿಕೊಳ್ಳಬಲ್ಲ. ಅದೇ ಸಿನಿಮಾ ಕತೆಯಲ್ಲಿ ಆಕ್ರೋಶದಿಂದ ವಿರೋಧಿಸುವಂತಹ ಹೋರಾಟದ ಮನೋಭಾವ ರಂಗಪ್ಪಜ್ಜನಲ್ಲಿದೆ. ಈ ಹಿಂದೆಯೇ ಹೇಳಿದಂತೆ ಮೂಲ ಕತೆಯಲ್ಲಿನ ಕರಿಸಿದ್ದೇಗೌಡನ ಪಾತ್ರಕ್ಕೂ ಸಿನಿಮಾ ಕತೆಯಲ್ಲಿ ರಂಗಪ್ಪಜ್ಜನ ಪಾತ್ರಕ್ಕೂ ಕ್ರಾಂತಿಕಾರಕ ಬೆಳವಣಿಗೆಗಳು ಇರುವುದನ್ನು ಗಮನಿಸಬಹುದಾಗಿದೆ. ಕತೆಯಲ್ಲಿ ಬರುವ ಪುಟ್ಟ ಪಾತ್ರವನ್ನು ಬೆಳ್ಳಿತೆರೆಯಲ್ಲಿ ಮೂಡಿಸಬೇಕಾದಾಗ ಮಾಡಿಕೊಳ್ಳಬೇಕಾದ ಅಗತ್ಯ ಬದಲಾವಣೆಗೆ ತಕ್ಕಂತೆ ಕರಿಸಿದ್ದೇಗೌಡನ ಪಾತ್ರವನ್ನು ವಿಸ್ತೃತವಾಗಿ ಬೆಳೆಸಲಾಗಿದೆ.

ಸಿನಿಮಾ ಕತೆಯಲ್ಲಿ ಬರುವ ರಂಗಪ್ಪಜ್ಜನ ಪಾತ್ರದ ಮೂಲಕ ಗಾಂಧಿ ತತ್ವ ಮತ್ತು ಹೋರಾಟದ ಮನೋಭಾವವನ್ನು ಬಿಂಬಿಸುವ ಪ್ರಯತ್ನ ಮಾಡಲಾಗಿದೆ. ಈ ಬದಲಾವಣೆಯು ಸಿನಿಮಾ ಕತೆಯ ಓಟಕ್ಕೆ ಪುಷ್ಟಿಯನ್ನು ನೀಡುತ್ತದೆ. ಬಾಲಕ ಗಾಂಧಿಯ ತಾಯಿ ಮೂಲಕತೆಯಲ್ಲಿ ಗಂಡನನ್ನು ಕಳೆದುಕೊಂಡು ತಂದೆಯ ಮನೆಯಲ್ಲಿ ಆಶ್ರಯ ಪಡೆದ ಹೆಣ್ಣುಮಗಳು. ಗಂಡ ತೀರಿಕೊಂಡ ಮೇಲೆ ಎರಡು ಮಕ್ಕಳೊಂದಿಗೆ ಉಳಿದ ಬದುಕನ್ನು ಸವೆಸುತ್ತಿರುತ್ತಾಳೆ.

ಈ ಸಂದರ್ಭದಲ್ಲಿ ಆಸರೆಯ ಆಶೋತ್ತರದಂತ್ತಿದ್ದ ಮಗನಿಗೆ ಬಂದೆರಗುವ ಮಾರಣಾಂತಿಕ ಕಾಯಿಲೆಯಿಂದ ನಿಂಗಮ್ಮನಿಗೆ ತನ್ನ ಜೀವ ಚೈತನ್ಯವನ್ನೇ ಉಡುಗಿಹೋದಂತಾಗುತ್ತದೆ.

ಬೆಸಗರಹಳ್ಳಿ ರಾಮಣ್ಣನವರ ಮೂಲಕತೆಯಲ್ಲಿ ನಿಂಗಮ್ಮನಾಗಿ ಕತೆಯಲ್ಲಿ ನಿಂಗಮ್ಮ ಮಗನ ಜೀವ ಉಳಿಸುವುದಕ್ಕಾಗಿ ಹಂಬಲಿಸುವ ತಾಯಿ ಚಲನಚಿತ್ರದಲ್ಲಿ ಶಾಂತವ್ವ ಮಗನ ಮೇಲೆ ಆರೋಪ ಹೊರಿಸುವವರ ವಿರುದ್ಧ ತಿರುಗಿ ಬೀಳಬಲ್ಲ ಘಾಟಿ ಹೆಂಗಸು. ಊರಿನ ಗೌಡ ಕೃಷ್ಣಪ್ಪ ಹಲಸಿನ ಹಣ್ಣನ್ನು ಕದ್ದ ಆರೋಪವನ್ನು ಮಗನ ಮೇಲೆ ಹೊರಿಸಿದಾಗ "ಗೌಡ್ರೇ ನಾವು ಬಡವರೇ ಇರಬಹುದು ಆದರೆ ಕಳ್ಳತನ ಮಾಡೊರಲ್ಲ" ಎನ್ನುವಲ್ಲಿ ಮಗನ ಮೇಲಿನ ಆರೋಪವನ್ನು ಪರಿಹರಿಸಲು ಊರಿನ ಗೌಡನ ವಿರುದ್ಧವೂ ಮಾತನಾಡಬಲ್ಲ ದಾಷ್ಟ್ಯವನ್ನು ಕಾಣಬಹುದು.

ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿ ಬಾಲಕ ಗಾಂಧಿಯನ್ನು ಕೀಳರಿಮೆಯ ಕೂಪಕ್ಕೆ ತಳ್ಳುವುದನ್ನು ನೋಡಿ ಮಗನ ವ್ಯಕ್ತಿತ್ವಕ್ಕೆ ಧಕ್ಕೆ ತಂದ ಮೇಷ್ಟ್ರ ಮೇಲೆ ಅಸಹನೆಯನ್ನು ತೋರುವುದರ ಮೂಲಕ ತಾಯಿ ಪ್ರೀತಿಯನ್ನು ಎತ್ತಿಹಿಡಿಯುತ್ತಾಳೆ.

ಮೂಲ ಕತೆಯಲ್ಲಿ ಮಗನ ಪ್ರಾಣ ಉಳಿಸಲಿಕ್ಕಾಗಿ ತನ್ನ ಕಿವಿಯೋಲೆಯನ್ನು ಬಿಚ್ಚಿಕೊಡುವ ನಿಂಗಮ್ಮನ ಪಾತ್ರ ಸಿನಿಮಾದಲ್ಲಿ ಮಗನ ಸಂತೋಷಕ್ಕಾಗಿ ಸರ್ವವನ್ನು ತ್ಯಾಗ ಮಾಡುವ ತಾಯಿಯಾಗಿ ಪ್ರತಿ ಬಿಂಬಿತವಾಗಿದೆ.

ಸಿನಿಮಾದಲ್ಲಿ ಶಾಂತವ್ವನ ಪಾತ್ರಧಾರಿಯಾಗಿ ಪ್ರಮಿಳಾ ಜೋಷಾಯ್ ಮನೋಜ್ಞವಾಗಿ ಅಭಿನಯಿಸಿದ್ದಾರೆ. ತಾನು ಕಳ್ಳನಲ್ಲವೆಂದು ಸತ್ಯಾಗ್ರಹಕ್ಕೆ ಕೂತ ಮಗನನ್ನು ಮನ ಒಲಿಸುವಲ್ಲಿ ಮಗನ ಬಗೆಗಿನ ಅಕ್ಕರೆ ಕಂಡು ಬರುತ್ತದೆ. ತಂದೆಯಿಲ್ಲದ ಮಗ ಬದುಕಿನಲ್ಲಿ ಎಲ್ಲರಿಗಿಂತ ಮುಂದೆ ಬರಬೇಕೆಂಬ ಮಹತ್ವಾಕಾಂಕ್ಷೆ ಅವಳಲ್ಲಿದೆ. ಆದ್ದರಿಂದಲೇ ಶಾಲೆಯ ಓದಿನ ಜೊತೆಗೆ ಕರಕುಶಲ ಕಲೆಗಳನ್ನು ಕಲಿತು ಬದುಕಿನ ದಾರಿಯನ್ನು ಸುಗಮಗೊಳಿಸಿಕೊಳ್ಳಬೇಕೆಂಬ ಆಶಯವನ್ನು ಶಾಂತಮ್ಮ ವ್ಯಕ್ತಪಡಿಸುತ್ತಾಳೆ.

ಹಳ್ಳಿಯಲ್ಲಿ ಮಗನಿಗೆ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಮಗನಿಗೆ ಬೆಂಬಲವಾಗಿ ನಿಲ್ಲುವ ಶಾಂತಮ್ಮ ಆಸ್ಪತ್ರೆಯ ವೈದ್ಯಾಧಿಕಾರಿಗಳು ಗಾಂಧಿಯನ್ನು ಅಪಹಾಸ್ಯ ಮಾಡಿದಾಗ ಮೂಕ ಪ್ರೇಕ್ಷಕಳಾಗಿ ನೋಡುವಲ್ಲಿ ಅವಳ ಅಸಹಾಯಕತೆಯು ಕಂಡು ಬರುತ್ತದೆ ಅಲ್ಲದೇ ವೈದ್ಯಾಧಿಕಾರಿಗಳನ್ನು ಎದುರು ಹಾಕಿಕೊಂಡರೆ ತನ್ನ ಮಗನ ಪ್ರಾಣಕ್ಕೆ ಕುತ್ತೆಂದು ಅವಳು ಅರಿತಂತಿದೆ.

ಬಾಲಕ ಗಾಂಧಿಗೆ ತನ್ನ ತಾಯಿಯ ಮೇಲೆ ಅಪಾರವಾದ ನಂಬಿಕೆಯಿದೆ. ಆದ್ದರಿಂದಲೇ ಆತ ತನಗೆ ಮಾನಸಿಕವಾಗಿ ಕಿರುಕುಳ ಕೊಡುತ್ತಿರುವ ಕಂಪ್ಯೂಟರ್ ಮೇಷ್ಟ್ರು ನಾರಾಯಣ ಮೂರ್ತಿಯನ್ನು ತನ್ನ ತಾಯಿ ಸ್ಕೂಲಿಗೆ ಬಂದು ಎಲ್ಲರ ಎದಿರು ಪೊರಕೆಯಿಂದ ಹೊಡೆದಂತೆ ಕನಸು ಕಾಣುತ್ತಾನೆ. (ಅನುಬಂಧದಲ್ಲಿ ಚಿತ್ರ-೧೨ನ್ನು ನೋಡಬಹುದು) ಇಲ್ಲಿ ಮಗನ ನಂಬಿಕೆ ತಾಯಿಯ ಮೇಲಿರುವ ರೀತಿಯನ್ನು ತೋರಿಸುವ ಪ್ರಯತ್ನವಿದೆ.

ಬೆಸಗರಹಳ್ಳಿ ರಾಮಣ್ಣನವರ ಕತೆಯಲ್ಲಿನ ನಿಂಗಮ್ಮ ಅನಕ್ಷರಸ್ಥೆ, ಜೊತೆಗೆ ಬಡತನಕ್ಕೆ ಹೊಂದಿಕೊಂಡು ವ್ಯವಸ್ಥೆಗೆ ತಲೆ ಬಾಗುವ ಹೆಣ್ಣುಮಗಳಾದರೆ, ಸಿನಿಮಾದಲ್ಲಿನ ಶಾಂತವ್ವ ಮಗನಿಗಾಗಿ ಇಡೀ ಸಮಾಜದ ಧುರೀಣರನ್ನು ಒಂದು ಕ್ಷಣ ಎದುರಿಸಿ ನಿಲ್ಲುವ ಛಲವಾದಿಯಂತೆ ಕಂಡು ಬರುತ್ತಾಳೆ.

ಮೂಲ ಕತೆಗೆ ಪೋಷಕವಾಗಿ ಹಲವು ದೃಶ್ಯಗಳ ಸಂಯೋಜನೆ ಇಲ್ಲಿದೆ ರಾಮಣ್ಣನವರ ಕತೆಯಲ್ಲಿ ಬಾಲಕ ಗಾಂಧಿಯ ಶಾಲೆಯ ಚಿತ್ರಣ ನಮಗೆ ಕಾಣಿಸುವುದೇ ಇಲ್ಲ. ಶಾಲೆಯಲ್ಲಿ ಓದುತ್ತಿದ್ದನೆಂಬುದಕ್ಕೆ ಮೂಲಕತೆಯಲ್ಲಿ ಎಲ್ಲಿಯೂ ಯಾವ ಸಾಕ್ಷಿಗಳು ಕೂಡ ಇಲ್ಲ. ಆದರೆ

ಸಿನಿಮಾವನ್ನು ವೈಚಾರಿಕ ಹಿನ್ನೆಲೆಯಲ್ಲಿ ಚಿತ್ರಿಸಿರುವ ಉದ್ದೇಶವನ್ನು ಇಟ್ಟುಕೊಂಡಿರುವ ನಿರ್ದೇಶಕರು ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯನ್ನು ಚಿತ್ರದಲ್ಲಿ ತಂದಿದ್ದಾರೆ.

ಪರಂಪರಾಗತ ಶಿಕ್ಷಣ ಪದ್ಧತಿಗೆ ಸಾಕ್ಷಿಯಾಗಿ ಹಳ್ಳಿಯ ಸ್ಕೂಲಿನಲ್ಲಿ ಮೇಷ್ಟ್ರು ರಾಮಪ್ಪ ಇದ್ದಾರೆ. ಆಧುನಿಕ ಶಿಕ್ಷಣದ ಪ್ರತೀಕವಾಗಿ ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿ ಇದ್ದಾನೆ. ಎರಡು ಶಿಕ್ಷಣ ಪದ್ಧತಿಗಳ ನಡುವಿನ ಸಂಘರ್ಷ ಮತ್ತು ವ್ಯತ್ಯಾಸಗಳ ಪರಿಚಯ ಇಲ್ಲಿದೆ.

ಹಳ್ಳಿಶಾಲೆಯ ಮಕ್ಕಳ ಅಗತ್ಯ ಮತ್ತು ಅವರ ಬದುಕಿನ ಶೈಲಿಯ ಪರಿಚಯವೂ ಇಲ್ಲಿದೆ. ಹಳ್ಳಿಯಲ್ಲಿ ನಡೆಯುವ ಪ್ರಾದೇಶಿಕ ರಾಜಕಾರಣದ ಸ್ವರೂಪ ಇಲ್ಲಿದೆ. ಸಣ್ಣಪುಟ್ಟದ್ದಕ್ಕೂ ರಂಪ ಮಾಡಿ ಮಕ್ಕಳು ಜಗಳ ಮಾಡಿದರೂ ಅದನ್ನು ರಾಜಕೀಯ ದ್ವೇಷವಾಗಿಸಿ ಬಣ್ಣ ಬಳಿಯುವ ಊರಿನ ಗೌಡ ಕೆಂಚಪ್ಪ ಮತ್ತು ಕೃಷ್ಣಪ್ಪ ಬೀದಿ ಕಾಳಗದ ಪರಿಚಯವೂ ಈ ಚಿತ್ರದಲ್ಲಿ ಅನಾವರಣಗೊಂಡಿದೆ.

ಸುರೇಶ ಸೀಬೆಕಾಯಿ ಕದ್ದ ಸಂದರ್ಭದಲ್ಲಿನ ದೃಶ್ಯದಲ್ಲಿ ಚಿಕ್ಕ ಮಕ್ಕಳ ಮೇಲಿನ ಆರೋಪವನ್ನು ಅಲ್ಲಗಳೆಯುವ ಕೆಂಚಪ್ಪ 'ಚುನಾವಣೆಯಲ್ಲಿ ಸೋತದ್ದರಿಂದ ದ್ವೇಷ ತೀರಿಸಿಕೊಳ್ಳಲು ಬಂದಿದ್ದೀಯಾ' ಎಂದು ಕೃಷ್ಣಪ್ಪನನ್ನು ಬಯ್ಯುವಲ್ಲಿ ಸ್ಥಳೀಯ ಪಂಚಾಯ್ತಿ ಮಟ್ಟದ ರಾಜಕೀಯ, ಅಧಿಕಾರದ ದಾಹ ಕಂಡುಬರುತ್ತದೆ.

ಮಹಿಳಾ ಮೀಸಲಾತಿಯಡಿಯಲ್ಲಿ ಗೆದ್ದ ಗೌರಮ್ಮ ತನ್ನ ಗಂಡ ಕೆಂಚಪ್ಪನ ದರ್ಪದಡಿಯಲ್ಲಿ ಸಿಕ್ಕು ಹೇಗೆ ಸ್ವಾತಂತ್ರ್ಯಹೀನಗಳಂತೆ ಗೋಚರಿಸುತ್ತಾಳೆ. ಇದು ಕೂಡ ಸಫಲವಾಗದ ಕಾನೂನುಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ಶಾಲೆಯಲ್ಲಿ ಪಾಠ ಹೇಳಿಕೊಡುವ ಮೇಷ್ಟ್ರು ರಾಮಪ್ಪ ಮಕ್ಕಳ ಸಹಜ ಕಲಿಕೆಗೆ ಹಳ್ಳಿಯ ವಾತಾವರಣದಲ್ಲಿಯೇ ಪೂರಕ ವ್ಯವಸ್ಥೆಗಳನ್ನು ಮಾಡಿಕೊಡುತ್ತಿರುತ್ತಾನೆ. ಇದಕ್ಕೆ ಸಾಕ್ಷಿಯಾಗಿ ಸ್ವಾತಂತ್ರ ದಿನಾಚರಣೆಯ ದಿನ ಆತ ಮಾಡುವ ವ್ಯವಸ್ಥೆಗಳು ಮತ್ತು ಮಕ್ಕಳಲ್ಲಿ ಆದರ್ಶ ವ್ಯಕ್ತಿಗಳ ವೇಷವನ್ನು ಹಾಕುವಂತೆ ಪ್ರೇರೇಪಿಸುವಲ್ಲಿಯೇ ಪರಿಪೂರ್ಣ ಶಿಕ್ಷಕನೊಬ್ಬನ ಪರಿಚಯವಾಗುತ್ತದೆ.

ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿ ಗಾಂಧಿಯ ಬಗೆಗೆ ಅಪಸ್ವರವನ್ನೆತ್ತಿದಾಗ ಕರೆದು ಬುದ್ಧಿವಾದವನ್ನು ಹೇಳಿ ಮಕ್ಕಳಿಗೆ ಪಾಠ ಹೇಳುವ ಪರಿಯನ್ನು ವಿವರಿಸುತ್ತಾರೆ.

ರಾಮಪ್ಪ ನಾರಾಯಣಮೂರ್ತಿಗೆ ಬುದ್ಧಿವಾದ ಹೇಳುವ ಸಂದರ್ಭ ಪ್ರಸಕ್ತ ಶಿಕ್ಷಣವ್ಯವಸ್ಥೆಯಲ್ಲಿ ಶಿಕ್ಷಕನಾದವನ ಜವಾಬ್ದಾರಿಗಳನ್ನು ಮನದಟ್ಟು ಮಾಡಿಸುತ್ತದೆ. ಈ ಕಾರಣಕ್ಕಾಗಿಯೇ ಚಿತ್ರ ಹಲವು ಅಂತರಾಷ್ಟ್ರೀಯ ಬಹುಮಾನವನ್ನು ಗಳಿಸಿದೆ. ಜೊತೆಗೆ ವಿದ್ವಾಂಸರ ಅಭಿಪ್ರಾಯಗಳು

ಸಹ ಈ ಚಿತ್ರದಲ್ಲಿ ಶಿಕ್ಷಣವ್ಯವಸ್ಥೆಯ ಬಗೆಗೆ ಇರುವ ಮಾಹಿತಿಯನ್ನು ಗುರುತಿಸಿ ಪ್ರಶಂಸೆಯನ್ನು ಮಾಡಿದ್ದಾರೆ.

ಈ ಚಿತ್ರದಲ್ಲಿ ರಾಮಣ್ಣನವರ ಕತೆಯ ಆಶಯಕ್ಕೆ ಪ್ರಸಕ್ತ ಸಮಸ್ಯೆಗಳನ್ನು ಜೋಡಿಸಿದ್ದಾರೆ. ಆ ಸಮಸ್ಯೆಯಲ್ಲಿ ಆಧುನಿಕ ಶಿಕ್ಷಣವೂ ಕೂಡ ಒಂದು ಹಳ್ಳಿಯಲ್ಲಿ ಯಾವ ವ್ಯವಸ್ಥೆಗಳೂ ಇಲ್ಲದೆಯೂ ಓದುವ ಜಾಣಮಗು ಗಾಂಧಿ ಹಳ್ಳಿಯ ಪ್ರತಿಭೆಗೆ ಸಾಕ್ಷಿಯಾಗುತ್ತಾನೆ.

ಆದರೂ ಆಧುನಿಕ ಶಿಕ್ಷಣದ ಪ್ರಭಾವದ ಎದಿರು ಹೆಡ್‌ಮಾಸ್ಟರ್ ರಾಮಪ್ಪನವರೆ ಬೆಪ್ಪಾಗಿ ನಿಲ್ಲುತ್ತಾರೆ ಎಂದ ಮೇಲೆ ಕಲಿಕೆಗೆ ತಮ್ಮನ್ನು ತಾವು ಒಗ್ಗಿಸಿಕೊಳ್ಳುತ್ತಿರುವ ಮಕ್ಕಳು ನಾರಾಯಣಮೂರ್ತಿಯ ಅಟಾಟೋಪದ ಮುಂದೆ ಭಯಬೀತರಾಗಿ ಕಂಪ್ಯೂಟರ್ ಎಂದರೆ ಕನಸಿನಲ್ಲಿಯೂ ಬೆಚ್ಚಿಬೀಳುವಂತಾಗುತ್ತದೆ.

ಕಲಿಕೆಗೆ ಭಾಷೆಯೇ ಸಮಸ್ಯೆ. ಇಂಗ್ಲೀಷ್ ಎಂದರೆ ಶ್ರೇಷ್ಠ ಎಂದು ತಿಳಿದು ಅದರತ್ತ ಆಕರ್ಷಿತರಾಗುವ ಹಳ್ಳಿಯ ಮುಗ್ಧ ಜನ, ಕಲಿಯಲು ಹೆದರುವ ಮಕ್ಕಳು, ಮತ್ತು ಕಲಿಸಲು ಬಂದಿರುವ ನಾರಾಯಣಮೂರ್ತಿಯ ದರ್ಪಗಳ ಪರಿಚಯ ಇಲ್ಲಿದೆ.

ಚಿತ್ರವೊಂದರ ಯಶಸ್ಸು ಇಡೀ ತಂಡದ ಶ್ರಮವನ್ನವಲಂಭಿಸಿರುತ್ತದೆ. ನಿರ್ದೇಶಕನ ಪ್ರೇರಣೆಗೆ ತಕ್ಕಂತೆ ಚಿತ್ರ ತಂಡವು ಕೆಲಸವನ್ನು ಮಾಡಿರುತ್ತದೆ ಎಂಬುದು ಸತ್ಯವೇ ಆದರೂ ಕತೆಯ ಓಟವನ್ನು ಅರ್ಥಮಾಡಿಕೊಂಡು ತಮ್ಮ ನೈಪುಣ್ಯತೆಯನ್ನು ಒರೆಗೆ ಹಚ್ಚಿ ಆ ಮೂಲಕ ಚಿತ್ರದ ಯಶಸ್ಸಿಗೆ ಶ್ರಮಿಸುತ್ತದೆ ಇಡೀ ತಂಡ. ಚಿತ್ರದಲ್ಲಿ ಇರುವ ಹಲವು ಪ್ರತಿಭೆಗಳು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ.

ರಾಜು ಉಪೇಂದ್ರಕುಮಾರ್ ಅವರು ಸಂಯೋಜಿಸಿರುವ ಸಂಗೀತ ಗಮನ ಸೆಳೆಯುತ್ತದೆ. ದೃಶ್ಯದಲ್ಲಿನ ಭಾವಕ್ಕೆ ಪುಷ್ಟಿಯನ್ನು ಕೊಡುವಂತಹ ಸಂಗೀತ, ದೃಶ್ಯವನ್ನು ಹೆಚ್ಚು ಮನದಟ್ಟು ಮಾಡುತ್ತದೆ.

ಬಾಲಕ ಗಾಂಧಿ ತಾತನಿಂದ ಕಲಿತ ಕರಕುಶಲ ಕಲೆಯ ವಿದ್ಯೆಯನ್ನು ಬಳಸಿ ಗಾಂಧಿತಾತನ ಮೂರು ಮಂಗಗಳ ಸಂದೇಶವನ್ನು ಒಂದೇ ಮಂಗನಲ್ಲಿ ತೋರಿಸುವಂತೆ ಕೆತ್ತನೆಯನ್ನು ಮಾಡುತ್ತಿರುವ ದೃಶ್ಯದಲ್ಲಿ ಬಳಸಿರುವ ಸಂಗೀತವು ಆ ದೃಶ್ಯಕ್ಕೆ ಹೆಚ್ಚಿನ ಮಹತ್ವವನ್ನು ತಂದು ಕೊಟ್ಟಿದೆ. ಕ್ರಿಯಾಶೀಲ ಚಟುವಟಿಕೆಯನ್ನು ಬಿಂಬಿಸುವಂತಹ ನಾದ ಈ ದೃಶ್ಯದಲ್ಲಿ ಹಿನ್ನೆಲೆಯಾಗಿ ಬರುತ್ತದೆ.

ಪ್ರತಿ ದೃಶ್ಯದಲ್ಲಿಯೂ ಸಹ ಸಂಗೀತ ಸಂಯೋಜನೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಇಂದಿನ ಅಬ್ಬರದ ಸಂಗೀತದ ನಡುವೆ ನವಿರಾದ ಸಂಗೀತದ ಅಲೆ ಪ್ರೇಕ್ಷಕರಿಗೆ

ತಾಜಾತನವನ್ನುಂಟು ಮಾಡುತ್ತದೆ. ರಾಜುಉಪೇಂದ್ರ ಕುಮಾರ್ ಅವರ ಸಂಗೀತ ಸಂಯೋಜನೆ ಭಾವುಕಲೋಕದ ಪರಿಚಯ ಮಾಡಿಸುತ್ತದೆ. ಪ್ರಾಚೀನತೆಯ ನಾದವನ್ನು ಅಪೂರ್ವವಾದ ಸಂಗೀತ ಸಂಯೋಜನೆ ಚಿತ್ರದುದ್ದಕ್ಕು ಆಕರ್ಷಕವಾಗಿ ಮೂಡಿ ಬಂದಿದೆ.

ಹಳ್ಳಿಯ ಸೊಗಡನ್ನು ಸಾರುವಂತಹ ಸಂಗೀತದ ಲಯಗಾರಿಕೆ ನಮಗೆ ಈ ಚಿತ್ರದಲ್ಲಿ ಸಿಗುತ್ತದೆ. ತಾಂತ್ರಿಕವಾಗಿ ಚಿತ್ರದ ಸಂಯೋಜನೆ ಕಲಾತ್ಮಕತೆಯನ್ನು ಪಡೆದಿದೆ. ಕ್ಯಾಮರಾ ಸೆರೆಹಿಡಿದಿರುವ ಕತ್ತಲು ಬೆಳಕಿನ ನೆರಳಿನಾಟವೂ ಹಳ್ಳಿಯ ಬದುಕನ್ನು ಅದ್ಭುತವಾಗಿ ಸೆರೆಹಿಡಿದಿದೆ.

ನಟ–ನಟಿಯರ ಅಭಿನಯವನ್ನು ಕುರಿತು ಹೇಳುವುದಾದರೆ ಪಾತ್ರಗಳ ವ್ಯಕ್ತಿತ್ವಕ್ಕೆ ತಕ್ಕಂತಹ ನಟನಟಿಯರ ಆಯ್ಕೆ ಇಲ್ಲಿದೆ. ರಂಗಪ್ಪನ ಪಾತ್ರದಲ್ಲಿ ಸದಾಶಿವ ಬ್ರಹ್ಮಾವರ ಅವರು ತಮ್ಮ ಎಂದಿನ ಅಭಿನಯದ ಶೈಲಿಯನ್ನು ಕಾಯ್ದುಕೊಂಡಿದ್ದಾರೆ.

ಬಾಲಕ ಗಾಂಧಿಯನ್ನು ಆಸ್ಪತ್ರೆ ಸೇರಿಸಬೇಕಾದಾಗಿನ ದೃಶ್ಯದಲ್ಲಿ ಮಾ॥ ಲಿಖಿತ್‌ನನ್ನು ಬ್ರಹ್ಮಾವರ ಇಳೀವಯಸ್ಸಿನಲ್ಲಿಯೂ ಹೊತ್ತುಕೊಂಡುಹೋಗುವ ದೃಶ್ಯದಲ್ಲಿ ಲವಲವಿಕೆಯಿಂದ ಅಭಿನಯಿಸಿದ್ದಾರೆ. ಎಲ್ಲಿಯೂ ಹಿರಿತನದ ತೂಕ ತಪ್ಪಿಲ್ಲ ಪ್ರೌಢ ಅಭಿನಯವನ್ನು ಬ್ರಹ್ಮಾವರರಲ್ಲಿ ನೋಡಬಹುದು.

ಗಂಡನನ್ನು ಕಳೆದುಕೊಂಡಿರುವ ಸೊಸೆ ಶಾಂತವ್ವನನ್ನು ತನ್ನ ಮಗಳಂತೆ ಪರಿಭಾವಿಸಿ ಸಹಜವಾದ ಮತ್ತು ಸರಳವಾದ ಬದುಕಿಗೆ ಒಗ್ಗಿ ಹೋಗಿರುವ ಹಳ್ಳಿಗನ ಪಾತ್ರದಲ್ಲಿ ಬ್ರಹ್ಮಾವರ ಅವರು ಯಾವ ಅಳುಕು ಇಲ್ಲದೆ ಅಭಿನಯಿಸಿದ್ದಾರೆ.

ಚಿತ್ರರಂಗದಲ್ಲಿ ಹಲವು ವರ್ಷಗಳಿಂದ ಇರುವ ಸದಾಶಿವ ಬ್ರಹ್ಮಾವರ ಅವರು ತಮ್ಮ ಅನುಭವದ ದೆಸೆಯಿಂದ ಬಂದ ಸಹಜ ಅಭಿನಯವನ್ನೇ ಈ ಚಿತ್ರದಲ್ಲಿಯೂ ಕೂಡ ಮುಂದುವರಿಸಿದಂತಿದೆ.

ಹಳ್ಳಿ ಶಾಲೆಯ ಬಡ ಮೇಷ್ಟ್ರು ಪಾತ್ರದಲ್ಲಿ ರಮೇಶ್‌ಭಟ್ ಅವರು ಎಂದಿನಂತೆ ತಮ್ಮ ಅಭಿನಯದ ಜಾಡನ್ನು ಮುಂದುವರೆಸಿದ್ದಾರೆ. ಚಿತ್ರರಂಗದಲ್ಲಿ ಅವರು ನಿರ್ವಹಿಸಿದ ಬೇರೆಲ್ಲ ಪಾತ್ರಗಳಿಗೆ ಈ ಚಿತ್ರದ ಪಾತ್ರವನ್ನು ಹೋಲಿಸಿ ನೋಡಿದರೆ ಇದು ಅವೆಲ್ಲಕ್ಕಿಂತ ಭಿನ್ನವಾಗಿ ಮೂಡಿಬಂದಿರುವುದು ಕಾಣುತ್ತದೆ.

ಕಂಪ್ಯೂಟರ್ ಜ್ಞಾನದ ಎದುರು ಬೆಪ್ಪನಾಗಿ ನಿಲ್ಲುವ, ಆಸ್ಪತ್ರೆಯಲ್ಲಿ ಕಾಯಿಲೆ ಬಿದ್ದ ಬಾಲಕ ಗಾಂಧಿಯನ್ನು ಪ್ರೀತಿಯಿಂದ ಹೋಗಿ ನೋಡುವ ಮೇಷ್ಟ್ರಾಗಿ ರಮೇಶ್ ಭಟ್ ಮಿಂಚಿದ್ದಾರೆ. ರಮೇಶ್‌ಭಟ್ ಅವರು ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿಯನ್ನು ಸರಿದಾರಿಗೆ

ತರುವಲ್ಲಿ ಪ್ರಯತ್ನ ಮಾಡುವ ದೃಶ್ಯದಲ್ಲಿ ಅವರೊಳಗಿನ ಶಿಕ್ಷಕ ಮಾತಾಡುವ ಪರಿ ಕಲಾವಿದನೊಬ್ಬ ಪರಕಾಯ ಪ್ರವೇಶ ಮಾಡಬಲ್ಲ ಎಂಬ ಮಾತಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಬಾಲಕ ಗಾಂಧಿಯಾಗಿ ಮಾ॥ಲಿಖಿತ್ ಚುರುಕಾದ ಅಭಿನಯವನ್ನು ನೀಡಿದ್ದಾನೆ. ಮೊದಲ ದೃಶ್ಯದಲ್ಲಿ ಕುಡುಕನೊಂದಿಗಿನ ಸಂಭಾಷಣೆಯ ಸಂದರ್ಭದಲ್ಲಿ ದಾರಿಗಡ್ಡ ನಿಂತವನಿಂದ ತಪ್ಪಿಸಿಕೊಂಡು ಓಡುವ ಹಳ್ಳಿಯ ಹೈದ ಚಿತ್ರದುದ್ದಕ್ಕೂ ಲವಲವಿಕೆಯ ನಟನೆಯನ್ನು ಉಳಿಸಿಕೊಂಡಿದ್ದಾನೆ. 'ನಾನು ಕಳ್ಳ ಅಲ್ಲ' ಎಂದು ಬೋರ್ಡ್ ಹಾಕಿಕೊಂಡು ಸತ್ಯಾಗ್ರಹ ಮಾಡುವ ದೃಶ್ಯದಲ್ಲಂತೂ ದೃಢ ಮನಸ್ಸಿನ ಗಾಂಧಿಯನ್ನು ತನ್ನೊಳಗೆ ಆವಾಹಿಸಿಕೊಂಡಂತೆ ಕಂಡು ಬರುತ್ತಾನೆ. ಲಿಖಿತ್‌ನ ಅಭಿನಯವನ್ನು ಮೆಚ್ಚಿ ಹಲವಾರು ಪ್ರಶಸ್ತಿಗಳು ಮತ್ತು ಸನ್ಮಾನಗಳು ಸಂದಿವೆ.[12] (ಅನುಬಂಧದಲ್ಲಿ ಚಿತ್ರ-೧೨ನ್ನು ನೋಡಬಹುದು) ಅಂತರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಬಾಲ ಕಲಾವಿದನೆಂಬ ಹಿರಿಮೆಯನ್ನು ಚಿತ್ರದ ಅಭಿನಯಕ್ಕಾಗಿ ಲಿಖಿತ್ ಪಡೆದುಕೊಂಡಿದ್ದಾನೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಕಿರಿಯ ಕಲಾವಿದನೊಬ್ಬ ತೀರ್ಪುಗಾರನಾಗಿ ಆಯ್ಕೆಯಾಗಿ ಮಕ್ಕಳ ಚಿತ್ರೋತ್ಸವದಲ್ಲಿ ಭಾಗವಹಿಸಿದ ಹೆಗ್ಗಳಿಕೆಯೂ ಸಹ ಮಾ॥ ಲಿಖಿತ್‌ಗೆ ಸಲ್ಲುತ್ತದೆ. ಈ ಚಿತ್ರದ ಒಟ್ಟಾರೆ ಪ್ರತಿಫಲವಾಗಿ ಮಾ॥ಲಿಖಿತ್ ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುವುದಕ್ಕೆ ಅವಕಾಶವಾಯಿತೆಂದರೆ ತಪ್ಪಿಲ್ಲ. ಊರಗೌಡನ ಪಾತ್ರದಲ್ಲಿ ಪಂಚಾಯ್ತಿ ಸದಸ್ಯೆ ಗೌರಮ್ಮನ ಗಂಡ ಕೆಂಚಪ್ಪನ ಪಾತ್ರದಲ್ಲಿ ಸುಂದರ ರಾಜ್ ಅವರ ಅಭಿನಯ ಅದ್ಭುತವಾಗಿದೆ. ಹಾಸ್ಯದ ದೃಶ್ಯಗಳಲ್ಲಿ ಗಮನ ಸೆಳೆಯುವ ಸುಂದರರಾಜ್ ಅಪ್ಪಟ ಹಳ್ಳಿಯ ಗೌಡನಂತೆ ಕಂಡು ಬಂದಿದ್ದಾರೆ.

ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿ ಉರುಫ್ ಮಂಗೇಶನ ಪಾತ್ರದಲ್ಲಿ ಮಂಡ್ಯ ರಮೇಶ್ ಅವರಿದ್ದಾರೆ. ಡಿಫರೆಂಟ್ ಮ್ಯಾನರಿಸಂಗಳಿಂದಲೇ ಪ್ರೇಕ್ಷಕರನ್ನು ಹಿಡಿದಿಡಬಲ್ಲ ಸಾಮರ್ಥ್ಯ ಅವರ ಅಭಿನಯಕ್ಕಿದೆ. ರಂಗಭೂಮಿ ಮತ್ತು ಸಿನಿಮಾಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಮಂಡ್ಯ ರಮೇಶ್ ಈ ಚಿತ್ರದ ಮೂಲಕ ಮತ್ತೊಂದು ಅದ್ಭುತ ಚಿತ್ರಮಾಡಿದ ಶ್ರೇಯಸನ್ನು ಪಡೆಯುತ್ತಾರೆ. ಅಲ್ಲಲ್ಲಿ ಬಂದು ಹೋಗುವ ಬಾಲಕ ಕಲಾವಿದರ ಚುರುಕಿನ ಅಭಿನಯ ಗಮನ ಸೆಳೆಯುತ್ತವೆ. ಇದು ಮಕ್ಕಳ ಚಿತ್ರವಾದ್ದರಿಂದ ಇಲ್ಲಿ ಮಕ್ಕಳ ಹಿಂಡೆ ಇದೆ. ಮೊದಲ ಬಾರಿ ಕ್ಯಾಮೆರಾ ಎದುರಿಸಿದ ಮಕ್ಕಳು ಯಾವ ಭಯವೂ ಇಲ್ಲದೇ ಚುರುಕಾದ ಅಭಿನಯವನ್ನು ನೀಡಿದ್ದಾರೆ.

---

[12] *(ಹೆಚ್ಚಿನ ಮಾಹಿತಿಗಾಗಿ ಅನುಬಂಧದಲ್ಲಿ ಕೊಟ್ಟಿರುವ ಫೋಟೋ ಸಂಖ್ಯೆ :9 ರಲ್ಲಿ ನೋಡಬಹುದು)*

ಒಟ್ಟಾರೆಯಾಗಿ ಈ ಚಿತ್ರದ ಬಗ್ಗೆ ಹೇಳುವುದಾದರೆ ಸಾಹಿತ್ಯಕೃತಿಯೊಂದನ್ನು ಅದರ ಮೂಲ ತಾತ್ವಿಕತೆ ಮತ್ತು ವೈಚಾರಿಕತೆಯ ನೆಲೆಗಟ್ಟಿನಲ್ಲಿ ಸಮರ್ಥವಾಗಿ ತೆರೆಯ ಮೇಲೆ ತಂದಿದ್ದಾರೆ. ನಿರ್ದೇಶಕ ನಂಜುಂಡೇಗೌಡ ಅವರು ಕತೆಯ ಆಯ್ಕೆ, ತಂತ್ರಜ್ಞರ ಆಯ್ಕೆ, ಮತ್ತು ಕಲಾವಿದರ ಆಯ್ಕೆಯಲ್ಲಿ ಎಲ್ಲಿಯೂ ಲೋಪದೋಷಗಳನ್ನು ಉಳಿಸಿಲ್ಲ. ಹಾಗಾಗಿಯೇ ಅದ್ಭುತವಾದ ಮಕ್ಕಳ ಚಿತ್ರವೊಂದು ಸಿದ್ಧಗೊಂಡಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕಂಪು ಸೂಸುವಂತೆ ಮಾಡಿದ ಶ್ರೇಯಸ್ಸು 'ನಾನು ಗಾಂಧಿ' ಸಿನಿಮಾ ತಂಡಕ್ಕೆ ಸಲ್ಲುತ್ತದೆ. ಸಾಹಿತ್ಯಾಭಿರುಚಿ ಹೊಂದಿರುವ ನಂಜುಂಡೇಗೌಡರು 'ನಾನು ಗಾಂಧಿ' ಚಿತ್ರದ ಗೆಲುವಿನಿಂದಾಗಿ ಮತ್ತಷ್ಟು ಕಲಾತ್ಮಕ ಮಕ್ಕಳ ಚಿತ್ರಗಳನ್ನು ಸಿದ್ಧಗೊಳಿಸಬೇಕೆಂಬ ಹುಮ್ಮಸ್ಸಿನಲ್ಲಿದ್ದಾರೆ. ಕಲಾತ್ಮಕ ಮಕ್ಕಳ ಚಿತ್ರವೊಂದು ಶೈಕ್ಷಣಿಕ ವಲಯದಲ್ಲಿ ಸ್ಥಾನಪಡೆಯಬಲ್ಲದು ಎಂಬುದನ್ನು ಈ ಚಿತ್ರ ಸಾಧಿಸಿ ತೋರಿಸಿದೆ. ಆ ಮೂಲಕ ವಿದ್ವಾಂಸರ ಪ್ರೇಕ್ಷಕರ ತೀರ್ಪುಗಾರರ ಮೆಚ್ಚುಗೆಯನ್ನು ಪಡೆದು ಹಲವು ದೇಶಗಳಲ್ಲಿ ಉತ್ತಮ ಶೈಕ್ಷಣಿಕ ಚಿತ್ರವೆಂದು ಪ್ರದರ್ಶನವನ್ನು ಕಾಣುತ್ತಿದೆ. ಜುಲೈ ೧೮ ರಿಂದ ೨೭ ರವರೆಗೆ ಇಟಲಿಯಲ್ಲಿ 'ಜಿಫೋನಿ ಮಕ್ಕಳ ಚಿತ್ರೋತ್ಸವದಲ್ಲಿ ಬೆರ್‌ಲುಸ್ಕೋನಿ ಅಧ್ಯಕ್ಷರು. ಇಟಾಲಿಯನ್ ಕೌನ್ಸಿಲ್ ಅವರೊಂದಿಗೆ ಬಾಲನಟ ಮಾ॥ ಲಿಖಿತ್. ಈ ಚಿತ್ರೋತ್ಸವದಲ್ಲಿನ ಸ್ಪರ್ಧಾತ್ಮಕ ವಿಭಾಗದಲ್ಲಿ ತೀರ್ಪುಗಾರರಾಗಿ ಆಯ್ಕೆಯಾಗಿ ಭಾಗವಹಿಸಿದ್ದರು.

ಕೆನಡಾದಲ್ಲಿ ಸೆಪ್ಟೆಂಬರ್ ೧೩ ಮತ್ತು ೧೪ ರಂದು ನಡೆದ 'ಟೊರೆಂಟೊ ಮಕ್ಕಳ ಚಿತ್ರೋತ್ಸವ – ೨೦೦೮' ರಂದು ಈ ಚಿತ್ರವು 'ಉದ್ಘಾಟನಾ ಚಿತ್ರವಾಗಿ ಪ್ರದರ್ಶನಗೊಂಡಿತ್ತು. ಸೆಪ್ಟೆಂಬರ್ ೨೬ ರಂದು ನಡೆದ ಕೊಲಂಬಿಯಾದ ಕಾರ್ಟೆಜಿಯದಲ್ಲಿ ೧೦ನೇ ಅಂತರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವದಲ್ಲಿ "ಅತ್ಯುತ್ತಮ ಶಿಕ್ಷಣ ಮೌಲ್ಯವುಳ್ಳ ಚಿತ್ರ ಎಂಬ ಖ್ಯಾತಿಗೆ 'ನಾನು ಗಾಂಧಿ' ಚಿತ್ರ ಎಲ್ಲ ದೇಶಗಳ ಶಿಕ್ಷಣ ಸಂಸ್ಥೆಗಳಲ್ಲಿ ಪ್ರದರ್ಶನಕ್ಕೆ ಯೋಗ್ಯವಾಗಿದ್ದು. ಶೈಕ್ಷಣಿಕ ಮೌಲ್ಯವನ್ನು ಪ್ರತಿಪಾದಿಸುತ್ತದೆ" ವಿಶೇಷ ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಅಕ್ಟೋಬರ್ ೫ ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ ಅವರಿಂದ ನಿರ್ದೇಶಕರಿಗೆ ಅತ್ಯುತ್ತಮ ಮಕ್ಕಳ ಚಿತ್ರ ಪ್ರಶಸ್ತಿ (KANFIDA Award).

ಖ್ಯಾತ ನಿರ್ದೇಶಕ ಕೆ.ರಾಘವೇಂದ್ರ ರಾವ್ ಅವರಿಂದ ಮಾ॥ ಲಿಖಿತ್ ಅವರಿಗೆ ಅತ್ಯುತ್ತಮ ಬಾಲನಟ ಪ್ರಶಸ್ತಿ' (KANFIDA Award).

ಇಷ್ಟೆಲ್ಲಾ ಸಾಧನೆಗಳೊಂದಿಗೆ ಕಲಾತ್ಮಕ ಚಿತ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯುತ್ತಿದೆ.

ಅಧ್ಯಾಯ–೫

ಸಮಾರೋಪ

ಸಮಾರೋಪ

ಪ್ರಸ್ತುತ ಸಿನಿಮಾ ಜಗತ್ತಿನಲ್ಲಿ ಸಾಹಿತ್ಯ ಕೃತಿಗಳು ಮೂಡಿಬರಬೇಕಾದ ಅಗತ್ಯವನ್ನು ಹೇಳುವ ಸಲುವಾಗಿಯೇ ಈ ಅಧ್ಯಯನವನ್ನು ಆಯ್ಕೆ ಮಾಡಿಕೊಂಡು ನನ್ನ ತಿಳುವಳಿಕೆಯ ಮಟ್ಟದಲ್ಲಿ ಸಿನಿಮಾ ಜಗತ್ತಿನ ವಿಶ್ಲೇಷಣೆಯನ್ನು ಮಾಡುವ ಪ್ರಯತ್ನ ಮಾಡಿದ್ದೇನೆ.

ಸಿನಿಮಾ ಲೋಕ ಕತ್ತಲೆ ಕೋಣೆಯಲ್ಲಿ ಕನಸುಗಳನ್ನು ಹಂಚುವ ಕೆಲಸ ಮಾಡುತ್ತದೆ. ನನ್ನ ಗ್ರಹಿಕೆಯ ಪ್ರಕಾರ ಇದು ಕೇವಲ ಕನಸುಗಾರಿಕೆಯನ್ನು ಹೆಚ್ಚಿಸಿದರೆ ಸಾಲದು ಬದಲಿಗೆ ಪ್ರೇಕ್ಷಕರಲ್ಲಿ ಚಿಂತನಾಪರ ಅಲೋಚನೆಗಳನ್ನು ಬಿತ್ತುವ ಕೆಲಸವನ್ನು ಸಹ ಮಾಡಬೇಕಾದ ಅಗತ್ಯವಿದೆ. ಆ ಕಾರಣಕ್ಕಾಗಿಯೇ ಈ ಅಧ್ಯಯನದ ಉದ್ದಕ್ಕೂ ಚಿತ್ರರಂಗದ ಜವಾಬ್ದಾರಿಗಳನ್ನು ಕುರಿತಾಗಿ ನನ್ನ ಆಲೋಚನೆಗಳನ್ನು ಹೇಳುವ ಪ್ರಯತ್ನವನ್ನು ಮಾಡಿದ್ದೇನೆ. ಬರಗೂರು ರಾಮಚಂದ್ರಪ್ಪನವರು ಹೇಳುವಂತೆ."ಸಿನಿಮಾ ಮಾಧ್ಯಮವು ಒಂದು ಜನಪದ ಕಲೆ" ಎಂಬ ಮಾತು ವಾಸ್ತವ ಸತ್ಯ. ಏಕೆಂದರೆ ಅವರೇ ಹೇಳುವಂತೆ ಸಿನಿಮಾ ಒಂದು ಜನಪದ ಕಲೆ ಎಂಬ ಲೇಖನದಲ್ಲಿ ಈ ಮಾತಿಗೆ ಪುಷ್ಟಿಯನ್ನೊದಗಿಸುವ ಹಲವು ಮಾಹಿತಿಗಳು ನಮಗೆ ದೊರೆಯುತ್ತವೆ. "ಜಾನಪದ ಜನರ ಜ್ಞಾನದಿಂದ ರೂಪಗೊಂಡದ್ದು. ಜನರ ಜೀವನ ವಿಧಾನ ಯಾವ ಬಗೆಯಲ್ಲಿರುತ್ತದೆಯೋ ಅದೇ ಬಗೆಯಲ್ಲಿ ಆತನ ಅಭಿವ್ಯಕ್ತಿ ಮಾಧ್ಯಮಗಳೂ ಸಹ ರೂಪ ಪಡೆದಿರುತ್ತವೆ. ಆ ಹಿನ್ನೆಲೆಯಲ್ಲಿ ನೋಡಿದರೆ ಸಿನಿಮಾ ಜಗತ್ತು ವ್ಯಕ್ತಿಯ ಅಭಿವ್ಯಕ್ತಿ ಸಾಮರ್ಥ್ಯಕ್ಕೆ ವಿಪುಲವಾದ ಅವಕಾಶವನ್ನು ಮಾಡಿಕೊಟ್ಟಿದೆ ಎಂಬುದರಲ್ಲಿ ಅನುಮಾನವಿಲ್ಲ. ಜನಪದವು ಹೇಗೆ ಸೃಜನಶೀಲ, ಚಲನಶೀಲ ಸಂಸ್ಕೃತಿಯೋ ಹಾಗೆ ಸಿನಿಮಾ ಕೂಡ ತನ್ನ ಚಲನ ಶೀಲತೆಯೊಂದಿಗೆ ನಿರಂತರವಾಗಿ ಮುಂದುವರಿಯುತ್ತಿರುತ್ತದೆ. ಹೀಗೆ ನಿತ್ಯವೂ ಹರಿಯುತ್ತಲೇ ಇರುವ ಒಂದು ಪರಿಚಲನಾತ್ಮಕ ಸಂಸ್ಕೃತಿಯಲ್ಲಿ ಸಾಹಿತ್ಯ ಕೃತಿಗಳು ಅವಕಾಶ ಪಡೆದಾಗ ಹೊರಹೊಮ್ಮುವ ಫಲಿತಾಂಶ ಕಲಾತ್ಮಕ ವಾಗಿರುತ್ತದೆ. ಯಾವುದು ಹೆಚ್ಚು ಕಲಾತ್ಮಕತೆಯನ್ನು ಒಳಗೊಂಡಿರುತ್ತದೆಯೋ ಅದು ಯಶಸ್ಸನ್ನು ಪಡದೇ ಪಡೆಯುತ್ತದೆ". ಎಂದಿದ್ದಾರೆ. ಆ ನಿಟ್ಟಿನಲ್ಲಿ ನೋಡುವುದಾದರೆ ಸಿನಿಮಾ ಲೋಕವು ಜನರ ಬಳಿಗೆ ನೇರವಾಗಿ ತಲುಪುವುದರಿಂದ ಹೆಚ್ಚು ಜನಪ್ರಿಯತೆಯನ್ನು ಪಡೆಯುತ್ತದೆ. ಹೀಗೆ ಜನಪ್ರಿಯತೆಯನ್ನು ಪಡೆದು ಮಾಧ್ಯಮವೊಂದು ಜನರ ಜೀವನ ಶೈಲಿಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ಈ ರೀತಿಯ ಪ್ರಭಾವಗಳು ಸಾಮಾಜಿಕವಾಗಿ ಹೊಸದೊಂದು ಕ್ರಾಂತಿಯನ್ನೇ ಮಾಡಬಲ್ಲ ಸಾಮರ್ಥ್ಯವನ್ನು ಸಹ ಪಡೆದಿರುತ್ತದೆ. ಈ ಎಲ್ಲ ಮೂಲಗಳಿಂದ ನೋಡಿದಾಗ ಸಿನಿಮಾ ಮಾಧ್ಯಮವು ಹೆಚ್ಚು ಹೆಚ್ಚು

ಕ್ರಿಯಾತ್ಮಕ ಆಲೋಚನೆಗಳನ್ನು ತನ್ನಲ್ಲಿ ರೂಢಿಸಿಕೊಳ್ಳಬೇಕಾದ ಅಗತ್ಯವನ್ನು ನಾವು ಮನದಟ್ಟು ಮಾಡಿಕೊಳ್ಳಬಹುದಾಗಿದೆ.

ಜನರು ತಮ್ಮ ಅಭಿರುಚಿಗೆ ತಕ್ಕಂತೆ ವಸ್ತು ವಿಷಯಗಳನ್ನು ಪರದೆಯ ಮೇಲೆ ನೋಡಿ ಆನಂದಿಸುತ್ತ ಅಂತೆಯೇ ಅವುಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಬಯಸುತ್ತಾರೆ. ಇದು ಕೇವಲ ಭೌತಿಕ ಅಳವಡಿಕೆಯಲ್ಲ. ಎಷ್ಟೋ ಪ್ರೇಕ್ಷಕರು ತಮ್ಮ ಮೆಚ್ಚಿನ ನಾಯಕ-ನಾಯಕಿಯರ ವ್ಯಕ್ತಿತ್ವಗಳನ್ನು ಅನುಕರಿಸಿ ಮತ್ತು ವ್ಯಕ್ತಿತ್ವಗಳನ್ನು ರೂಪಿಸಿಕೊಂಡ ಹಲವು ಉದಾಹರಣೆಗಳನ್ನು ಕಾಣಬಹುದು.

ಇತ್ತೀಚಿನ ಪತ್ರಿಕೆಯ ವರದಿಯೊಂದರಲ್ಲಿ ನಟಿ ಮಾಲಾಶ್ರೀಯವರು ತಮ್ಮ ಸಂದರ್ಶನದಲ್ಲಿ ಅಭಿಮಾನಿಯೊಬ್ಬಳು ತನ್ನಿಂದ ಸ್ಫೂರ್ತಿ ಪಡೆದು ಇನ್ಸ್‌ಪೆಕ್ಟರ್ ಆದ ಘಟನೆಯನ್ನು ಹೇಳಿಕೊಂಡಿದ್ದಾರೆ. ಇವನ್ನು ಗಮನಿಸಿದಾಗ ಚಿತ್ರದಲ್ಲಿನ ಕೆಲವೊಂದು ಪಾತ್ರಗಳು ನಿಜಜೀವನದಲ್ಲಿ ಆದರ್ಶವಾಗಿ ನಿಲ್ಲಬಲ್ಲವು ಎಂಬ ಸತ್ಯ ಅರಿವಿಗೆ ಬರುತ್ತದೆ. ಈ ನಿಟ್ಟಿನಲ್ಲಿ ನನ್ನ ಅಧ್ಯಯನದ ಉದ್ದೇಶದಲ್ಲಿ ಹೇಳಿದಂತೆ ಬೆಸಗರಹಳ್ಳಿ ರಾಮಣ್ಣನವರು ಬರೆದಿರುವ ಸಣ್ಣಕತೆ "ಗಾಂಧಿ"ಯನ್ನು ಆಧರಿಸಿ ನಂಜುಂಡೇಗೌಡರು "ನಾನು ಗಾಂಧಿ" ಎಂಬ ಮಕ್ಕಳ ಚಿತ್ರವನ್ನು ಸಿದ್ಧಪಡಿಸಿ ತೆರೆಗೆ ತಂದಾಗ ಆದ ಪರಿಣಾಮಗಳ ವಿಶ್ಲೇಷಣೆಯೇ ಈ ಅಧ್ಯಯನ.

ಸಣ್ಣ ಕತೆಯ ಒಂದು ಎಳೆಯನ್ನು ಮೂರು ಗಂಟೆಗಳ ಸಿನಿಮಾಕ್ಕೆ ಅಳವಡಿಸಿ ಇನ್ನೂ ವಿಸ್ತೃತವಾಗಿ ಕತೆಯಲ್ಲಿನ ಸಂದೇಶವನ್ನು ದೃಶ್ಯದಲ್ಲಿ ಅಮೋಘವಾಗಿ ಕಟ್ಟಿಕೊಟ್ಟಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಗಾಂಧಿ ತತ್ವಗಳು ಶಾಲಾ ಅವಧಿಯಲ್ಲಿಯೇ ಮಕ್ಕಳಿಗೆ ತಿಳಿಸಿಕೊಡಬೇಕಾದ ಅಗತ್ಯದ ಮೇಲೂ ಕೂಡ ಈ ಚಿತ್ರ ಬೆಳಕು ಚೆಲ್ಲುತ್ತದೆ.

ಇಂದು ತೆರೆ ಕಾಣುತ್ತಿರುವ ಚಿತ್ರಗಳಲ್ಲಿ ಬಹುತೇಕ ವಾಣಿಜ್ಯದ ಉದ್ದೇಶದಿಂದ ಸಿದ್ಧಗೊಳ್ಳುತ್ತಿರುವ ಚಿತ್ರಗಳಲ್ಲಿ ಪ್ರಸ್ತುತ ಸಂದರ್ಭದಲ್ಲಿ 'ನಾನು ಗಾಂಧಿ' ಯಂತಹ ಕಲಾತ್ಮಕ ಚಿತ್ರವೊಂದು ಶೈಕ್ಷಣಿಕ ಜಗತ್ತಿಗೆ ಹೊಸ ಮಾದರಿಯ ಉದ್ದೇಶಗಳ ಅಗತ್ಯವಿದೆ ಎಂಬ ಅಂಶವನ್ನು ಮನವರಿಕೆ ಮಾಡಿ ಕೊಟ್ಟಿದೆ ಎಂಬುದೇ ನನ್ನ ನಂಬಿಕೆ. ಈ ಮಾತಿಗೆ ಪುಷ್ಟಿಕೊಡುವಂತೆ ಈ ಚಿತ್ರಕ್ಕೆ ಅತ್ಯುತ್ತಮ ಮಕ್ಕಳ ಚಿತ್ರ ಎಂಬ ಪ್ರಶಸ್ತಿಯೂ ಸಂದಿದೆ. ಜೊತೆಗೆ ಅತ್ಯುತ್ತಮ ಶೈಕ್ಷಣಿಕ ಚಿತ್ರ ಎಂಬ ಖ್ಯಾತಿಯೊಂದಿಗೆ ಸುಮಾರು ಮೂವತ್ತು ದೇಶಗಳಲ್ಲಿ ಪ್ರದರ್ಶನವನ್ನು ಕಂಡಿದೆ. ಈ ಎಲ್ಲ ಮಾಹಿತಿಗಳನ್ನಾಧರಿಸಿ ಇಂತಹ ಸಂದೇಶಾತ್ಮಕ ಚಿತ್ರಗಳ ಅಗತ್ಯ ಇಂದು ನಮ್ಮ ಕನ್ನಡ ಸಿನಿಮಾ ಲೋಕದಲ್ಲಿ ಬರಬೇಕಾದ ಪ್ರಸ್ತುತತೆ ಇದೆ ಎಂಬುದು ನನ್ನ ಅಭಿಪ್ರಾಯ. ಜಾಗತೀಕರಣದ ಪ್ರಭಾವದಿಂದಾಗಿ ಆಧುನಿಕ ಶೈಲಿಯ ಜೀವನ ವಿಧಾನಕ್ಕೆ ಒಳಗಾದ ಜನ ಆಗಸ್ಟ್ ೧೫ ರಂದು

ರಜೆ ಕೊಟ್ಟಿದ್ದರೇ ಲೇಸಿತ್ತೆಂದು ಬಯಸುತ್ತಿರುವ ಇಂದಿನ ದಿನಗಳಲ್ಲಿ ಮಕ್ಕಳಲ್ಲಿ ರಾಷ್ಟ್ರಾಭಿಮಾನವನ್ನು ತುಂಬಬಲ್ಲ ಇಂತಹ ಚಿತ್ರಗಳು ದೇಶದ ಬಗೆಗಿನ ಅಭಿಮಾನವನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಶಿಕ್ಷಣದ ಒಂದು ಮಹತ್ವದ ಭಾಗಗಳಾಗಬಲ್ಲವು. ಜಯರಾಮರಾಜೇಅರಸ್ ಐ.ಎ.ಎಸ್. ಲೇಖಕರು ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಇವರು ಚಿತ್ರವನ್ನು ಕುರಿತು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. "ಇಂಥ ಒಳ್ಳೆಯ ಸಿನಿಮಾ ಇತ್ತೀಚೆಗೆ ಅಪರೂಪ. ಮಕ್ಕಳ ಮನಸ್ಸಿಗೆ ಹೊಸದಾಗಿ ಸೃಜಿಸುವ ಸಂದರ್ಭದಲ್ಲಿ ಇಂಥ ಚಿತ್ರಗಳ ಪರಿಣಾಮ ಬಹಳ ದೊಡ್ಡದು. ನಾಲ್ಕಾರು ಕಡೆ ಕಣ್ಣಲ್ಲಿ ನೀರು ಬಂತು. ಅಷ್ಟೊಂದು ಚನ್ನಾಗಿ ಚಿತ್ರವನ್ನು ಮಾಡಿದ್ದಾರೆ".[13]

ವೃತ್ತಿಪರ ವಿದ್ಯಾಭ್ಯಾಸದಿಂದ ದೇಶದ ಸಂಪೂರ್ಣ ಅಭಿವೃದ್ಧಿ ಸಾಧ್ಯ. ಜನರ ಜೀವನ ಮಟ್ಟದಲ್ಲಿ ಸುಧಾರಣೆಯಾಗುತ್ತದೆಂಬ ಆಕಾಂಕ್ಷೆಯ ಹಿನ್ನೆಲೆಯನ್ನು ಇಂದು ನೀಡುತ್ತಿರುವ ವಿದ್ಯಾಭ್ಯಾಸವು ಕೇವಲ ಯಾಂತ್ರಿಕ ಬದುಕಿಗೆ ದುಡಿಯುವ ಸಾಮರ್ಥ್ಯವನ್ನು ಒದಗಿಸುತ್ತಿದೆಯೇ ಹೊರತು ಜೀವನ ಮೌಲ್ಯಗಳು ಮತ್ತು ಸಾಮಾನ್ಯ ಬದುಕಿನಲ್ಲಿ ಸಹಜವಾಗಿ ಎಲ್ಲರೊಂದಿಗೆ ಬೆರೆತು ಉತ್ತಮ ಬಾಂಧವ್ಯಗಳನ್ನು ಉಳಿಸಿಕೊಂಡು ಹೋಗುವಲ್ಲಿ ಆದರ್ಶೀಕೃತ ಶಿಕ್ಷಣದ ಪಠ್ಯಗಳ ಕೊರತೆಯಿದೆ ಎಂದೇ ಹೇಳಬೇಕು. ಪರೀಕ್ಷಾ ದೃಷ್ಟಿಯಿಂದ ಓದುವ ಓದು ಮಕ್ಕಳಿಗೆ ಒಳ್ಳೆಯ ಅಂಕಗಳನ್ನು ಒದಗಿಸುತ್ತಿದೆಯೇ ಹೊರತು ಇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲದಂತಾಗಿದೆ. ಇಂಥ ಮಕ್ಕಳಿಗೆ ಮನರಂಜನೆಯ ಅಗತ್ಯ ಇದೆ ಎಂಬುದನ್ನು ಇಂದು ಶಾಲಾ ಕಾಲೇಜುಗಳು ಮರೆತಂತೆ ಭಾಸವಾಗುತ್ತಿದೆ. ನಂಜುಂಡೇಗೌಡರ ನಾನು ಗಾಂಧಿ ಸಿನಿಮಾ ಪುಟ್ಟ ಮಕ್ಕಳಲ್ಲಿನ ಪ್ರತಿಭಾ ಪ್ರದರ್ಶನಕ್ಕೊಂದು ವೇದಿಕೆಯಾಗಿದೆ. ಅಲ್ಲದೇ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆಯಾದ್ದರಿಂದ ಮಕ್ಕಳಿಗೆ ಒಂದು ರೀತಿಯ ಹೆಮ್ಮೆಯನ್ನು ಸಾಧನೆಗೆ ಹೊಸ ದಾರಿಯನ್ನು ಮಾಡಿಕೊಟ್ಟಿದೆ. ಇಂಥ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಅವಕಾಶ ದೊರೆತಂತಾಗಿದೆ. ಅಂತೆಯೇ ಈ ಸಿನಿಮಾ ಒಳಗೊಂಡಿರುವ ವಸ್ತುವು ಕೂಡ ಹಳ್ಳಿಗಾಡಿನ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕೈ ಗನ್ನಡಿಯಂತಿದೆ. ಆಧುನಿಕ ಶಿಕ್ಷಣದೆದಿರು ಹಳ್ಳಿಗಾಡಿನ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಅನುಭವಿಸುವ ಅವಮಾನ ಮತ್ತು ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಹೆದರಿಕೊಳ್ಳುವ ರೀತಿಗಳೆರಡು ಜಾಗತೀಕರಣದ ಪ್ರಭಾವದಿಂದಾಗಿ ಉಂಟಾಗಿರುವ ಜಾಗತಿಕ ತಲ್ಲಣವೂ ಹೌದು ಎಂಬುದಕ್ಕೆ ಸಾಕ್ಷ್ಯಗಳನ್ನು ಒದಗಿಸುತ್ತದೆ ಈ ಚಿತ್ರ.

---

[13] ಜುಲೈ ೧೧ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿ

ಸಣ್ಣ ಕತೆಯಲ್ಲಿ ಬೆಸಗರಹಳ್ಳಿ ರಾಮಣ್ಣನವರು ಸಮಾಜದಲ್ಲಿ ಅಧಃಪತನಕ್ಕಿಳಿದಿರುವ ಅಧಿಕಾರವರ್ಗದವರ ಶೋಷಣೆ ಮತ್ತು ಜಮೀನ್ದಾರರ ಬೇಜವಾಬ್ದಾರಿತನವನ್ನು ವಿವರಿಸಿದರೆ, ಈ ಚಿತ್ರದಲ್ಲಿ ಇನ್ನೂ ವಿಸ್ತೃತವಾಗಿ ಪ್ರಸಕ್ತ ವಿದ್ಯಮಾನಗಳನ್ನು ಆಧರಿಸಿ ಪ್ರಸ್ತುತ ಸಮಸ್ಯೆಗಳ ಬಗೆಗೆ ಗಂಭೀರ ಚರ್ಚೆಯನ್ನೆ ಮಾಡುತ್ತದೆ. ಈ ನಿಟ್ಟಿನಲ್ಲಿ ಬೆಸಗರಹಳ್ಳಿ ರಾಮಣ್ಣನವರ ಕತೆಯಲ್ಲಿ ದುರಂತ ಅಂತ್ಯವನ್ನು ಕಾಣುವ ಗಾಂಧಿ 'ನಾನು ಗಾಂಧಿ' ಸಿನಿಮಾದಲ್ಲಿ ಸುಧಾರಿತ ಸಮಾಜದ ನಾಂದಿದೀಪವಾಗಿ ಬದುಕುಳಿದು ಬರುತ್ತಾನೆ.

ಕತೆಯಲ್ಲಿನ ಅಪೂರ್ಣತೆ ಸಿನಿಮಾದಲ್ಲಿ ಸಾರ್ಥಕತೆಯನ್ನು ಪಡೆಯುತ್ತದೆ. ಹೀಗೆ ಈ ಅಧ್ಯಯನವು ಈ ಎರಡು ಕ್ಷೇತ್ರದಲ್ಲಿನ ಭಿನ್ನತೆಗಳನ್ನು ಗುರುತಿಸಿ ಅಲ್ಲಿರುವ ಹಲವು ವಿಶೇಷತೆಗಳ ಮೇಲೆ ಬೆಳಕು ಚಲ್ಲುವ ಪ್ರಯತ್ನವನ್ನು ಮಾಡಿದೆ. ಇಂದಿನ ಸಿನಿಮಾ ಕ್ಷೇತ್ರದಲ್ಲಿ ಇಂತಹ ಹೊಸ ಪ್ರಯತ್ನಗಳಾಗಬೇಕಾದ ಅಗತ್ಯಗಳ ಕಡೆಗೆ ಗಮನ ಹರಿಸಬೇಕೆಂಬ ಆಶಯವೇ ಇಲ್ಲಿದೆ.

ಸಿನಿಮಾ ಪ್ರಕಾರವು ಹಲವು ಜ್ಞಾನ ಶಾಖೆಗಳನ್ನು ಬಳಸಿಕೊಂಡು ಎಲ್ಲಾ ಪ್ರಕಾಶದ ಎಲ್ಲ ವರ್ಗದ ಪ್ರೇಕ್ಷಕರಿಗೆ ತಲುಪುವ ಕೆಲಸವನ್ನು ಮಾಡುತ್ತದೆ. ಆದ್ದರಿಂದಲೇ ಏನನ್ನು ಬೇಕಾದರೂ ಸಿನಿಮಾದಲ್ಲಿ ತರುವ ಸಾಧ್ಯತೆಗಳನ್ನು ಕಾಣಬಹುದಾಗಿದೆ. ಆಧುನಿಕ ಆವಿಷ್ಕಾರಗಳು ಹೆಚ್ಚಾಗಿ ನಡೆದಂತೆಲ್ಲಾ ಬದಲಾದ ಚಿತ್ರದ ಸಂರಚನೆಯನ್ನು ನಾವು ಸಿನಿಮಾ ಲೋಕದ ಇತಿಹಾಸದಿಂದ ತಿಳಿದುಕೊಳ್ಳಬಹುದು.

ಸಾಹಿತ್ಯವಿಲ್ಲದೇ ಸಿನಿಮಾ ಇಲ್ಲ. ಕೃತಿಕಾರನಿಂದ ರಚನೆಯಾದ ಕೃತಿಗಳೇ ಇರಬಹುದು ಅಥವಾ ಸಿನಿಮಾ ಸಾಹಿತ್ಯವನ್ನು ಬರೆಯುವ ಸಾಹಿತಿಯಿಂದ ರಚಿಸಲ್ಪಟ್ಟ ಕೃತಿಯೇ ಆಗಿದ್ದರೂ ಸಾಹಿತ್ಯ ಎಂಬ ಅಂಶ ಮಾತ್ರ ಸಮಾನವಾಗಿಯೇ ಇರುತ್ತದೆ. ಭಾಷೆಯಿಲ್ಲದ "ಪುಷ್ಪಕ ವಿಮಾನ" ದಂತಹ ಸಿನಿಮಾವು ಕೂಡ ಯಶಸ್ವಿಯಾಗಿದೆ. ಆದರು ಅದರಲ್ಲಿಯೂ ಒಂದು ಕತೆಯಿದೆ ಎನ್ನುವುದು ವಿಶೇಷ.

ನಿರ್ದೇಶಕನಾದವನು ಯಾವುದೇ ಕತೆ ಕಾದಂಬರಿಯನ್ನು ಆಧರಿಸಿ ಸಿನಿಮಾ ಮಾಡಲು ಮುಂದಾದಾಗ ಅಲ್ಲಿ ತನ್ನ ಹೊಸ ಆಲೋಚನಾಕ್ರಮಗಳಿಗೂ ಸ್ಥಳವಿಟ್ಟು ಕೊಂಡಿರುತ್ತಾನೆ. ಅಂದರೆ ಕತೆಯ ಎಳೆ ಅಥವಾ ಮೂಲ ಸಂದೇಶವನ್ನು ಆತ ದೃಶ್ಯದಲ್ಲಿ ಹಿಡಿದಿಡುವಾಗ ಅಲ್ಲಿ ತನ್ನ ಅನುಭವ ಲೋಕದ ಹಲವು ಅಂಶಗಳಿಗೆ ತಕ್ಕಂತೆಯೇ ರೂಪಿಸುತ್ತಾನೆಯೇ ಹೊರತು ಯಥಾವತ್ತಾಗಿ ಕತೆಯನ್ನು ಎಲ್ಲಿಯೂ ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಸಾಹಿತ್ಯ ಕೃತಿಯುಸ ಹಲವು ಬದಲಾವಣೆಗಳೊಂದಿಗೆ ತೆರೆಗೆ ಬರುತ್ತವೆ.

ಈ ಅಧ್ಯಯನದಲ್ಲಿ ಬಳಸಿಕೊಂಡಿರುವ "ನಾನು ಗಾಂಧಿ" ಚಲನ ಚಿತ್ರವನ್ನೇ ಉದಾಹರಣೆಯಾಗಿ ತೆಗೆದು ಕೊಂಡರೂ ಹಲವಾರು ಬದಲಾವಣೆಗಳಾಗಿರುವುದನ್ನು ಕಾಣಬಹುದು. ಅಧ್ಯಾಯ ಒಂದರಲ್ಲಿ ಈ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಸವಿಸ್ತಾರವಾಗಿ ಹೇಳಲಾಗಿದೆ. ಪ್ರಸ್ತುತದಲ್ಲಿ ಪ್ರೇಕ್ಷಕರ ಅಭಿರುಚಿಗೆ ಕಳಪೆಯೆನ್ನಬಹುದಾದ ಸಾಮಾಜಿಕ ಸ್ವಾಸ್ತ್ಯವನ್ನು ಹದಗೆಡಿಸುವ ಚಿತ್ರಗಳು ಬರುತ್ತಿರುವ ಹೊತ್ತಿನಲ್ಲಿ ಕಲಾತ್ಮಕ ಚಿತ್ರಗಳ ಅಗತ್ಯವನ್ನುಹೇಳುವ ಉದ್ದೇಶವೇ ಈ ಅಧ್ಯಯನಕ್ಕೆ ಮೂಲಕಾರಣ.

ಈಗ ಬರುತ್ತಿರುವ ಎಲ್ಲ ಸಿನಿಮಾಗಳು ಕಳಪೆ ಎಂದು ನನ್ನ ಅಭಿಪ್ರಾಯವಲ್ಲ ಏಕೆಂದರೆ ಹಸೀನಾ, ಗುಬ್ಬಚ್ಚಿಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ, ತಾಯಿ ಸಾಹೇಬ, ದ್ವೀಪ, ಮುಸ್ಸಂಜೆ ಯಂಥ ಕಲಾತ್ಮಕ ಚಿತ್ರಗಳು ತೆರೆಕಂಡು ಅತ್ಯುತ್ತಮ ಚಿತ್ರಗಳು ಎಂಬ ಹೆಗ್ಗಳಿಕೆಯನ್ನು ಪಡೆದ ಕಾಲಘಟ್ಟದಲ್ಲಿಯೇ ನಾನಿದ್ದೇನೆ. ಆದ್ದರಿಂದ ನನ್ನ ಅಭಿಪ್ರಾಯ ಸಾರ್ವತ್ರಿಕವಲ್ಲ ಬದಲಿಗೆ ವರ್ಷವೊಂದಕ್ಕೆ ತೆರೆಕಾಣುತ್ತಿರುವ ಚಿತ್ರಗಳಲ್ಲಿ ಹೆಚ್ಚಿನ ಸಂಖ್ಯೆ ಚಿತ್ರಗಳೆಲ್ಲವು ಹಲವು ವೈರುದ್ಧ್ಯ ಸಂದೇಶಗಳನ್ನೊಳಗೊಂಡ ಚಿತ್ರಗಳೇ ಆಗಿರುವುದು ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುತ್ತವೆ. ಎಂಬುದು ಕಣ್ಣಿಗೆ ರಾಚುತ್ತಿರುವ ಸತ್ಯವಾಗಿರುವುದರಿಂದ ಈ ನಿಟ್ಟಿನ ಅಧ್ಯಯನವೊಂದರ ಅಗತ್ಯವಿದೆ ಎನಿಸಿದ್ದರಿಂದ ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಈ ಮೂಲಕ ಸಾಹಿತ್ಯ ಕೃತಿಗಳನ್ನು ಹೆಚ್ಚು ಹೆಚ್ಚು ಸಿನಿಮಾ ಕೃತಿಗಳಾನ್ನಾಗಿಸಿ ಆ ಮೂಲಕ ಪ್ರೇಕ್ಷಕರಲ್ಲಿ ಸಾಹಿತ್ಯಾಸಕ್ತಿಯನು ಹೆಚ್ಚಿಸುವ ಮತ್ತು ಮೌಲ್ಯಾಧಾರಿತ ಸಂದೇಶಗಳನ್ನೊಳಗೊಂಡ ಚಿತ್ರಗಳ ಅಗತ್ಯವಿದೆ ಎಂಬುದನ್ನು ತಿಳಿಸುವ ಒಂದು ಸಣ್ಣ ಪ್ರಯತ್ನವಷ್ಟೆ ಈ ಅಧ್ಯಯನದ ಮೂಲ ಉದ್ದೇಶ.

ಎರಡನೇ ಅಧ್ಯಾಯದಲ್ಲಿ ಕಲಾತ್ಮಕ ಚಿತ್ರವೊಂದಕ್ಕೆ ಮೂಲ ಪ್ರೇರಣೆಯನ್ನು ಒದಗಿಸಿದಂತಹ ಬೆಸಗರಹಳ್ಳಿ ರಾಮಣ್ಣನವರ "ಗಾಂಧಿ" ಕತೆಯನ್ನು ಸಾಹಿತ್ಯಿಕ ದೃಷ್ಟಿಯಲ್ಲಿಟ್ಟು ವಿವರಣೆ ಕೊಡುವ ಪ್ರಯತ್ನವನ್ನು ಮಾಡಿದ್ದೇನೆ. ಗಾಂಧಿಕತೆಯಲ್ಲಿನ ವಸ್ತು ಮತ್ತು ಪಾತ್ರಗಳ ಪರಿಚಯದೊಂದಿಗೆ ಕತೆಯು ಒಳಗೊಂಡಿರುವ ಮೂಲ ಆಶಯವನ್ನು ಲೇಖಕರ ಅಭಿಪ್ರಾಯದ ಹಿನ್ನೆಲೆಯಲಿ ವಿವರಿಸಿದ್ದೇನೆ. ಜೊತೆಗೆ ಕತೆಯು ರಚನೆಯಾದ ಕಾಲ ಘಟ್ಟ ಅದರಲ್ಲಿ ವಸ್ತುವಿಗೆ ಮೂಲ ಪ್ರೇರಣೆ ವೈದ್ಯ-ವೃತ್ತಿಯನ್ನು ನಿರ್ವಹಿಸುತ್ತಲೇ ಸಾಹಿತ್ಯ ಲೋಕದ ನಂಟನ್ನು ಉಳಿಸಿಕೊಂಡ ಡಾಕ್ಟರ್ ಬೆಸಗರಹಳ್ಳಿ ರಾಮಣ್ಣನವರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ ಒಟ್ಟಾರೆಯಾಗಿ ಹೇಳುವುದಾದರೆ ಈ ಅಧ್ಯಾಯದಲ್ಲಿ ಕತೆ ಮತ್ತು ಕತೆಗಾರನ ಪರಿಚಯಾತ್ಮಕ ವಿವರಣೆಯನ್ನು ನಮೂದಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಬೆಸಗರಹಳ್ಳಿ ರಾಮಣ್ಣನವರ ಗಾಂಧಿ ಕತೆಯನ್ನು ಸಿನಿಮಾ ಕತೆಯಾಗಿ ರೂಪಿಸಿ ಸಂಭಾಷಣೆಯನ್ನು ಬರೆದಿರುವ ರಾಜಪ್ಪದಳವಾಯಿಯವರ ಹಸ್ತಪ್ರತಿಯನ್ನು ಆಧರಿಸಿ ಅದರ ಜೊತೆಯಲ್ಲಿ ಸಿನಿಮಾವನ್ನು ನೋಡಿ ಹಸ್ತಪ್ರತಿಗೆ ತಕ್ಕಂತೆ ಸಿನಿಮಾ ಮೂಡಿ ಬಂದಿರುವ ಬಗೆಯನ್ನು ವಿವರಿಸಲಾಗಿದೆ.

ದೃಶ್ಯರೂಪದಲ್ಲಿ ಮೂಡಿಬಂದಿರುವ 'ನಾನು ಗಾಂಧಿ' ಚಿತ್ರ ವಿಮರ್ಶೆಯನ್ನು ಮಾತ್ರ ಈ ಅಧ್ಯಯನವು ಒಳಗೊಂಡಿದೆ. ಜೊತೆಗೆ ಅಲ್ಲಲ್ಲಿ ಹಸ್ತಪ್ರತಿಯಲ್ಲಿನ ಮಾಹಿತಿಯು ದೃಶ್ಯವಾಗುವಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಕಾರಣಗಳ ಸಮೇತ ವಿವರಿಸುವ ಪ್ರಯತ್ನಮಾಡಲಾಗಿದೆ. ಚಿತ್ರವಿಮರ್ಶೆಯಲ್ಲಿ ಮುಖ್ಯವಾಗಿ ಸಂಭಾಷಣೆ ಮತ್ತು ಛಾಯಾಗ್ರಹಣ ಇದರ ಜೊತೆಯಲ್ಲಿ ಸಂಕಲನಕಾರನ ಸಂಯೋಜನಾ ಚಾತುರ್ಯವನ್ನು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಶಾಲಾ ಮಕ್ಕಳ ಚುರುಕಿನ ಅಭಿನಯ ಕಲಾವಿದರಾಗಿ ಪ್ರೌಢಿಮೆಯನ್ನು ಸಾಧಿಸಿರುವ ರಮೇಶ್ ಭಟ್ ಅವರ ಅಭಿನಯದ ಸ್ವಾರಸ್ಯದ ಪರಿಚಯವಿದೆ. ಒಳ ನಾಯಕನಂತೆ ಕಂಡರೂ ಕತೆಯ ವೇಗಕ್ಕೆ ಪುಷ್ಟಿದಾಯಕ ಅಭಿನಯವನ್ನು ನೀಡಿರುವ ಮಂಡ್ಯ ರಮೇಶ್ ಅವರ ಪಾತ್ರ ಪರಿಚಯವನ್ನು ಈ ಅಧ್ಯಾಯವು ಒಳಗೊಂಡಿದೆ.

ರಂಗಪ್ಪಜ್ಜನ ಪಾತ್ರದಲ್ಲಿ ಮನೋಜ್ಞ ಅಭಿನಯ ನೀಡಿರುವ ಸದಾಶಿವ ಬ್ರಹ್ಮಾವರ ಹಾಗೂ ಪ್ರಮೀಳಾ ಜೋಷಾಯ ಅವರುಗಳ ಅಭಿನಯದ ಬಗೆಗಿನ ವಿವರಣೆಗಳಿವೆ.

ಅಧ್ಯಾಯ ನಾಲ್ಕರಲ್ಲಿ ಚಲನಚಿತ್ರವೊಂದು ಸಿದ್ಧಗೊಳ್ಳುವಲ್ಲಿ ಅಳವಡಿಸಿಕೊಳ್ಳಬೇಕಾದ ತಾಂತ್ರಿಕ ಬದಲಾವಣೆಗಳ ಕುರಿತಾದ ಚರ್ಚೆಯಿದೆ. ಜೊತೆಗೆ ಸಣ್ಣಕತೆ ಸಿನಿಮಾ ಆಗಿ ರೂಪಾಂತರ ಹೊಂದುವಾಗ ತಾಂತ್ರಿಕ ಅಂಶಗಳಿಗೆ ತಕ್ಕಂತೆ ನೋಡಿಕೊಳ್ಳುವ ಬದಲಾವಣೆಗಳನ್ನು ಇಲ್ಲಿ ವಿವರವಾಗಿ ಹೇಳಲಾಗಿದೆ. ಈ ಅಂಶದ ಹಿನ್ನೆಲೆಯಲ್ಲಿ ಓದುವ ಸಾಹಿತ್ಯ ನೋಡುವ ಸಾಹಿತ್ಯವಾದಾಗ ದೃಶ್ಯಕ್ಕೆ ಅಳವಡಿಸಿಕೊಂಡಾಗ ಆಗುವ ಭಿನ್ನತೆಗಳಿಗೆ ಕಾರಣ ಪರಿಣಾಮಗಳ ಜೊತೆಯಲ್ಲಿ ಕತೆಯಲ್ಲಿನ ಯಾವ ಅಂಶಗಳು ಸಿನಿಮಾ ಆದಾಗ ಬದಲಾಗಿವೆ ಎಂಬುದನ್ನು ಸಿನಿಮಾ ಮತ್ತು ಕತೆಯನ್ನು ತೌಲನಿಕವಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ.

ಸಂಭಾಷಣೆಯನ್ನು ಬರೆದಿರುವ ಡಾ.ರಾಜಪ್ಪ ದಳವಾಯಿಯವರ ಅಭಿಪ್ರಾಯದ ಹಿನ್ನೆಲೆಯಲ್ಲಿ ತಾಂತ್ರಿಕ ಅಂಶಗಳು ಏಕೆ ದೃಶ್ಯ ರೂಪಕಕ್ಕೆ ಅಗತ್ಯ ಎಂಬುದನ್ನು ಕ್ಯಾಮರಾ ಶಾಟ್‌ಗಳ ಪರಿಚಯ ಮತ್ತು ದೃಶ್ಯಗಳು ಬದಲಾದಂತೆ ಭಾವಕ್ಕೆ ತಕ್ಕಂತೆ ಬದಲಾಗುವ ಹಿನ್ನೆಲೆ ಸಂಗೀತ ಅವುಗಳ ಎಫೆಕ್ಟ್ ದೃಶ್ಯವನ್ನು ಭಾವಪೂರ್ಣವಾಗಿ ಕಟ್ಟಿಕೊಡುವಲ್ಲಿ ಹೇಗೆ ಸಹಾಯಕವಾಗುತ್ತದೆ ಎಂಬುದನ್ನು ಉದಾಹರಣೆಗಳ ಸಹಿತ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ

ಒಟ್ಟಾರೆಯಾಗಿ ಕತೆಯೊಂದು ಸಿನಿಮಾ ಆಗಿ ರೂಪ ಪಡೆಯುವಲ್ಲಿರುವ ತಾಂತ್ರಿಕ ಅಂಶಗಳ ವಿವರಣೆಯಿದೆ.

ಅಧ್ಯಾಯ ಆರರಲ್ಲಿ ಅನುಬಂಧವನ್ನು ಕೊಡಲಾಗಿದೆ. ಅನುಬಂಧ ಒಂದರಲ್ಲಿ ಬೆಸಗರಹಳ್ಳಿ ರಾಮಣ್ಣನವರ "ಗಾಂಧಿ" ಕತೆಯನ್ನು ನೀಡಲಾಗಿದೆ. ಅನುಬಂಧ ಎರಡರಲ್ಲಿ ಪರಾಮರ್ಶ ಗ್ರಂಥಗಳಪಟ್ಟಿಯನ್ನು ಕೊಡಲಾಗಿದೆ.

ಇವಿಷ್ಟು ಈ ಅಧ್ಯಯನದ ಸಂಕ್ಷಿಪ್ತ ಪರಿಚಯ.

ಈ ಅಧ್ಯಯನದ ಉದ್ದೇಶ ಸಾಹಿತ್ಯ ಕೃತಿಗಳು ಸಿನಿಮಾ ಆದ ಭವ್ಯ ಇತಿಹಾಸ ನಮ್ಮೆದುರಿಗಿರುವಾಗ ರೀಮೇಕುಗಳ ಹಿಂದೆ ಓಡಿ ವಾಣಿಜ್ಯ ಉದ್ದೇಶದ ಚಿತ್ರ ನಿರ್ಮಾಣದಲ್ಲಿ ನಿರತರಾಗಿರುವ ಚಿತ್ರರಂಗ ಕಲಾತ್ಮಕ ದೇಸಿ ಸಾಹಿತ್ಯದ ಸೊಗಡನ್ನು ಹೊಂದಿರುವ ಚಿತ್ರಗಳನ್ನು ಚಿತ್ರರಸಿಕರ ಮುಂದೆ ತರಬೇಕು ಎಂಬ ಆಶಯವನ್ನು ಸಂಶೋಧನಾತ್ಮಕವಾಗಿ ಪುಷ್ಟೀಕರಿಸಿ ಹೇಳುವ ಪ್ರಯತ್ನ ಮಾತ್ರವೇ ಆಗಿದೆ.

ಒಟ್ಟಾರೆಯಾಗಿ ಈ ಅಧ್ಯಯನವು ಪ್ರಸ್ತಕ ಕಲಾತ್ಮಕ ಚಿತ್ರಗಳ ಅಗತ್ಯತೆಯ ಮೇಲೆ ಬೆಳಕು ಚಲ್ಲುವ ಪ್ರಯತ್ನ ಮಾಡಿದೆ. 'ನಾನು ಗಾಂಧಿ' ಚಿತ್ರ ಅಂತರಾಷ್ಟ್ರೀಯ ಮನ್ನಣೆ ಪಡೆಯುವ ಮೂಲಕ ಮತ್ತೊಮ್ಮೆ ಸಾಹಿತ್ಯ ಕೃತಿಗಳನ್ನಾಧರಿಸಿದ ವೈಚಾರಿಕ ನೆಲೆಗಟ್ಟಿನ ಚಿತ್ರಗಳ ಯಶಸ್ಸನ್ನು ಸಾಬೀತು ಮಾಡಿದೆ. ಈ ಚಿತ್ರವನ್ನು ಕರ್ನಾಟಕ ಸರ್ಕಾರವು ಕೂಡ ಮಾನ್ಯಮಾಡಿ ಸನ್ಮಾನಿಸಿದೆ.

ಚಿತ್ರವನ್ನು ವೀಕ್ಷಿಸಿ ಗೊ.ರು.ಚನ್ನಬಸಪ್ಪ, ಸಾಹಿತಿಗಳು, ನಾಟಕಕಾರರು ಮತ್ತು ಜಾನಪದ ಅಕಾಡೆಮಿ ಅಧ್ಯಕ್ಷರು ಇವರು "ಇದು ಅಪರೂಪದ ಮಕ್ಕಳ ಚಿತ್ರ, ಜೊತೆಗೆ ಶೈಕ್ಷಣಿಕ ಚಿತ್ರ ಕೂಡ. ರಾಮಣ್ಣನವರ ಸಣ್ಣಕತೆಯನ್ನು ಇಷ್ಟೊಂದು ವೈವಿಧ್ಯಮಯವಾಗಿ ಚಿತ್ರಿಸಿ ಮನಮುಟ್ಟುವಂತೆ ಬೆಳ್ಳಿತೆರೆಯಲ್ಲಿ ಸೃಜಿಸಿದ್ದಾರೆ. ಸರ್ಕಾರ ಇದನ್ನು 'ಶೈಕ್ಷಣಿಕ ಚಿತ್ರ' ವೆಂದು ಪರಿಗಣಿಸಿ ಎಲ್ಲಾ ರಿಯಾಯಿತಿಯನ್ನು ನೀಡಬೇಕು. ಅಷ್ಟೇ ಅಲ್ಲ ಭಾರತದ ಎಲ್ಲ ಭಾಷೆಗಳಿಗೂ ಈ ಚಿತ್ರ ತಲುಪಬೇಕು. ರಾಜಪ್ಪ ದಳವಾಯಿಯವರು ಒಳ್ಳೆಯ ಸಂಭಾಷಣೆ ಬರೆದಿದ್ದಾರೆ. ಅತ್ಯುತ್ತಮ ಚಿತ್ರಕತೆ ಮನಮುಟ್ಟುವ ಅಭಿನಯದಿಂದ ಚಿತ್ರ ಆಪ್ತವಾಗುತ್ತದೆ" ಎಂದಿದ್ದಾರೆ[14]

ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ' ಕತೆಗೂ ನಂಜುಂಡೇಗೌಡರ 'ನಾನು ಗಾಂಧಿ' ಚಿತ್ರಕ್ಕೂ ಸಂದ ಗೌರವ ಇವತ್ತು ಕಲಾತ್ಮಕ ಚಿತ್ರವೊಂದು ಕನ್ನಡ ಸಿನಿಮಾ ಲೋಕಕ್ಕೆ ಕೊಡುಗೆಯಾಗಿ ಸಿಕ್ಕಿದೆ. ಹಲವು ಕನ್ನಡ ವಿದ್ವಾಂಸರು ಸಾಹಿತ್ಯಲೋಕದ ದಿಗ್ಗಜರು ಈ ಸಿನಿಮಾ ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅತ್ಯುತ್ತಮ ಶೈಕ್ಷಣಿಕ ಚಿತ್ರವೆಂದು ಹಾಡಿ

---

[14] ಜುಲೈ 11ರಂದು ಪ್ರಜಾವಾಣಿ ಪ್ರಕಟವಾದ ವರದಿ

ಹೊಗಳಿದ್ದಾರೆ. ಅಧ್ಯಾಯದ ಕಡೆಯಲ್ಲಿ ಚಿತ್ರವೀಕ್ಷಿಸಿದ ವಿದ್ವಾಂಸರ ಅಭಿಪ್ರಾಯಗಳನ್ನು ನಮೂದಿಸಲಾಗಿದೆ. ನಿರ್ದೇಶಕರ ಮತ್ತು ಸಂಭಾಷಣೆಕಾರರ ಸಂದರ್ಶನದ ವಿವರಗಳನ್ನು ನೀಡಲಾಗಿದೆ. ಅಲ್ಲಲ್ಲಿ ಚಲನಚಿತ್ರದ ಫೋಟೋಗಳನ್ನು ಹಾಕುವುದರ ಮೂಲಕ ಈ ಪ್ರಬಂಧಕ್ಕೆ ಮೆರುಗನ್ನು ಕೊಡಲಾಗಿದೆ.

ಈ ಅಧ್ಯಯನಕ್ಕೆ ಚಲನಚಿತ್ರದ ಬಗೆಗಿನ ಪರಿಚಯವನ್ನು ಮಾಡಿಕೊಡುವ ಉದ್ದೇಶದಿಂದ ಅಲ್ಲಲ್ಲಿ ಚಿತ್ರದ ಫೋಟೋಗಳನ್ನು ಬಳಸಿಕೊಳ್ಳಲಾಗಿದೆ. ಈ ಫೋಟೋಗಳ ಮೂಲಕ ಛಾಯಾಗ್ರಾಹಕನ ಜಾಣ್ಮೆಯನ್ನು ಗುರುತಿಸಬಹುದು. ಜೊತೆಗೆ ವಿವರಣೆಗಿಂತಲೂ ಫೋಟೋಗಳು ಹೆಚ್ಚಿನ ಸಾಕ್ಷ್ಯವನ್ನು ದೃಶ್ಯ ರೂಪದಲ್ಲಿ ಕೊಡಬಲ್ಲ ಸಾಮರ್ಥ್ಯ ಪಡೆದಿರುವುದರಿಂದ ಇಲ್ಲಿ ಅವುಗಳನ್ನು ಮುದ್ರಿಸಿ ಕೊಡಲಾಗಿದೆ. ಹಲವು ಕೆಲಸದ ಒತ್ತಡದ ನಡುವೆಯೂ ನನ್ನ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸಿಕೊಟ್ಟು ಸಂದರ್ಶನಕ್ಕೆ ಅವಕಾಶ ಮಾಡಿಕೊಟ್ಟ ಡಾ.ರಾಜಪ್ಪ ದಳವಾಯಿಯವರಿಗೆ ಮತ್ತು ನಂಜುಂಡೇಗೌಡರಿಗೂ ನಾನು ಆದರ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪ್ರಬಂಧ ಸಿದ್ದಗೊಳ್ಳಲು ಸೂಕ್ತ ಸಮಯಕ್ಕೆ ಸೂಕ್ತ ರೀತಿಯ ಮಾರ್ಗದರ್ಶನವನ್ನು ನೀಡಿದ ಡಾ.ನಾ.ಗೀತಾಚಾರ್ಯ ಅವರಿಗೂ ನನ್ನ ಕೃತಜ್ಞತೆಗಳು. ಈ ಸಂಪ್ರಬಂಧ ಸಿದ್ಧಗೊಳ್ಳಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನನಗೆ ಸಹಕಾರ ನೀಡಿದ ಎಲ್ಲರಿಗೂ ನನ್ನ ಆದರ ಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಅಧ್ಯಯನದ ಮೂಲಕ ಸಾಹಿತ್ಯಲೋಕ ಮತ್ತು ಸಿನಿಮಾಲೋಕಗಳೆರೆಡರ ಅಗತ್ಯ ಮತ್ತು ಓರೆಕೋರೆಗಳನ್ನು ಹತ್ತಿರದಿಂದ ನೋಡಿ ವಿಮರ್ಶೆ ಮಾಡುವ ಭಾಗ್ಯ ನನ್ನದಾಗಿದೆ ಎಂಬ ಹೆಮ್ಮೆಯೂ ಕೂಡ ನನಗಿದೆ. ನನ್ನ ಪ್ರಯತ್ನ ಪ್ರಸ್ತುತ ಸಮಸ್ಯೆಯೊಂದರ ಮೇಲೆ ಬೆಳಕು ಚಲ್ಲಿ ಅದರಲ್ಲಿ ಆಗಬೇಕಿರುವ ಬದಲಾವಣೆಗಳ ಕುರಿತು ಚರ್ಚಿಸುವುದೇ ಆಗಿತ್ತು. ಅದು ಈ ಅಧ್ಯಯನದ ಮೂಲಕ ಸಾಧ್ಯವಾಗಿದೆ.

ಅನುಬಂಧ

ಅನುಬಂಧ

ಅನುಬಂಧ-1

ಬೆಸಗರಹಳ್ಳಿ ರಾಮಣ್ಣನವರು ಬರೆದಿರುವ 'ಗಾಂಧಿ' ಕತೆ

ಗಾಂಧಿ

ಒಂದು ದಿನ:

ಇಂಡಿಯಾ ದೇಶದ ಕರ್ನಾಟಕ ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರ ಒಂದರಲ್ಲಿ – ಆ ದಿನ ಸೋಮವಾರವಾದುದರಿಂದ ಜನವೋ ಜನ. ದೊಡ್ಡ ಆಸ್ಪತ್ರೆಯ ರೀತಿಯಲ್ಲಿ ರೋಗಿಗಳು ತಮ್ಮ ಹೆಸರು ದಾಖಲು ಮಾಡಿಸಿ, ಗುಮಾಸ್ತನ ಅಮೃತಹಸ್ತದಿಂದ ತಮ್ಮ ಹೆಸರು, ಕುಲಗೋತ್ರ, ವಯಸ್ಸು ಮುಂತಾದುವನ್ನು ಒಳಗೊಂಡು ಚೀಟಿಯ ಮೂಲಕ ವೈದ್ಯಾಧಿಕಾರಿಗಳನ್ನು ಕಾಣುವ ವ್ಯವಸ್ಥೆಗೆ ಇಲ್ಲಿ ಅವಕಾಶವಿಲ್ಲದ್ದರಿಂದ; ಮೊದಲು ಬಂದ ರೋಗಿ ಯಾವುದೋ ಮೂಲೆಯಲ್ಲೋ ಅಥವಾ ವೈದ್ಯಾಧಿಕಾರಿಗಳ ಕೊಠಡಿಯ ಬಾಗಿಲಲ್ಲೋ ನಿಂತು ಅಸಹಾಯಕವಾಗಿ ಪಿಳಪಿಳನೆ ಕಣ್ಣಾಡಿಸುತ್ತ, ಅವರ ಕೃಪೆಗಾಗಿ ಕಾಯುತ್ತ, ಒಮ್ಮೊಮ್ಮೆ ಸುಸ್ತಾಗಿ ವರಾಂಡದಲ್ಲಿ ತಂದ ಸೀಸೆಯನ್ನು ತಲೆದಿಂಬಾಗಿ ಮಾಡಿಕೊಂಡು ತಾನು ಅಥವಾ ತಾವು ಬಂದ ಕೆಲಸವನ್ನೇ ಮರೆತು ನರಳುತ್ತಾ ಮಲಗಿಬಿಡುವುದು, ಹೀಗೆ ಏನೇನೋ ನಂಬಲಾರದಂಥ ವಿಷಯಗಳು. ಕೊನೆಯಲ್ಲಿ ಬಂದವನಿಗೆ ವೈದ್ಯಾಧಿಕಾರಿಗಳಿಂದ ಹಾರ್ದಿಕ ಸ್ವಾಗತ.

ಇನ್ನೂ ವರ್ಣಿಸಲು ಅವಕಾಶವಿಲ್ಲದಂಥ ವರ್ಗದ ಜನ ಬಂದಾಗ ಕೃತಕ ವಿಧೇಯತೆ ತುಂಬಿದ ಸ್ವಾಗತ. ಇವೆಲ್ಲಕ್ಕೂ ಪೂರ್ಣ ಅವಕಾಶ ಇದ್ದುದರಿಂದ ಬಳ್ಳೆಕೆರೆ ಎಂಬ ಹಳ್ಳಿಯಿಂದ ಹೊತ್ತು ಮೂಡುವುದಕ್ಕೆ ಮುಂಚೆಯೇ ಬಂದು ಆಸ್ಪತ್ರೆಯಲ್ಲಿ ಕಾಯುತ್ತಿದ್ದ ಒಬ್ಬ ಹೆಂಗಸು ಮತ್ತು ಸುಮಾರು ಹದಿನೈದು ವರ್ಷದ ಹುಡುಗ ಬಹಳ ಹೊತ್ತಿನ ವರೆಗೂ ಯಾರ ಗಮನಕ್ಕೂ ಬರದೆಯೇ ಬಿದ್ದಿದ್ದರು. ಆ ಹೆಂಗಸು ಆ ಹುಡುಗನ ತಾಯಿ. ಸುಮಾರು ನಲವತ್ತರ ಪ್ರಾಯ. ಹುಡುಗ ವರಾಂಡದಲ್ಲಿ ಕಂಬಕ್ಕೆ ಒರಗಿ, ಆಸ್ಪತ್ರೆಗೆ ಬಂದು ಹೋಗುವವರನ್ನು ಯಾವ ಕುತೂಹಲವೂ ಇಲ್ಲದೆ ನೋಡುತ್ತ ಕುಳಿತಿದ್ದ.

ಅವನಿಗೆ ಹದಿನೈದು ವರ್ಷಕ್ಕೇ ಪ್ರಪಂಚದ ಮೇಲೆ ಒಂದು ಬಗೆಯ ಜುಗುಪ್ಸೆ ಮೂಡಿ ನಿಂತಿತ್ತು. ಕುಳಿತು ಕುಳಿತು ಸಾಕಾಗಿ ಅವನ ಪಕ್ಕದಲ್ಲಿಯೇ ನಿಂತಿದ್ದ ತನ್ನ ಅವ್ವನ ಸೀರೆಯನ್ನು ಬಲವಾಗಿ ಎಳೆದು ಹೇಳಿದ: ***"ಅವ್ವ ಬಿಸ್ಲು ಜಾಸ್ತಿ ಆಯ್ತಾ ಅದೆ, ನಡಿ ಊರಿಗೆ ಹೋಗ್ವ" "ಒಸಿ ಸುಮ್ನಿರು, ಬಂದೋರು ಬಂದೋ ತೋರಿಸ್ಕೊಂಡೇ ಹೋಗುವ"***

"ಹೊತ್ತೂಡಕೆ ಮುಂಚೆ ಬಂದೋ ನಾವು .... "ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?" ತನ್ನ ತಾಯಿಯ ಧ್ವನಿಯ ಹಿನ್ನೆಲೆಯ ಅಸಹಾಯಕತೆ, ಸುತ್ತಮುತ್ತಲಿನ ವಾತಾವರಣ ನಿಷ್ಕರುಣೆಯಿಂದ ತುಂಬಿರುವುದನ್ನು ಪರಿಚಯ ಮಾಡಿಕೊಡುವ ರೀತಿಯಲ್ಲಿ ಮೂಡಿಬಂದ ರೀತಿಯನ್ನು ಗಮನಿಸಿಯೋ ಅಥವಾ ತನಗಾಗಿ ತನ್ನನ್ನು ಹೆತ್ತವಳು ಮೌನವಾಗಿ ನೋವನ್ನು, ಅವಮಾನವನ್ನು ಸಹಿಸಿಕೊಂಡು ನಿಂತಿರುವುದನ್ನು ಕಂಡೋ ಹುಡುಗ ಹೇಳಿದ **"ನಾನು ಇದ್ದರೆಷ್ಟು, ಸತ್ತರೆಷ್ಟು ನಡಿಯವ್ವಾ ಹೋಗುವ, ಊರಿಗೆ." "ಮೂರೊತ್ತೂ 'ಸಾಯ್ತೀನಿ, ಸಾಯ್ತಿನಿ,' ಇದೇ ನಿನ್ನ ನಾಲಿಗೆ ಮೇಲೆ" "ಇದ್ದು ನಾನು ಯಾವ ರಾಜ್ಯ ಆಳಬೇಕು"**- ವಯಸ್ಸಿಗೆ ಮೀರಿದ ಅನುಭವದ ಮಾತುಗಳು ತನ್ನ ಮಗನ ಬಾಯಿಯಿಂದ ಬಂದದ್ದು ತಾಯಿಗೆ ಆಶ್ಚರ್ಯವಾಗಲಿಲ್ಲ. ಈ ವಯಸ್ಸಿಗೆ ಅನುಭವಿಸಿದ್ದ ನೋವಿನ ಮೂಸೆಯಿಂದ ಬಂದ ಮಾತುಗಳಾಗಿದ್ದವು.

ಹೆತ್ತ ಕರುಳು ಚುರುಕ್ಕೆಂದು ಸೆರಗಿನಿಂದ ಕಣ್ಣೊರಸಿಕೊಂಡಳು. ತನ್ನ ದೇಹದಲ್ಲಿರುವ ಕಾಯಿಲೆಯ ನೋವನ್ನೂ, ತಾಯಿಯ ಅಸಹಾಯಕತೆಯನ್ನೂ, ತಮಗಾಗುತ್ತಿರುವ ಅವಮಾನವನ್ನೂ ಇನ್ನು ಸಹಿಸಲಾಗದು ಎನ್ನುವ ರೀತಿಯಲ್ಲಿ ಹುಡುಗ ದಢಕ್ಕನೆ ಮೇಲೆದ್ದು ಮುಂದುವರಿದ-***"ಎಲ್ಲಿಗೋ ಮಗ?" "ಡಾಕ್ಟ್ರ ನೋಡೋಕೆ.........."*** "ಲೋ ಮೊದಲೇ ತೂರಾಡ್ತಿ. ಬಿದ್ದು ಗಿದ್ದು ಬುಟ್ಟಿಕನಪ್ಪ" ಎಂದು ಹಿಡಿದುಕೊಳ್ಳಲು ಬಂದ ತಾಯಿಯ ಕೈಗಳಿಂದ ಕೊಸರಿಕೊಂಡವನೆ ವೈದ್ಯಾಧಿಕಾರಿಗಳ ಕೊಠಡಿಯನ್ನು ಪ್ರವೇಶಿಸಿ,

ನೆರೆದಿದ್ದ ಜನರ ಗುಂಪನ್ನು ಸೀಳಿ ವೈದ್ಯಾಧಿಕಾರಿಯ ಮೇಜಿನ ಮುಂದೆ ನಿಂತು. ಜೋರಾಗಿ ಹೇಳಿದ **"ಸಾ!ನಾನು ನಮ್ಮವ್ವ ಒತಾರೆಯಿಂದ ಕಾಯ್ಕೊಂಡೀವಿ."** ವೈದ್ಯಾಧಿಕಾರಿ ಕತ್ತೆತ್ತಿ ನೋಡಿದ, ಸುಮಾರು ಎತ್ತರದ, ನೆರಪೇತಲ, ಅಗಲ ಕಿವಿಗಳ ಹೊಟ್ಟೆ ಡುಮ್ಮಣ್ಣನೊಬ್ಬ ತನ್ನ ಮುಂದೆ ಬಂದು ನಿಂತಿದ್ದಾನೆ, ಅವ್ಯಕ್ತ ನೋವಿನ ರೋಷ ಅವನ ಮುಖದ ಮೇಲೆ ನಿಂತಿದೆ. ಹುಡುಗನೇ ಮತ್ತೆ ಹೇಳಿದ: "ನನ್ನೊಸಿ ನೋಡಿ ಸಾ!" ವೈದ್ಯಾಧಿಕಾರಿಗೆ ಈ ಅಪರೂಪದ ವ್ಯಕ್ತಿಯನ್ನು ಕಂಡು ಸ್ವಲ್ಪ ಕುಚೇಷ್ಟೆ ಮಾಡಬೇಕೆನಿಸಿ, ಅವನನ್ನೇ ದೃಷ್ಟಿಸಿ ಹೇಳಿದ **"ವಸಿ ಏನೋ ಚೆನ್ನಾಗೇ ನೋಡ್ದೆ. ನಿನ್ನ ಹೊಟ್ಟೆ ದಪ್ಪ ಕೈ ಕಾಲು ಸಣ್ಣ, ಕಿವಿಗಳು ಮಾತ್ರ ಗಾಂಧಿ ಕಿವಿಗಳು ಇದ್ದಾಗಿವೆಯಪ್ಪಾ."** ಹುಡುಗ ತನ್ನ ಬಲಗೈಯನ್ನು ಮುಂದೆ ಚಾಚಿ: **"ನನಗೆ ಕಾಯಿಲೆ ಏನು ನೋಡಿ ಸಾ"** ಎಂದು ಬೇಡಿದ. **"ನಿಮ್ ದಮ್ಮಯ್ಯ ಕೋಪ ಮಾಡ್ಕೋಳ್ದೇ ನೋಡಿ ಸ್ವಾಮಿ, ಇವನೊಬ್ಬನೇ ನನಗೆ ಗಂಡು ಮಗ ಅಂತ ಇರೋನು!"** ಹೆಂಗಸೊಬ್ಬಳು ಗೋಗರೆದಳು. ವೈದ್ಯಾಧಿಕಾರಿಗೆ ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ತನ್ನಂತೆಯೇ ಮನುಷ್ಯ ವರ್ಗಕ್ಕೆ ಸೇರಿದವರು ಎಂಬುದು ಜ್ಞಾಪಕಕ್ಕೆ ಬಂದೋ ಅಥವಾ ವೈದ್ಯಾರಾಗಬೇಕಾದವರಿಗೆ

ಅನುಕಂಪದಿಂದ ಕೂಡಿದ ಹೃದಯ ಇರಬೇಕು ಎಂಬ ಮಾತು ನೆನಪಾಗಿಯೋ ಏನು ಕತೆಯೋ, ಒಟ್ಟಿನಲ್ಲಿ ಈ ತಾಯಿ–ಮಗನ ಮೇಲೆ ಕರುಣೆ ಬಂದು ಕೇಳಿದ.

"ಇವನು ನಿನ್ನ ಮಗನೇನಮ್ಮ?" "ಹೂ! ಸ್ವಾಮಿ, ದೇವರಾಣೆಗೂ!" "ಇವನ ಹೆಸರೇನಮ್ಮ?"

"ಗಾಂಧಿ ಸ್ವಾಮಿ!" "ಏನಮ್ಮ ಹುಡುಗಾಟಕ್ಕೆ ನಾನು ಇವನ ಕಿವಿಗಳು ಗಾಂಧೀಜಿಗೆ ಇದ್ದಂತಿವೆ ಅಂದ್ರೆ ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡ್ ಬಿಟ್ರ?" "ಇಲ್ಲ ಸ್ವಾಮಿ, ಸುಳ್ಳು ಹೇಳಿದ್ರೆ ನನ್ನ ನಾಲ್ಗೆಗೆ ಉಳಾ ಬೀಳ್ಲಿ ಸೇದೋಗ್ಲಿ ನನ್ನಾಣೆಗೂ ಇವನ ಹೆಸರು ಗಾಂಧಿ ಅಂತ".

"ನನ್ನ ಹೆಸರು ದೇವರ ಸತ್ಯವಾಗ್ಲೂ ಸಾ ಮಹಾತ್ಮ ಗಾಂಧಿ ಅಂತ" ಹುಡುಗ ಧೈರ್ಯವಾಗಿ, ದೃಢ ನಿಲುವಿನಿಂದ ನುಡಿದ. ವೈದ್ಯಾಧಿಕಾರಿ ಬೆಪ್ಪಾಗಿಹೋದ. ಅವನ ವೈದ್ಯಕೀಯ ಈ ವರೆಗಿನ ಅವಧಿಯಲ್ಲಿ ಈ ರೀತಿಯ ಕಾಕತಾಳ ನ್ಯಾಯವನ್ನು ಅವನು ಕಂಡಿರಲಿಲ್ಲ. ಕೇಳಿಯೂ ಇರಲಿಲ್ಲ. ತನ್ನ ಜೀವಿತದಲ್ಲಿ ಒದಗಿಬಂದ ಈ ಘಟನೆ ತೀರ ಅಪರೂಪವೆನ್ನಿಸಿ ಇದನ್ನು ತನ್ನ ಸಹೋದ್ಯೋಗಿಗಳೊಂದಿಗೆ ಪಾಲು ಮಾಡಿಕೊಳ್ಳಲು ಮತ್ತು ಮುಂದೆ ತಾನು ಯಾರಿಗಾದರೂ ವರ್ಣಿಸಿದಾಗ ಇದೊಂದು ಬಿಳಿ ಸುಳ್ಳೆಂದು ಹೇಳಿದರೆ.

ಇಂಥಿಂಥವರು ಇದ್ದರು ಬೇಕಾದರೆ ಕೇಳಿಕೊಳ್ಳಿ ಎಂದು ಸಾಕ್ಷಿಗಳನ್ನು ದಾಖಲು ಪಡಿಸಿಕೊಳ್ಳಲು ಜವಾನನ್ನು ಜೋರಾಗಿ ಕರೆದು ಹೇಳಿದ. **"ನೋಡೋ ನಾಯ್ಡು, ನರಸಿಂಹಮೂರ್ತಿ, ಸರಸಮ್ಮ ಇವರನ್ನು ಬೇಗನೆ ನಾನು ಬರಹೇಳ್ದೆ ಅಂತ ಕೂಗಯ್ಯ."** ಎಲ್ಲರೂ ಬಂದರು. ವೈದ್ಯಾಧಿಕಾರಿ ಹೇಳಿದ್ದನ್ನು ಕೇಳಿ ಕಿಸಕ್ಕನೆ ನಕ್ಕುಬಿಟ್ಟರು. ಅದರಲ್ಲಿಯೂ ಈಗ ತಾನೆ ಕುಟುಂಬ ಯೋಜನೆಯ ವಿಸ್ತರಣಾಧಿಕಾರಿಯಾಗಿ ಕೆಲಸಕ್ಕೆ ಸೇರಿದ ನರಸಿಂಹಮೂರ್ತಿ ತಾನು ಇದನ್ನು ನಂಬುವುದಿಲ್ಲ ಎನ್ನುವಂತೆ ಕಿಸಕ್ಕನೆ ನಕ್ಕ. ವೈದ್ಯಾಧಿಕಾರಿಗೆ ಸ್ವಲ್ಪ ಕೋಪ ಕೆರಳಿ, **"ಬೇಕಾದ್ರೆ ಅವನ್ನೇ ಕೇಳ್ರಿ"** ಎಂದ.**"ಮಹಾತ್ಮ ಗಾಂಧಿಯೋರ್ದು ಸಾ, ಇದ ನಾ ಕಾಣನೆ?"**

"ನಿನ್ನ ಹೆಸರೇನಯ್ಯ?" "ಮಹಾತ್ಮ ಗಾಂಧಿ ಸಾ" "ಸುಳ್ಳು ಹೇಳಬ್ಯಾಡ"

"ಸುಳ್ಳು ಹೇಳಿ ನಿಮ್ ತಾವು ನಾನು ಯಾವ ಸಾಮ್ರಾಜ್ಯ ಈಸ್ಕೋಬೇಕು." ಎಲ್ಲರೂ ನಾಲಿಗೆ ಸೇದಿ ಹೋದವರಂತೆ ನಿಂತರು. ಮಹಾತ್ಮ ಗಾಂಧೀಜಿಯ ಫೋಟೋವನ್ನು ಒಮ್ಮೆ: ನಂತರ ರಕ್ತ ಮಾಂಸ ತುಂಬಿಕೊಂಡು ಉಸಿರಾಡುತ್ತ ನೋವನ್ನು ಅನುಭವಿಸುತ್ತ ನೆಲದ ಮೇಲೆ ತಮ್ಮ ಕಣ್ಣೆದುರಿಗೆ ನಿಂತಿರುವ ಮಹಾತ್ಮ ಗಾಂಧಿಯ ಕಡಗೊಮ್ಮೆ ದೃಷ್ಟಿಯನ್ನು ಬೀರುತ ನಿಂತರು. ವೈದ್ಯಾಧಿಕಾರಿ ಮತ್ತು ಅವನ ಬಳಗ ಜಗತ್ತಿನ ಮೇಲೆ ತೀರ ಸೋಜಿಗದ ವಿಷಯವನ್ನು ಕಂಡವರಂತೆ ನಿಂತುದನ್ನು ಕಂಡು ಮಹಾತ್ಮಗಾಂಧಿಗೆ ಬೇಸರವಾಯಿತು.**"ನನ್ನ ಕಾಯಿಲೆ ನೋಡಿ ಸಾ! ನನ್ನ ಹಣೇಬರ"** ಎಂದು.**"ನಿನಗೆ ಈ ಹೆಸರು ಯಾರು ಕಟ್ಟಿದೋರು"**

"ನಮ್ಮ ಅಯ್ಯ ಕರಿಸಿದ್ದೇಗೌಡ ಅಂತವ್ನೆ" ವೈದ್ಯಾಧಿಕಾರಿ, ಮಿಡ್ ವೈಫ್ ಅಮ್ಮನವರನ್ನು ಕರೆದು ಗಾಂಧಿಯನ್ನು ಪರೀಕ್ಷೆಯ ಕೊಠಡಿಗೆ ಕರೆದುಕೊಂಡು ಹೋಗಿ ಮಲಗಿಸುವಂತೆ ಹೇಳಿದರು. ಅವಳು ಹಾಗೆಯೇ ಮಾಡಿದಳು. ನಾಲಿಗೆ ಕಣ್ಣು ಗಂಟಲು ನೋಡಿದ ಮೇಲೆ ಹೃದಯ ಶ್ವಾಸಕೋಶಗಳ ಪರೀಕ್ಷೆ ಮುಗಿಸಿ, ಹೊಟ್ಟೆಯನ್ನು ಪರೀಕ್ಷೆಮಾಡಿದ ವೈದ್ಯಾಧಿಕಾರಿ ಗಾಂಧಿಯ ತಾಯಿಯ ಕಡೆ ತಿರುಗಿ "ನಿನ್ನ ಹೆಸರೇನಮ್ಮ" ಎಂದರು. "ನಿಂಗಮ್ಮ ಸ್ವಾಮಿ"

"ನೋಡಮ್ಮ ನಿಮ್ಮಡುಗನಿಗೆ ಹೊಟ್ಟೇಲಿ ನೀರು ಸೇರ್ಕೊಂಡಿದೆ. ಜೊತೆಗೆ ಕಾಲುಗಳೂ ಊದಿಕೊಂಡಿವೆ. ಇದು ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆ. ಆಗಲೇ ಕಪ್ಪು ಈಲಿಗೂ (ಲಿವರ್) ಕಾಯಿಲೆ ಹಬ್ಬಿ ಅದು ಮುಟ್ಟಿದರೆ ಸಾಕು ಗಾಂಧಿ ನೋವು ಅಂತ ಬಡ್ಕೋತಾನೆ" ಏನೋ ಸ್ವಾಮಿ ನಿಮ್ಮ ಎಕ್ಡ ಮೂರು ಮೈಲಿ ನಡೀಬೇಕಾದ್ರೆ ಮೂವತ್ತು ತಾವು ಕುಂತ್ಕಂಡ್, ತೆವಳ್ಕೊಂಡಿ ಬಂದ. ಉಳಿಸಿ ಕೊಡಿ, ನಾಳಾಕೆ ನಮ್ಮಪ್ಪನ ಕರ್ಕೊಂಡು ಬತ್ತೀನಿ.......... ತಂದೆ ಇಲ್ಲದ ತಬ್ಬಲಿ." "ನಿನ್ನ ಗಂಡನಿಗೆ ಏನಾಗಿ ಸತ್ತೋದ?" "ಸ್ವಾಮಿ ಸೇಂದಿ ಇಳಿಸೋಕೆ ಸಾಹುಕಾರ್ರು ತಾವು ಇದ್ರು, ಒಂದು ದಿನ ಮರದ ಮೇಲಿಂದ ಬಿದ್ದು ಫಕ್ಕನೆ ಪ್ರಾಣ ಬುಟ್ಟು –ಬುಟ್ರು" "ಅಯ್ಯೋ ಪಾಪ! ನೋಡಮ್ಮ ನಿಮ್ಮುಡುಗನಿಗೆ ಎಕ್ಸರೇ ಆಗಬೇಕು. ಹೃದಯದ ಪರೀಕ್ಷೆ ಮಾಡಬೇಕು. ರಕ್ತ, ಮೂತ್ರ ಪರೀಕ್ಷೆ ಮಾಡಬೇಕು. ಇಲ್ಲಾಗೋ ವಿಷಯವಲ್ಲ ಇದು. ಇವನ್ನ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಸೇರಿಸಬೇಕು. ನಾನು ಎಲ್ಲಾನು ಬರೆದು ಕೊಡ್ತೀನಿ. ಹೊಟ್ಟೇಲಿರೋ ನೀರು ಕಡಿಮೆ ಅಗೋಕೆ ಈಗ ಎರಡು ಗುಳಿಗೆ ನುಂಗಿಸ್ತೀನಿ" ಎಂದು ಹೇಳಿ ನೀರು ತರಿಸಿ, ಗುಳಿಗೆಗಳನ್ನು ನುಂಗಿಸಿಯೇ ಬಿಟ್ಟರು. ಸರಸರನೆ ದೊಡ್ಡಾಸ್ಪತ್ರೆಗೆ ಗಾಂಧಿಯ ಕಾಯಿಲೆಯ ವಿಷಯವಾಗಿ ತಾವು ಪತ್ತೆ ಹಚ್ಚಿರುವ ವಿವರಗಳನ್ನೂ ನಮೂದಿಸಿ ಕೈಗೆ ಕೊಟ್ಟರು. ಮೊಮ್ಮಗನ ಸ್ಥಿತಿ ಚಿಂತಾಜನಕವಾದುದೆಂಬುದನ್ನು ಕರಿಸಿದ್ದೇಗೌಡನಿಗೆ ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಅವನ ಆಸೆಯ ಕುಡಿ ತನ್ನ ಮಗಳು ನಿಂಗಮ್ಮ ಮತ್ತು ಅವಳ ಮಕ್ಕಳು ಪದ್ದಿ ಮತ್ತು ಗಾಂಧಿ. ಪದ್ದಿ ಎಷ್ಟೇ ಆದರು ನೆರಮನೆಗೆ ಹೋಗುವ ಹೆಣ್ಣು. ಗಾಂಧಿಯನ್ನು ಕಂಡರೆ ಕರಿಸಿದ್ದೇಗೌಡನಿಗೆ ಎಲ್ಲೂ ಇಲ್ಲದ ಪ್ರೀತಿ ತನ್ನ ಈ ಮೊಮ್ಮಗನಿಗೆ ಹೆಸರು ಕಟ್ಟಿದ್ದೇ ಒಂದು ಮರೆಯಲಾಗದ ಘಟನೆ.

ಕರಿಸಿದ್ದೇಗೌಡನ ಜೀವನದಲ್ಲಿ ಹದಿನೈದು ವರ್ಷಗಳ ಹಿಂದಿನ ಮಾತು. ಹೊಲ ಉತ್ತು ಸಾಕಾಗಿ ತಾನೂ ಮತ್ತು ಅಳಿಯ ಬುಕ್ಕೇಗೌಡ ಹೊತ್ತು ಮುಳುಗಿದ ಮೇಲೆ ಬಂದಾಗ ಮೊರತುಂಬ ರಗರಗನೆ ಉರಿಯುತ್ತ ಮೊಮ್ಮಗು ಮಲಗಿತ್ತು. ಕರಿಸಿದ್ದೇಗೌಡ ಹಿಗ್ಗಿ ಹೀರೇಕಾಯಿ ಆದ. ತನ್ನ ಮೊಮ್ಮಗನ ಅಗಲವಾದ ಕಿವಿಗಳನ್ನು ಕಂಡು ಆನಂದಿಸುತ್ತ ಜೋಯಿಷರ ಮನೆಗೆ ಹಾರಿದ. ಜೋಯಿಸರು ಮಗು ಬಹು ಪ್ರಶಸ್ತವಾದ ಘಳಿಗೆಯಲ್ಲಿ ಹುಟ್ಟಿದೆ ಎಂದು ಲೆಕ್ಕಾ ಹಾಕಿ

ಹೇಳಿ, ಮಗುವಿನ ಕಿವಿ ಅಗಲವಾಗಿರುವುದರಿಂದಲೂ ಮತ್ತು ಕರಿಸಿದ್ದೇಗೌಡ ಬಹಳ ವರ್ಷಗಳ ಹಿಂದೆ ಶಿವಪುರಕ್ಕೆ ಹೋಗಿ ಮಹಾತ್ಮಾ ಗಾಂಧೀಜಿಯವರನ್ನು ಖುದ್ದಾಗಿ ದರ್ಶನ ಪಡೆದು ಬಂದವನು ಈ ಸುತ್ತ ಮುತ್ತಲಿಗೆ ಇವನೊಬ್ಬನೇ ಆದುದರಿಂದ ಮಗುವಿಗೆ 'ಮಹಾತ್ಮಾ ಗಾಂಧಿ' ಎಂದು ಹೆಸರಿಡಬೇಕೆಂದೂ ತೀರ್ಮಾನ ಹೇಳಿದರು.

ಕರಿಸಿದ್ದೇಗೌಡ ಎಷ್ಟು ಮುಗ್ಧ ಎಂದರೆ, 'ಮಹಾತ್ಮಾ ಗಾಂಧೀಜಿಯವರೇ ಮತ್ತೆ ಜನ್ಮ ಪಡೆದು ನಿನ್ನ ಮಗಳ ಗರ್ಭದಲ್ಲಿ ಜನಿಸಿದ್ದಾರೆ' ಎಂದರೆ ಅದನ್ನೂ ನಂಬಿಬಿಡುತ್ತಿದ್ದ. ಸದ್ಯ ಜೋಯಿಷರು ಅಂಥ ಘೋರ ಅಪರಾಧ ಮಾಡಲಿಲ್ಲ. ಕರಿಸಿದ್ದೇಗೌಡನಿಗೆ ಎರಡು ಹೊಲ. ಒಂದೇ ಮನೆ, ಇತ್ತೀಚೆಗೆ ಈ ಹೊಲದಲ್ಲಿ ಒಂದು ಎಕರೆಯನ್ನು ಬಡವರಿಗೆ ಮನೆ ಕಟ್ಟಿಕೊಳ್ಳಲೆಂದು ಹಂಚುವುದಕ್ಕಾಗಿ ಸರ್ಕಾರ ವಶಪಡಿಸಿಕೊಂಡಿತ್ತು. ಇದು ಕರಿಸಿದ್ದೇಗೌಡನಿಗೆ ತನ್ನ ಅಳಿಯ ಸತ್ತುದಕ್ಕಿಂತಲು ತೀವ್ರ ಚಿಂತೆಗೆ ಗುರಿ ಮಾಡಿತ್ತು.

ಈ ಚಿಂತೆಯಲ್ಲಿ ಮುಳುಗಿ ಸರ್ಕಾರ ವಶಪಡಿಸಿಕೊಂಡಿರುವ ಒಂದು ಎಕರೆ ಭೂಮಿಯಲ್ಲಿರುವ ಸೊಗಸಾದ ಪಲ ನೀಡುವ ಹಲಸಿನ ಮರವನ್ನು ಕಡಿದುಕೊಳ್ಳುವುದೋ ಬೇಡವೋ ಎನ್ನುವ ಜಿಜ್ಞಾಸೆಯಲ್ಲಿ ಸಿಕ್ಕಿಬಿದ್ದುದರಿಂದ ಅವನು ತನ್ನ ಮೊಮ್ಮಗನ ಆರೋಗ್ಯದ ಕಡೆಗೆ ಅಷ್ಟು ಗಮನ ಕೊಟ್ಟಿರಲಿಲ್ಲ. ಮಗಳು ವೈದ್ಯರು ಬರೆದುಕೊಟ್ಟ ಚೀಟಿಯನ್ನು ಕೊಟ್ಟು ಗಾಂಧಿಯನ್ನು 'ದೊಡ್ಡಾಸ್ಪತ್ರೆಗೆ' ಸೇರಿಸಬೇಕಂತೆ ಎಂದು ಹೇಳಿದಾಗ ಕರಿಸಿದ್ದೇಗೌಡನಿಗೆ ಎದೆ ದಸಕ್ಕೆಂದಿತು. ಮಾರನೆಯ ದಿನವೇ ಇಡೀ ಸಂಸಾರವೇ ಬಸ್ಸಿನಲ್ಲಿ ಅಷ್ಟೋ ಇಷ್ಟೋ ಇದ್ದ ಪುಡಿಗಂಟನ್ನು ತೆಗೆದುಕೊಂಡು 'ದೊಡ್ಡಾಸ್ಪತ್ರೆ' ಇರುವ ತಮ್ಮ ಜಿಲ್ಲಾ ಕೇಂದ್ರಕ್ಕೆ ಪಯಣ ಬೆಳೆಸಿತು.

ಆಸ್ಪತ್ರೆ ತಲುಪಿದಾಗ ಮಧ್ಯಾಹ್ನವಾಗಿತ್ತು. ಹೊರ ರೋಗಿಗಳನ್ನು (ಔಟ್ ಪೇಷೆಂಟ್) ಪರೀಕ್ಷೆ ಮಾಡುವ ವಿಭಾಗದಲ್ಲಿ ರೋಗಿಗಳ ಹೆಸರು ದಾಖಲು ಮಾಡಿಕೊಂಡು ಚೀಟಿಯನ್ನು ಕೊಟ್ಟು ವೈದ್ಯರ ಬಳಿಗೆ ಕಳಿಸುವ ಗುಮಾಸ್ತರಿಗೆ ತಮ್ಮ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೊಟ್ಟಿದ್ದ ಕಾಗದವನ್ನು ಕೊಟ್ಟಾಗ, ಗುಮಾಸ್ತ ಎಲ್ಲವನ್ನೂ ಓದಿ, ರೋಗಿಯ ಹೆಸರನ್ನು ಎರಡು ಮೂರು ಸಾರಿ ಓದಿ. ಏನೋ ಅನುಮಾನ ಬಂದವನಂತೆ, ಕರಿಸಿದ್ದೇಗೌಡನ ಕಡೆ ನೋಡಿ **"ಯಾರನ್ನು ತೋರಿಸೋಕೆ ಕರ್ಕೊಂಡು ಬಂದಿರೋದು"** ಎಂದು ಕೇಳಿ, ಕರಿಸಿದ್ದೇಗೌಡ ತನ್ನ ಮೊಮ್ಮಗನನ್ನು ತೋರಿಸಲು **"ಓಹೋ! ಇವನ ಹೆಸರು 'ಮಹಂತೇಗೌಡ' ಅಂತ ಅಲ್ವೆ? ನಿಮ್ಮ ಡಾಕ್ಟ್ರು ಇವನ್ನ 'ಮಹಾತ್ಮ ಗಾಂಧಿ' ಅಂತ ಬರೆದು ಬುಟ್ಟವರಲ್ಲ!"** ಎಂದು ನಕ್ಕ. ಕರಿಸಿದ್ದೇಗೌಡ, **"ಬರೆದಿರೋದು ಸರಿಯಾಗೆ ಅದೆ ಸ್ವಾಮಿ, ಇವನ ಹೆಸರು ಮಹಾತ್ಮ ಗಾಂಧಿ ಅಂತ್ಲೆ!"** ಎಂದ. ಗುಮಾಸ್ತ ಬಿಟ್ಟ ಬಾಯಿ ಬಿಟ್ಟುಕೊಂಡೇ ಮಹಾತ್ಮ

ಗಾಂಧಿಯನ್ನು ನೋಡಿದ. **"ಸರಿಯಪ್ಪ ತಗೋ ಚೀಟಿ"** ಎಂದವನೆ ಹಳೆಯ ಕಾಗದ ಜೊತೆಗೊಂದು ಹೊಸ ಚೀಟಿಯನ್ನು ಕೊಟ್ಟ ಆ ಕಡೆಗೆ ಹೋಗು ಎಂದು ತೋರಿಸಿದ.

ಅಲ್ಲೊಬ್ಬ ಇವರು ಕೊಟ್ಟಾ ಕಾಗದಗಳನ್ನೂ ಮತ್ತು ಇನ್ನೂ ಅನೇಕ ಹೊರ ರೋಗಿಗಳು ಕೊಟ್ಟಾ ಕಾಗದಗಳನ್ನೂ ತೆಗೆದುಕೊಂಡು ಒಳಗೆ ಹೋಗಿ ಒಂದು ದೊಡ್ಡ ಮೇಜಿನ ಸುತ್ತ ಕುರ್ಚಿಗಳಲ್ಲಿ ಕುಳಿತಿದ್ದ ವೈದ್ಯರ ಗುಂಪಿನ ಮುಂದೆ ಇಟ್ಟು ಬಂದ. ಮಹಾತ್ಮ ಗಾಂಧಿಯ ಸರದಿ ಬಂದಾಗ: ವೈದ್ಯರ ಗುಂಪು ಗಹಗಹಿಸಿತು. ಜೋರಾಗಿ ಕೂಗಿ ಕರೆದರು: **'ಯಾರಪ್ಪಾ ಮಹಾತ್ಮ ಗಾಂಧಿ?' "ಕರ್ಕೊಂಡು ಬಂದೇ ಸ್ವಾಮಿ ಇಲ್ಲವನೆ"** ಎಂದು ಕರಿಸಿದ್ದೇಗೌಡ ತನ್ನ ಮೊಮ್ಮಗನನ್ನು ಕರೆದುಕೊಂಡು ಒಳಗೋದ. ನಿಂಗಮ್ಮನನ್ನು ಮತ್ತು ಪದ್ದಿಯನ್ನೂ ಹೊರಗಡೆಯೇ ಜವಾನ ತಡೆದ. ಕರಿಸಿದ್ದೇಗೌಡ ತಮ್ಮ ಮುಂದೆ ಕರೆದು ತಂದು ನಿಲ್ಲಿಸಿದ ವ್ಯಕ್ತಿಯನ್ನು ವೈದ್ಯ ಮಹಾಶಯರುಗಳೆಲ್ಲ ಒಮ್ಮೆ ವಿಚಿತ್ರ ಕಾಯಿಲೆಯನ್ನು ಪತ್ತೆ ಹಚ್ಚಿದಾಗಲೋ ಅಥವಾ ಕ್ಯಾನ್ಸರ್ ವ್ಯಾಧಿಗೆ ಔಷಧಿ ಕಂಡು ಹಿಡಿದಾಗಲೊ ಆಗುವ ವಿಸ್ಮಯದಂತೆಯೇ ನೋಡಿದರು. 'ಮಹಾತ್ಮಗಾಂಧಿ' ಎಂದು ಕರೆಯಲ್ಪಡುವ ವ್ಯಕ್ತಿಯನ್ನು ಕಂಡು ಅವರಿಗೆ ಅಳಬೇಕೋ ನಗಬೇಕೋ ಅಥವಾ ನಂಬದಿರುವಂಥ ಒಂದು ಸ್ಥಿತಿಯಲ್ಲೇ ಇದ್ದು ಬಿಡಬೇಕೋ, ಏನೂ ತೋಚದೆ ಪರೀಕ್ಷೆಯ ಕೊಠಡಿಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿ, ಕರಿಸಿದ್ದೇಗೌಡನನ್ನು ಕರೆದು, **"ನೋಡಯ್ಯ, ನಿನ್ನ ಮೊಮ್ಮಗನಿಗೆ ಹೃದಯ ಹಾಗೂ ಮೂತ್ರಪಿಂಡಗಳ ಕಾಯಿಲೆ, ಔಷಧಿಗಳೆಲ್ಲಾನೂ ಬರೆದು ಕೊಡ್ತೀವೆ. ತಗೋ, ಹೇಗೆ ಸೇವಿಸಬೇಕು ಅನ್ನೋದ್ನೊ ಹೇಳ್ತೀವೆ. ಹಾಗೆ ಕೊಡು. ಸ್ವಲ್ಪ ಹುಷಾರಾಗುತ್ತೆ"** ಎಂದರು.

ಕರಿಸಿದ್ದೇಗೌಡನನ್ನು ಕತ್ತಿಡಿದು ನೀರಿಗೆ ಅದುಮಿದಂತಾಯಿತು. **"ನಿಂದಮ್ಮಯ್ಯ, ಏನೋ ನನ್ ಮೊಮ್ಮಗನ್ನ ಕಾಪಾಡಿ. ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ. ನೀವು ಇವನಿಗೆ ಮಾಡೋ ಉಪಕಾರ. ಈ ನನ್ನ ಅಪ್ಪನಿಗೆ ಮಾಡೋ ಉಪಕಾರ ಅಂತ ತಿಳ್ಕೊಂಡು ಮಾಡಿ: ನಿಮ್ಗೆ ಪುಣ್ಯ ಬತ್ತದೆ"** ಎಂದು ಅಲ್ಲಿಯೇ ನೇತು ಹಾಕಿದ್ದ ಭಾರತದ ಭಾಗ್ಯವಿಧಾತ ಮಹಾತ್ಮಾ ಗಾಂಧೀಜಿಯವರ ಭಾವ ಚಿತ್ರಕ್ಕೆ ಕೈ ಜೋಡಿಸಿ, ಕಣ್ಣೀರು ಹಾಕುತ್ತ ನಿಂತುಬಿಟ್ಟ. ವೈದ್ಯರು ಮರು ಮಾತಾಡದೆ ಚೀಟಿಯಲ್ಲಿ ಬರೆದು ಗಂಡಸರ ವಾರ್ಡಿನಲ್ಲಿ ಮಹಾತ್ಮಾ ಗಾಂಧಿಯನ್ನು ಸೇರಿಸುವುದೆಂದು ಬರೆದು ಒಬ್ಬ ಜವಾನನನ್ನು ಕರೆದು ಜೊತೆಯಲ್ಲಿ ಕಳುಹಿಸಿದರು. ಮುಂದಿನ ವಿಷಯವನ್ನು ಹೆಚ್ಚಿಗೆ ಬೆಳಸದೆ ಮುಗಿಸುವುದು ಒಳ್ಳೆಯದೆಂದು ಕಾಣಿಸುತ್ತದೆ. ಮಹಾತ್ಮ ಗಾಂಧಿಯನ್ನು ಮೂವತ್ತು ಜನರು ಇರಬೇಕಾದ ವಾರ್ಡಿನಲ್ಲಿ ಅರವತ್ತು ಜನರಿರುವ ಕಡೆ ನೆಲದ ಮೇಲೆ ಒಂದು ಹಾಸಿಗೆ ಕೊಟ್ಟು ಹಾಕಿದರು. ಎಕ್ಸ್‌ರೇ, ತೊಂಟೆ ಪರೀಕ್ಷೆಗಳ ಜೊತೆಗೆ

ಔಷಧೋಪಚಾರವೂ ನಡೆಯತೊಡಗಿತು. ವೈದ್ಯರು ಬರೆದುಕೊಟ್ಟಾ ಔಷಧಿಗಳನ್ನು ತಂದುಕೊಡುವುದಕ್ಕೆ ಮೂರು ದಿವಸಕ್ಕೆ ಕರಿಸಿದ್ದೇಗೌಡನ ಪುಟ್ಟ ಗಂಟು ಕರಗಿಹೋಯಿತು.

ನಾಲ್ಕನೆಯ ದಿನ ತನ್ನ ಅವ್ವ ನಿಂಗಮ್ಮ ತನ್ನ ತಂಗಿಯ ಕಿವಿಯ ಮತ್ತು ತನ್ನ ಕಿವಿಯ ಓಲೆಗಳನ್ನು ಬಿಚ್ಚಿ ತನ್ನ ಅಯ್ಯನಿಗೆ ಏಕೆ ಕೊಡುತ್ತಿದೆರೆಂಬುದನ್ನು ಊಹಿಸಿ, ತನ್ನ ಪ್ರೀತಿಯ ಅಯ್ಯನನ್ನು ಕರೆದು ಕೇಳಿದ **"ಅಯ್ಯಾ ನನ್ನ ಊರಿಗೇ ಕರ್ಕೊಂಡು ನಡಿ. ನನ್ನ ಹಣೇಬರಹ ಇದ್ದಂಗಾಯ್ತದೆ." "ಅಂಗೆಲ್ಲ ಮಾತಾಡಬ್ಯಾಡ ನಾನು ಇನ್ನೂ ಬದುಕಿವ್ನಿಕಲ ಮಗ ನಿನ್ನ ಉಳಿಸಿಕೋತಿನಿ."** ತನ್ನ ಮೇಲೆ ಅಯ್ಯನಿಗಿರುವ ಪ್ರೀತಿಗಾಗಿ ಗಾಂಧಿಗೆ ಆಳು ಒಳಗಿಂದ ಗುದ್ದುಕೊಂಡು ಬಂತು. ತನ್ನ ಪ್ರೀತಿಯ ಅಯ್ಯನ ತೊಡೆಯ ಮೇಲೆ ತಲೆ ಮಡಗಿಕೊಂಡು ದೃಷ್ಟಿಗೆ ಸೇರಿಸಿ ಹೇಳಿದ: **"ಅಯ್ಯ ನಾನು ಸತ್ತೊದ್ರೆ ನನ್ನ ನಮ್ಮ ಅಲಸಿನ ಮರದ ಬುಡದಲ್ಲೇ ಹಾಕಬೇಕು."** ಕರಿಸಿದ್ದೇಗೌಡ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟಾ, ನಿಂಗಕ್ಕ **'ಬುಡ್ತು ಅನ್ನು'** ಎಂದು ಬಿಕ್ಕಳಿಸಿ ಅತ್ತುಬಿಟ್ಟಳು. ಇಷ್ಟೆಲ್ಲಾ ನಡೆಯುತ್ತಿರುವಾಗ ಎಂ.ಡಿ. ಪಾಸು ಮಾಡಿರುವ ದೊಡ್ಡ ಡಾಕ್ಟರ್ ಸಾಹೇಬರು ದಯಮಾಡಿಸಿ, ಗಾಂಧಿಯನ್ನು ಪರೀಕ್ಷೆಮಾಡಿ, ಒಂದು ಚೀಟಿಯಲ್ಲಿ ಔಷಧಿಯನ್ನು ಬರೆದು ಆದಷ್ಟು ಬೇಗ ತರಿಸಬೇಕೆಂದು ಅಪ್ಪಣೆಮಾಡಿ ಬೇರೆ ರೋಗಿಗಳನ್ನು ನೋಡತೊಡಗಿದರು. ಮಗಳು ಮತ್ತು ಮೊಮ್ಮಗಳ ಓಲೆಗಳನ್ನು ತೆಗೆದುಕೊಂಡು ಊರಿಗೆ ಬಂದು ಕರಿಸಿದ್ದೇಗೌಡ ಗಿರವಿ ಇಡಲು ಪ್ರಯತ್ನಿಸಿದ.

ಯಾರೂ ಒಪ್ಪಲಿಲ್ಲ. ಸಾಲ ಪಡೆಯಲು ಯತ್ನಿಸಿದ. ಎಲ್ಲೂ ಒಂದು ಪೈಸೆ ಹುಟ್ಟಲಿಲ್ಲ. ಹಲಸಿನಮರ ಕೊಡುವುದಾದರೆ ಕೊಂಡುಕೊಳ್ಳುವುದಾಗಿ ಸುಳಿವು ಸಿಕ್ಕಲು, ಇನ್ನೂರ ಐವತ್ತು ರೂಪಾಯಿಗಳಿಗೆ ಮರವನ್ನು ಮಾರಬೇಕಾದರೆ ಎರಡು ದಿವಸಗಳು ಹಿಡಿದವು. ಹಣ ಪಡೆದು ಕರಿಸಿದ್ದೇಗೌಡ ಬಸ್ಸು ಹತ್ತಿ ಆಸ್ಪತ್ರೆಯ ಬಳಿಗೆ ಬಂದಾಗ ಮಗಳು ನಿಂಗವ್ವ ಬಾಗಿಲಲ್ಲೆ ಪದ್ದಿಯನ್ನು ನಿಲ್ಲಿಸಿಕೊಂಡು ಅಳುತ್ತ ನಿಂತಿದ್ದಳು. ಕರಿಸಿದ್ದೇಗೌಡ, **'ಗಾಂಧಿ ಹೇಗಿದ್ದಾನೆ?'** ಎಂದು ಕೇಳಲೇ ಇಲ್ಲ. ಬದಲು **'ಯಾವಾಗ ಜೀವ ಹೋಯ್ತು?'** ಎಂದು ಕೇಳಿದ. **"ರಾತ್ರಿ ಸರೊತ್ತಿನಲ್ಲಿ. ಹೆಣೀನ ಮನೇಲಿ ಮಲಗಿಸವ್ರೆ"** ಎಂದು ಅಳಲು ಪ್ರಾರಂಭಿಸಿದ ಮಗಳನ್ನು ಸಂತೈಸುತ್ತ ಕರಿಸಿದ್ದೇಗೌಡ ಹೇಳಿದ **"ಮನುಷ್ರು ಸಾಯ್ದೆ ಕಲ್ಲು ಸತ್ತಾದ. ಸುಮ್ಮಿರು ಮತ್ತೆ"** ಎಂದು ಗಾಂಧಿಯ ಹೆಣವನ್ನು ಪಡೆಯಲು ಅಪ್ಪಣೆಗಾಗಿ ದೊಡ್ಡ ಸಾಹೇಬರ ರೂಮಿನ ಕಡೆ ಹೆಜ್ಜೆ ಹಾಕಿದ.

ಅನುಬಂಧ : ೨

ನಿರ್ದೇಶಕರೊಂದಿಗೆ ದಿನಾಂಕ: ೧೭/೦೮/೨೦೧೦ ರಂದು ನಡೆಸಿದ ಸಂದರ್ಶನದ ಸಾರಾಂಶ

ಎನ್.ಆರ್. ನಂಜುಂಡೇಗೌಡ 'ನಾನು ಗಾಂಧಿ' ಚಿತ್ರದ ನಿರ್ದೇಶಕ

ಗಾಂಧಿ ಮತ್ತು ಗಾಂಧಿವಾದ ಭಾರತಕ್ಕೆ ಅಲ್ಲ ಭೂಖಂಡದ ಮುಕ್ಕಾಲು ದೇಶಗಳಿಗೆ ಅತ್ಯಗತ್ಯವಾದ ಒಂದು ಅನಿವಾರ್ಯ ಜೀವನಕ್ರಮ ಮತ್ತು ಹೊಸ ರಾಜಕೀಯ ಪರಿಜ್ಞಾನವಾಗಿದೆ. ಗಾಂಧಿ ವ್ಯಕ್ತಿತ್ವ ಪ್ರತಿನಿತ್ಯ ಹೊಸತನ ಪಡೆಯುತ್ತ ಮತ್ತೆ ಮತ್ತೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಗಾಂಧಿ ಪ್ರಭಾವಿತ ವ್ಯಕ್ತಿತ್ವಗಳೆಲ್ಲರೂ ಗಾಂಧಿಗಳೆ. ಭಾರತದಲ್ಲಿ ನಿರಂತರವಾಗಿ ಗಾಂಧಿಯಿಂದ ಪ್ರೇರಣೆಗೊಂಡು ಬದುಕುವ ಬದುಕಗಳಿವೆ.

ಜಾಗತೀಕರಣದ ಹುಚ್ಚು ಹೊಳೆಯಲ್ಲಿ ಮುಳುಗುತ್ತಿರುವ ನಮಗೆ ಗಾಂಧಿವಾದವೇ ಹಾಯಿದೋಣಿ ಅದನ್ನು ಬಿಟ್ಟರೆ ಪರ್ಯಾಯ ಮಾರ್ಗಗಳಾಗಲಿ ಚಿಂತನೆಗಳಾಗಲಿ ಇಲ್ಲ. ಗಾಂಧಿವಾದವನ್ನು ತತ್ವಶಃ ನಂಬಿ ಬದುಕುವ ಮುಗ್ಧಜೀವಿಗಳ ಬದುಕು ಬವಣೆಗಳು ಗಾಂಧಿವಾದದ ಸತ್ವವನ್ನು ಮತ್ತೆ ಮತ್ತೆ ಗಟ್ಟಿಗೊಳಿಸುತ್ತವೆ. ಆದ್ದರಿಂದ ಗಾಂಧಿ ಮತ್ತು ಗಾಂಧಿವಾದ ಸ್ಪೂರ್ತಿದಾಯಕ ಹೊಸಬದುಕುಗಳನ್ನು ನಿರಂತರವಾಗಿ ಉತ್ತೇಜಿಸುತ್ತಲೇ ಇರುತ್ತದೆ.

ಅದು ಪ್ರಾಯೋಗಿಕವಾಗಿ ಬದುಕುವ ಬದುಕಾಗಿ, ತಾತ್ವಿಕ ತಿಳುವಳಿಕೆಯಾಗಿ, ಜೀವನದಲ್ಲಿ ವ್ಯಕ್ತಿಪ್ರಯೋಗ ಮತ್ತು ಪ್ರತಿಪಾದನೆಯಾಗಿ, ವಿವಿಧ ಮಾಧ್ಯಮಗಳ ಕಲಾಕೃತಿಯಾಗಿ, ಶಿಕ್ಷಣವಾಗಿ ನಿರಂತರವಾದ ಕಲಿಕಾ ಕ್ರಮವಾಗಿ ಸಾಗುತ್ತಾ ಬಂದಿದೆ. ಇದ್ದಾಗ ಒಂದು ಬಗೆಯ ಶಕ್ತಿಯಾಗಿ ಗತಿಸಿದ ಮೇಲೆ ಮತ್ತೊಂದು ಬಗೆಯ ಶಕ್ತಿಯಾಗಿ ನಾನಾ ರೀತಿಯ ಅಭಿವ್ಯಕ್ತಿಗಳಿಗೆ ವಸ್ತುವಾಗಿರುವುದು ವಿಶೇಷ. ಆದ್ದರಿಂದ 'ನಾನು ಗಾಂಧಿ' ಎಂದು ದಿಟ್ಟತನದಿಂದ ಹೇಳಿಕೊಳ್ಳುವ ಮರಿಗಾಂಧಿ ದೊಡ್ಡ ಉತ್ತೇಜಕ, ಸ್ಪೂರ್ತಿದಾಯಕ ಮತ್ತು ಪ್ರಯೋಗಶೀಲ ಸಿನಿಮಾ ಆಗಿದೆ.

ಅದರ ಪ್ರಾಮುಖ್ಯತೆಯನ್ನು ಯಾರೂ ಅಸ್ಪೃಶ್ಯತೆಗೊಳ್ಳಲಾರರು. ಗಾಂಧಿ ಕುರಿತು ಸಿನಿಮಾ ಮಾಡಬೇಕೆಂಬ ಆಲೋಚನೆ ನನಗೆ ಮತ್ತೆ ಮತ್ತೆ ಕಾಡುತ್ತಿತ್ತು. ಅಟೆನ್‌ಬರೊ ಗಾಂಧಿ ಚಿತ್ರ ಒಂದು ಬಗೆಯಲ್ಲಿ ಉತ್ತೇಜನ ನೀಡಿದ್ದಾರೆ. ನಮ್ಮ ಮಂಡ್ಯ ಜವಾರಿ ಕತೆಗಾರ ಮಣ್ಣಿನ ಸೊಗಡನ್ನು ಸಾಹಿತ್ಯಕ್ಕೆ ತಂದ ಆತ್ಮೀಯ **ಡಾ॥ ಬೆಸಗರಹಳ್ಳಿ ರಾಮಣ್ಣನವರು** 'ಗಾಂಧಿ' ಈತ ಮತ್ತೊಂದು ರೀತಿಯಲ್ಲಿ ಉತ್ತೇಜಿಸಿತು, ರಾಮಮನೋಹರ ಲೋಹಿಯಾ ಅವರಿಂದ ಪ್ರಭಾವಿತರಾದ ನನಗೆ ಸಮಾಜವಾದಿ ಲೋಹಿಯ ಮೂಲಕ ಗಾಂಧಿ ಮತ್ತು ಹೆಚ್ಚು ಪ್ರಸ್ತುತ ಎನ್ನಿಸತೊಡಗಿದರು,

ರಾಮಣ್ಣನವರ ಕತೆ ಆಧರಿಸಿ ಸಿನಿಮಾಕ್ಕಾಗಿ ವಿಸ್ತರಿಸಿ ಚಿತ್ರ ನಿರ್ಮಿಸಬೇಕಾಗಿದ್ದುದರಿಂದ ಸಮರ್ಥವಾಗಿ ಈ ಕತೆ ಆಧರಿಸಿ ಗಾಂಧೀವಾದದ ಸೂಕ್ಷ್ಮಗಳನ್ನು ಮನಮುಟ್ಟುವಂತೆ ಕತೆ ಬೆಳೆಸಿ ಸಂಭಾಷಣೆ ಬರೆಯುವವರ ಹುಡುಕಾಟದಲ್ಲಿದ್ದಾಗ ಡಾ.ರಾಜಪ್ಪ ದಳವಾಯಿಯವರು ಸೂಕ್ತವಾದ ಬರಹಗಾರರೆನಿಸಿತು. ನನ್ನ ಸಿನಿಮಾ ಹಂದರಕ್ಕೆ ನ್ಯಾಯಸಲ್ಲುವ ರೀತಿಯ ಸಂಭಾಷಣೆಯನ್ನು ಅವರು ಬರೆದರು 'ಅ ಆ ಇ ಈ' ಯಂಥ ಒಂದು ವಿಶೇಷವಾದ ಮಕ್ಕಳ ಚಿತ್ರ ಮಾಡಿಯೂ ಅದು ಇನ್ನೂ ಬಿಡುಗಡೆಯಾಗದ ವಿಷಾದದ ಹಿನ್ನೆಲೆಯಲ್ಲಿ 'ನಾನು ಗಾಂಧಿ' ಚಿತ್ರ ಮಾಡಬೇಕೆನಿಸಿತು.

ಶಿಕ್ಷಣ ಮತ್ತು ಜಾಗತೀಕರಣದ ಅಪಾಯಗಳನ್ನು ಚಿತ್ರಿಸುವ ಬಗ್ಗೆ ಯೋಚಿಸುತ್ತಾ ಗಾಂಧಿ, ಗಾಂಧಿವಾದ, ಶಿಕ್ಷಣ, ನೈತಿಕತೆ, ಆದರ್ಶ ಮತ್ತು ಆಧುನಿಕ ತಂತ್ರಜ್ಞಾನದ ಬಿಕ್ಕಟ್ಟುಗಳು ಮುಂತಾದ ವಿಷಯಗಳನ್ನಾಧರಿಸಿದ ಒಂದು ಹೊಸ ವೈಚಾರಿಕತೆಯ ಹಂದರ ಮಕ್ಕಳಿಗೆ ಬೇಸರವಾಗದಂತೆ, ಶುಷ್ಕತೆ ಮೀರಿ ಮನಕ್ಕೆ ಮುದನೀಡುವಂತೆ ಗಾಂಧಿವಾದವನ್ನು ಚಿತ್ರಿಸಬೇಕೆಂಬ ಉದ್ದೇಶದಿಂದ ಈ ಚಿತ್ರದ ಪರಿಕಲ್ಪನೆಗೆ ಒಂದು ರೂಪ ಕೊಡಲು ಪ್ರಯತ್ನಿಸಿದ್ದೇವೆ.

ಮಕ್ಕಳ ಜೊತೆ ಚಿತ್ರಮಾಡುವುದು ನನಗೆ ಖುಷಿಯ ವಿಚಾರ. ನನ್ನ ಮನದಾಳದ ಗಾಂಧಿವಾದದ ಪ್ರಸ್ತುತತೆಗೆ ಎಲ್ಲಾ ತಂತ್ರಜ್ಞರು ಮಕ್ಕಳು, ಹಿರಿಯ ಕಲಾವಿದರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅದೆಲ್ಲದರ ಯಶಸ್ಸೇ–ನಾನು ಗಾಂಧಿ.

ಅನುಬಂಧ : ೩

ಈ ಚಿತ್ರಕ್ಕೆ ಸಂಭಾಷಣೆ ಮತ್ತು ಸಾಹಿತ್ಯವನ್ನು ನಿರ್ವಹಿಸಿರುವ ಡಾ.ರಾಜಪ್ಪ ದಳವಾಯಿಯವರೊಂದಿಗೆ ದಿನಾಂಕ : 19/08/2010 ರಂದು ನಡೆಸಿದ ಸಂದರ್ಶನದ ಸಾರಾಂಶ

ಈ ಚಿತ್ರದ ಸಂಭಾಷಣೆಯನ್ನು ಬರೆದಿರುವ ರಾಜಪ್ಪ ದಳವಾಯಿಯವರು ಚಿತ್ರದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ "ಆ ಕತೆ ನನ್ನನ್ನ ಬಹಳ ದಿನಗಳಿಂದಲೂ ಕಾಡುತ್ತಿತ್ತು. ಅಲ್ಲದೇ ಸಾಹಿತ್ಯ ಲೋಕದಲ್ಲಿ ಬಹು ಸುದ್ದಿ ಮಾಡಿದ ಕತೆ ಅದು. ಡೈರೆಕ್ಟರ್ ನಂಜುಂಡೇಗೌಡ ಅವರು ಈ ಕತೆಯನ್ನು ಮೆಚ್ಚಿ ಸಿನಿಮಾ ಮಾಡಬೇಕೆಂದು ಬಯಸಿ ಬಂದಿದ್ದರಿಂದ ಇದನ್ನು ಚಿತ್ರ ಮಾಡಿದೆವು. ಕತೆ ಚಿಕ್ಕದು. ಬಹುತೇಕ ಸಾವಿನಲ್ಲಿ ಅಂತ್ಯಗೊಳ್ಳುತ್ತದೆ. ಶಿಕ್ಷಣದಲ್ಲಿ ಜಾಗತಿಕವಾಗಿ ಮೇಲುಗೈ ಸಾಧಿಸಿದ್ದ ಕಂಪ್ಯೂಟರ್ ಶಿಕ್ಷಣದ ಪ್ರಭಾವಗಳ ಹಿನ್ನೆಲೆಯಲ್ಲಿ ಹೊಸ ರೀತಿಯ ಸ್ವರೂಪವನ್ನು ತರಬೇಕೆಂಬ ಉದ್ದೇಶದಿಂದ ಚಿತ್ರಕತೆಯನ್ನು ರೂಪಿಸಲಾಯಿತು. ಈ ಚಿತ್ರದ ಮೂಲಕ ತಾಂತ್ರಿಕತೆ ಮಾತ್ರವೇ ದೇಶದ ಅಭಿವೃದ್ಧಿಯಲ್ಲ ಎಂಬ ಸಂದೇಶವನ್ನು ಹೇಳಬೇಕಾದ ಅಗತ್ಯವಿತ್ತು.

ಡೈರೆಕ್ಟರ್ ಲೋಹಿಯಾ ವಾದವನ್ನು ಒಪ್ಪಿದವರು ನಮ್ಮಿಬ್ಬರ ನಡುವಿನ ಚಿಂತನೆಗಳು ಪರಸ್ಪರ ಹೊಂದುತ್ತಿದ್ದವಾದ್ದರಿಂದ ಈ ಚಿತ್ರದಲ್ಲಿ ಕಲಾತ್ಮಕತೆಗಿಂತಲೂ ವೈಚಾರಿಕತೆಯೇ ಹೆಚ್ಚಾಗಿದೆ. ಈ ಚಿತ್ರದ ಆಶಯವನ್ನು ಮಕ್ಕಳಿಗಿಂತ ದೊಡ್ಡವರೂ ತಿಳಿದುಕೊಳ್ಳಬೇಕಾದ ವಿಷಯಗಳು ಇದರಲ್ಲಿ ಅಧಿಕವಾಗಿವೆ. ಮುಖ್ಯವಾಗಿ ಕಂಪ್ಯೂಟರ್ ಶಿಕ್ಷಣದ ಅನಕ್ಷರತೆಯನ್ನು ಕುರಿತಾಗಿ ಇದು ಹೆಚ್ಚಿನ ವಿಷಯಗಳನ್ನು ಹೇಳುತ್ತದೆ. ಬಾಲಕ ಗಾಂಧಿಯ ಶಿಕ್ಷಣದ ಸ್ಥಿತಿ ಮತ್ತು ಆತನ ಆಸಕ್ತಿಯನ್ನು ಸಹ ಈ ಚಿತ್ರ ಹೇಳುತ್ತದೆ.

ಬಾಲಕ ಗಾಂಧಿ ಮಹಾತ್ಮಗಾಂಧಿಯ ವ್ಯಕ್ತಿತ್ವವನ್ನು ಹಂತ ಹಂತವಾಗಿ ತನ್ನಲ್ಲಿ ಆವಾಹಿಸಿಕೊಳ್ಳುವ ಸ್ಥಿತಿಯೂ ಇಲ್ಲಿದೆ. ಇದರಿಂದಾಗಿ ಗಾಂಧಿಯೆಂಬ ಹೆಸರಿಗೆ ಹೆಜ್ಜೆ ಹೆಜ್ಜೆಗೂ ಅವಮಾನವಾಗುತ್ತದೆ. ಎಂಬುದನ್ನು ಈ ಕತೆ ಹೇಳುತ್ತದೆ. ಇಡೀ ಜನ ಸಮೂಹವನ್ನು ತನ್ನ ಕಡೆ ಸೆಳೆದುಕೊಳ್ಳುತ್ತಾನೆ ಗಾಂಧಿ. ೧೦ –೨೦ ವರ್ಷಗಳಲ್ಲಿ ಗಾಂಧಿಯ ತತ್ವಗಳನ್ನು ಕಡೆಗಣಿಸಿದ ಜನ ಸಮೂಹದ ಪರಿಚಯವು ನಮಗೆ ಈ ಚಿತ್ರದಿಂದ ಲಭ್ಯವಾಗುತ್ತದೆ. ಆದರೆ ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿಯೂ ಕುಲಕಸುಬುಗಳನ್ನು ಉಳಿಸಬೇಕೆಂಬ ಸಂದೇಶ ಕಾಲ ಕಾಲಕ್ಕೆ ಗಾಂಧಿ ತತ್ವ ಹೊಸದಾಗಿ ಮರುಹುಟ್ಟನ್ನು ಪಡೆಯುತ್ತಿರುತ್ತದೆ ಎಂಬುದನ್ನು ಇಲ್ಲಿ ನಾವು ನೋಡಬಹುದಾಗಿದೆ. ಇತ್ತೀಚಿನ ಸಿನಿಮಾ ಲಗೆ ರಹೋ ಮುನ್ನಭಾಯಿ ಕೂಡ ಗಾಂಧಿಯಿಸಂ

ಅನ್ನು ಆಧರಿಸಿ ಬಂದ ಚಿತ್ರ, ಇಂತಹ ಹಲವು ಉದಾಹರಣೆಗಳು ಗಾಂಧಿ ತತ್ವದ ಪ್ರಸ್ತುತತೆಯನ್ನು ತಿಳಿಸುತ್ತದೆ.

೧೯೭೦ ರ ದಶಕದಲ್ಲಿ ಗಾಂಧಿ ತತ್ವ ಅವಸಾನವಾದ ಪರಿಸ್ಥಿತಿಯನ್ನು ಬೆಸಗರಹಳ್ಳಿ ರಾಮಣ್ಣನವರು ತಮ್ಮ 'ಗಾಂಧಿ' ಕತೆಯಲ್ಲಿ ಹೇಳಿದ್ದಾರೆ. ಇವರು ಎಡ ಪಂಥೀಯ ಚಿಂತಕ ಗಾಂಧಿ ತತ್ವಗಳಾನ್ನಾಧರಿಸಿ ಬರೆದ ಲೇಖಕ. ನಾನು ಮತ್ತು ನಂಜುಂಡೇಗೌಡರು ರಾಮಣ್ಣನವರಿಗೆ ಪರಮಾಪ್ತರಾಗಿದ್ದೆವು. ಅವರನ್ನು ತುಂಬಾ ಹತ್ತಿರದಿಂದ ಬಲ್ಲೆವು. ಲೇಖಕರಾಗಿ ತುಂಬಾ ಭಾವುಕರು ವೈಚಾರಿಕವಾಗಿ ಮಾನವೀಯ ಅಂತಃಕರಣವುಳ್ಳ ಲೇಖಕರಾಗಿದ್ದರು. ಸಾಹಿತ್ಯ ಲೋಕದಲ್ಲಿ Remark ಸಾಹಿತಿಯಾಗಿದ್ದರು.

ಮೂಲಕತೆಯಲ್ಲಿನ ಬಾಲಕ ಗಾಂಧಿ ಕಳ್ಳತನದ ಆರೋಪದಿಂದ ಹೊರಬರುವಾಗ ಮಾನಸಿಕವಾಗಿ ತೋಳಲಾಡುವುದನ್ನು ಸಿನಿಮಾ ಕತೆಯಲ್ಲಿ ಬೆಳಸಿ ಹಳ್ಳಿಯ ಜನರಲ್ಲಿನ ಈರ್ಷೆ ಅಸಹನೆಗಳನ್ನು ಸೇರಿಸಿ ಚಿತ್ರಕತೆಯನ್ನು ರೂಪಿಸಲಾಗಿದೆ. ಈ ಚಿತ್ರದಲ್ಲಿ ಬರುವ ರಂಗಪ್ಪಜ್ಜ ಕುಶಲಕರ್ಮಿಯಾಗಿ ಹತ್ತಾರು ಕೆಲಸ ಮಾಡುವ ಹಳ್ಳಿಯಲ್ಲಿರುವ Multi Personality ಆಗಿ ಕಂಡು ಬರುತ್ತಾನೆ. ಇದರೊಂದಿಗೆ ರಂಗಪ್ಪ ಸ್ವಾತಂತ್ರ್ಯ ಹೋರಾಟಗಾರನೂ ಕೂಡ ಹೌದು. ಗಾಂಧಿಯ ಕತೆಯನ್ನು ರಂಗಪ್ಪ ಹೇಳಿದಂತೆ ಬಾಲಕ ಗಾಂಧಿ ಅದನ್ನು ಸ್ವೀಕರಿಸುತ್ತಲೇ ಹೋಗುತ್ತಾನೆ. ತಾತ ಗಾಂಧಿಯ ಬಗ್ಗೆ ಹೇಳುತ್ತಾ ಹೋದಂತೆ ಬಾಲಕ ಗಾಂಧಿ ಅದನ್ನು ಹೀರಿಕೊಳ್ಳುತ್ತಾ ಹೋದಾಗ ಒಂದು ಗಟ್ಟಿ ವ್ಯಕ್ತಿಯಾಗಿ ನಿರ್ಮಾಣಗೊಳ್ಳುತ್ತಾನೆ. ಇಡೀ ಚಿತ್ರದಲ್ಲಿ ಗಾಂಧಿ ಪಾತ್ರಧಾರಿ ಮಗುವಿನಲ್ಲಿ ಗಾಂಧಿ ತತ್ವಗಳು ಬಿಂಬಿತವಾಗುತ್ತವೆ. ಇಡೀ ಚಿತ್ರದುದ್ದಕ್ಕೂ ಗಾಂಧಿಯ ತತ್ವಗಳು ಆವರಿಸಿಕೊಂಡೇ ಚಿತ್ರ ಸಿದ್ಧವಾಗಿರುವುದನ್ನು ನಾವು ಕಾಣಬಹುದು. ಬಾಲಕ ಗಾಂಧಿ ಅವನೇ ಸ್ವತಃ ಗಾಂಧಿಯಾದಾಗ ಅಥವಾ ಆತನ ಹೆಸರನ್ನು ಇಟ್ಟುಕೊಂಡಾಗ ಏನೇನೂ ಸಂದಿಗ್ಧಗಳು ಸೃಷ್ಟಿಯಾಗುತ್ತವೆ. ಎಂಬುದನ್ನು ಚಿತ್ರ ಹೇಳುತ್ತದೆ.

ನೈತಿಕ ಪ್ರಜ್ಞೆಯನ್ನು ವಿರೋಧಿಸುವ ವ್ಯಕ್ತಿತ್ವಗಳು ನಮ್ಮ ಸುತ್ತ ಮುತ್ತಲೇ ಇರುವುದನ್ನು ಈ ಚಿತ್ರದ ಪಾತ್ರಗಳಿಂದ ಗುರುತಿಸಬಹುದಾಗಿದೆ. ಭಾರತದಲ್ಲಿ ಬಡವರಿದ್ದರೂ ಅವರಿಗೆ ಅವರದ್ದೇ ಆದ ನೈತಿಕ ಮೌಲ್ಯ ಇದೆ. ಅದು ಬೇರೆಲ್ಲ ಅಸ್ತ್ರಗಳಿಗಿಂತ ಬಲಿಷ್ಠವಾದುದು. ನೈತಿಕ ಪ್ರಜ್ಞೆಯೆಂಬುದು ಎಲ್ಲರನ್ನು ಒಂದು ರೀತಿಯಲ್ಲಿ ಕಾಡಿಸುತ್ತದೆ. ಜನತೆಗೆ ಅದು ಸಮಾನವಾಗಿ ಸಿಗುತ್ತದೆ. ಅಂತೆಯೇ ಅಪಹಾಸ್ಯಕ್ಕೂ ಕೂಡ ಈಡಾಗುತ್ತವೆ. ನೈತಿಕ ಪ್ರಜ್ಞೆಯನ್ನು ಕುಹಕವಾಗಿ ನೋಡುವ ಜನರಿಗೆ ತಲೆಬಾಗುತ್ತದೆ. ಕೆಲವು ಬಾರಿ ಅದು ಸವಾಲಾಗುತ್ತದೆ. ಹೀಗೆ ಗಾಂಧಿ ಚಿಂತನೆಗೆ ನಾನಾ ಮುಖಗಳಿವೆ. ಅದು ಈ ಚಿತ್ರದಲ್ಲಿ ಮೂಡಿಬಂದಿದೆ.

ಬಾಲಕ ಗಾಂಧಿಯ ಮೇಲೆ ಹಲಸಿನ ಹಣ್ಣಿನ ಆಪಾದನೆ, ಜಾಮಿಟ್ರಿ ಬಾಕ್ಸನ್ನು ಕದ್ದಿದ್ದಾನೆಂಬ ಅಪಾದನೆಯಾಗಲಿ, ಕಳ್ಳತನದ ಆರೋಪಗಳು ಹುಡುಗನನ್ನು ಕಾಡುತ್ತದೆ. ತಾನು ಕಳ್ಳ ಅಲ್ಲ ಅನ್ನುವುದಕ್ಕೆ ಆ ಹುಡುಗ ಹಿಡಿಯುವ ಮಾರ್ಗವಾದರು ಯಾವುದು? ಮಹಾತ್ಮ ಗಾಂಧಿ ತನ್ನ ಜೀವನದಲ್ಲಿ ಮಾಡಿದ ಹೋರಾಟವನ್ನೇ ಬಾಲಕ ಗಾಂಧಿಯು ಕೂಡ ಮಾಡುತ್ತಾ ಹೋಗುತ್ತಾನೆ.

ಹಳ್ಳಿಯ ಹುಡುಗನೊಬ್ಬ ಗಾಂಧಿವಾದವನ್ನು ತನ್ನದಾಗಿ ಮಾಡಿಕೊಳ್ಳುವ ಸಂದರ್ಭ ಆ ಸಂದರ್ಭದ ಅನೇಕ ವಿಷಯಗಳನ್ನು ಈ ಚಿತ್ರ ಚರ್ಚೆ ಮಾಡುತ್ತದೆ. ಬಾಲಕ ಗಾಂಧಿಗೆ ಕಳ್ಳತನದ ಆರೋಪ ಹೊರಿಸಲು ಕೃಷ್ಣಪ್ಪ, ಸುರೇಶ, ಕಂಪ್ಯೂಟರ್ ಮೇಷ್ಟ್ರು ಮಂಗೇಶ ಅವರುಗಳೆಲ್ಲ ಗಾಂಧಿಯನ್ನು ಆರೋಪಿಯಾಗಿ ಮಾಡಲು ಓಡಾಡುತ್ತಾರೆ. ಆದರೆ ವಾಸ್ತವವಾಗಿ ಗಾಂಧಿ ಅಲ್ಲೆಲ್ಲ ತನ್ನ ನೈತಿಕ ಪ್ರಜ್ಞೆಯನ್ನು ಎತ್ತಿ ಹಿಡಿಯುತ್ತಾನೆ. ಶಿಕ್ಷಣದ ಎರಡು ಭಾಗಗಳನ್ನು ನಾವು ಈ ಚಿತ್ರದಲ್ಲಿ ನೋಡುತ್ತೇವೆ.

- ಸಾಮಾನ್ಯ ಶಿಕ್ಷಣ
- ತಾಂತ್ರಿಕ ಶಿಕ್ಷಣ

ಈ ಎರಡರಲ್ಲಿನ ಸಂದಿಗ್ಧತೆ ಪ್ರಸ್ತುತ ಭಾರತವನ್ನು ಕಾಡುತ್ತಿರುವ ಸಮಕಾಲೀನ ಸಮಸ್ಯೆ. ಕಂಪ್ಯೂಟರ್ ಶಿಕ್ಷಣ ಗೊತ್ತಿಲ್ಲದಿದ್ದರೆ ಅಪ್ರಸ್ತುತ ಎಂಬ ಪರಿಸ್ಥಿತಿಯನ್ನು ಇದು ನಿರ್ಮಾಣ ಮಾಡಿದೆ. ಕಂಪ್ಯೂಟರ್ ಶಿಕ್ಷಣದ ತಿಳುವಳಿಕೆ ಇಲ್ಲದವನಲ್ಲಿ ಅವಕಾಶ ಮಾಡಿಕೊಡುತ್ತದೆ.

ಈ ಅಂಶವನ್ನು ನಾವು ಈ ಚಿತ್ರದಲ್ಲಿನ ಕಂಪ್ಯೂಟರ್ ಮೇಷ್ಟ್ರು ನಾರಾಯಣ ಮೂರ್ತಿಯ ವ್ಯಕ್ತಿತ್ವದಲ್ಲಿ ಗುರುತಿಸಬಹುದಾಗಿದೆ. ಗಾಂಧಿಯೆಂಬ ಹೆಸರಿಗೆ ಆದ ಅವಮಾನ ಬಾಲಕ ಗಾಂಧಿ ಆಸ್ಪತ್ರೆಯಲ್ಲಿ ನಡೆಯುವ ಅವಮಾನಗಳಿಂದ ಆತ ತನ್ನ ಹೆಸರನ್ನೇ ಬದಲಾಯಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬರುವಂತಾಗುತ್ತದೆ. ಯಾವ ಗಾಂಧಿಯ ಹೆಸರಿಗೆ ದೇಶ-ವಿದೇಶಗಳಲ್ಲಿ ಗೌರವ ಸಿಗುತ್ತಿತ್ತೋ ಅದಕ್ಕೆ ವಿರುದ್ಧವಾಗಿ ಗಾಂಧಿ ಎಂಬ ಹೆಸರು ಅಪಹಾಸ್ಯಕ್ಕೆ ಈಡಾಗುತ್ತದೆ ಈ ಅವಮಾನ ಹೆಸರಿಗಾದದ್ದಲ್ಲ ಬದಲಿಗೆ ಆತನ ಮೌಲ್ಯಕ್ಕೆ ಆದ ಅಪಚಾರ ವ್ಯಕ್ತಿಗೆ ಆಗುವ ಅಪಹಾಸ್ಯಗಳು ಮೌಲ್ಯಗಳಿಗೂ ಆಗುವ ಸಾಧ್ಯತೆಗಳೇ ಅಧಿಕವಾಗಿರುತ್ತವೆ.

ಒಂದು ಹೆಸರು ಕೆಲವರಿಗೆ ಬಲವಾದರೆ ಇನ್ನೂ ಕೆಲವರಿಗೆ ಕೀಳರಿಮೆಯನ್ನು ಸೃಷ್ಟಿಸುತ್ತದೆ. ಇಂಥ ಕೀಳರಿಮೆಯಿಂದ ಬಾಲಕ ಗಾಂಧಿ ನರಳುತ್ತಾನೆ. ಅದನ್ನು ಸೃಷ್ಟಿಸುವವನು ಕಂಪ್ಯೂಟರ್ ಮೇಷ್ಟ್ರು ನಾರಾಯಣಮೂರ್ತಿ. ಅವನು ಮಂಗೇಶನಾಗಿದ್ದವನು. ಕಂಪ್ಯೂಟರ್ ಕಲಿತ ಮೇಲೆ ನಾರಾಯಣಮೂರ್ತಿಯಾಗಿದ್ದಾನೆ. ಇವನ ಕಿರುಕುಳದಿಂದ ಬೇಸತ್ತ ಬಾಲಕ

ಗಾಂಧಿ ವಿದ್ಯಾಸಾಗರನೆಂದು ಬದಲಾಗುತ್ತಾನೆ. ಒಂದು Educational Responsibility ಯನ್ನು ಈ ಚಿತ್ರ ನಿರೂಪಿಸುತ್ತದೆ. 'ತಾರೆ ಜಮೀನ್ ಪರ್' ಎಂಬ ಹಿಂದಿ ಚಿತ್ರ ಬರುವುದಕ್ಕೂ ಮೊದಲೇ ಈ ಚಿತ್ರ ಬಂದಿದೆ.

ಮಕ್ಕಳಿಗೆ ಹೇಗೆ ಕಲಿಸಬೇಕೆಂಬುದು ಬಹಳ ಮುಖ್ಯ. ಕಲಿಸುವವರಲ್ಲಿ ತಾಯ್ತನ ಎಂಬುದು ಇರಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ನಾರಾಯಣಮೂರ್ತಿಯಂತಹ ಶಿಕ್ಷಕರು ಮಾರಕ ಎನ್ನುವುದನ್ನು ಇಂದಿನ ಶಿಕ್ಷಣದ ದೋಷ ಎಂದೂ ಸಹ ಕಾಣಬಹುದಾಗಿದೆ. ಮೇಷ್ಟ್ರು ಮಕ್ಕಳ ಆಳದ ಮಟ್ಟಕ್ಕಿಳಿದು ಕಲಿಸಬೇಕು ನಾರಾಯಣ ಮೂರ್ತಿ ಬಾಲಕ ಗಾಂಧಿಯಲ್ಲಿ ಉಂಟುಮಾಡುವ ಕೀಳರಿಮೆ ಇದರಿಂದ ಬಾಲಕ ಗಾಂಧಿ ಅವಮಾನವಾದಂತಾಗಿ ನರಳುತ್ತಾನೆ. ದೊಡ್ಡ ವ್ಯಕ್ತಿಯ ಹೆಸರನ್ನು ಸಾಮಾನ್ಯನೊಬ್ಬ ಇಟ್ಟುಕೊಂಡರೆ ಎಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಎಂಬುದನ್ನು ಈ ಚಿತ್ರ ನಿರೂಪಿಸುತ್ತದೆ. ಹೆಸರಿನ ಹಿರಿಮೆ ಕೀಳರಿಮೆ ಆ ಹೆಸರಿಗೆ ತಕ್ಕ ಮೌಲ್ಯಗಳನ್ನು ಬದುಕಲು ಹೋದಾಗ ಎದುರಾಗುವ ಸಮಸ್ಯೆಗಳು ಗಾಂಧಿ ಮೂಲಕ ಪಡೆದ ಪ್ರೇರಣೆಯಿಂದ ಆ ಹುಡುಗ ಆ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾನೆ. ಎಂಬುದನ್ನು ಈ ಚಿತ್ರ ತೋರಿಸುತ್ತದೆ.

ಇಲ್ಲಿ ಬಾಲಕ ಗಾಂಧಿ ಗೆಲ್ಲುತ್ತಾನೆ. ಗಾಂಧಿಯ ಗೆಲುವಿನ ಪ್ರೇರಣೆಯೂ ಇಲ್ಲಿದೆ. ಗಾಂಧಿವಾದ ಶವ ಪರೀಕ್ಷೆ- ಯಶಪಾಲರ ಕೃತಿ. ಗಾಂಧಿವಾದ ಬೇಕೇ ಬೇಡವೇ ಎಂಬ ಚರ್ಚೆಗಳು ಇವತ್ತು ನಡೆಯುತ್ತಿವೆ. ಇವೇ ವಿಷಯವನ್ನು ಈ ಕೃತಿಯೂ ಕೂಡ ಒಳಗೊಂಡಿದೆ ಪ್ರಸ್ತುತ ಮತ್ತು ಅಪ್ರಸ್ತುತಗಳ ನಡುವೆ ತಿಕ್ಕಾಟಗಳಿವೆ. ಅಪ್ರಸ್ತುತ ಎಂದು ಆತನನ್ನು ಕೊಂದು ಹಾಕಿದವರು ಇಲ್ಲಿದ್ದಾರೆ. ಗಾಂಧಿ ಅಪ್ರಸ್ತುತ ಎಂದವರೇ ಗಾಂಧಿವಾದವು ಅಪ್ರಸ್ತುತ ಎನ್ನುತ್ತಾರೆ. ಭಾರತದಲ್ಲಿ ಒಬ್ಬ ಗಾಂಧಿಯಿಲ್ಲ ಕೋಟ್ಯಾಂತರ ಜನ ಗಾಂಧಿಗಳಿದ್ದಾರೆ.

ಯಾವ ಗಾಂಧಿಯನ್ನು ಕೊಲ್ಲುವುದು ರಕ್ತ ಬೀರಾಸುರರಂತೆ ಕಾಲ ಕಾಲಕ್ಕೆ ಗಾಂಧಿ ಚಿಂತನೆಯನ್ನು ಹೊತ್ತು ಜನ ಈ ನಾಡಿನಲ್ಲಿ ಮರು ಹುಟ್ಟನ್ನು ಪಡೆಯುತ್ತಲೇ ಇತ್ತಾರೆಂದರೆ ಗಾಂಧಿ ಪ್ರಸ್ತುತ ಎಂಬ ಅಂಶವನ್ನು ನಾವು ಗಮನಿಸಬೇಕು ಆ ಆಶಯವನ್ನು ಇಟ್ಟುಕೊಂಡೇ ಬೆಸಗರಹಳ್ಳಿ ರಾಮಣ್ಣನವರು 'ಗಾಂಧಿ' ಕತೆಯನ್ನು ಬರೆದಿದ್ದಾರೆ. ಗಾಂಧಿಯಿಂದ ಪಡೆದ ಸ್ಪೂರ್ತಿಯಿಂದ ರಂಗಪ್ಪಜ್ಜ ತನ್ನ ಮೊಮ್ಮಗನಿಗೆ ಗಾಂಧಿ ಎಂದು ಹೆಸರಿಡುತ್ತಾನೆ.

ಅಂದಾಗ ಗಾಂಧಿಯ ಪ್ರಸ್ತುತತೆ ಮತ್ತು ಅಪ್ರಸ್ತುತತೆಯನ್ನು ಗುರುತಿಸಬಹುದು. ಅದನ್ನೇ ರಾಮಣ್ಣನವರು ಕತೆಯಲ್ಲಿ ಹೇಳುವ ಪ್ರಯತ್ನ ಮಾಡಿದ್ದಾರೆ. ಬಡತನ ತುಂಬಾ ಸೃಜನ ಶೀಲವಾದದ್ದು. ಅದನ್ನು ಕೂಡ ಈ ಚಿತ್ರ ನಿರೂಪಿಸುತ್ತದೆ. ಶ್ರೀಮಂತ Creative ಆಗಿಲ್ಲ

ಬಡತನದಲ್ಲಿಯೂ ಕೂಡ ಬಾಲಕ ಗಾಂಧಿಯ ಪರಿವಾರದವರು ಸೃಜನಾತ್ಮಕವಾಗಿದ್ದಾರೆ ಎಂಬುದನ್ನು ಈ ಚಿತ್ರ ಹೇಳುವ ಪ್ರಯತ್ನ ಮಾಡಿದೆ. Making of This Film ವೈಚಾರಿಕತೆ scintific ಆಗಿ ಯೋಚಿಸಿದಂತೆ ಅದರ ವೈಚಾರಿಕತೆಯೂ ಕೂಡ ಬೆಳೆಯುತ್ತದೆ.

ಆ ಮೂಲಕ ಅದು ಅವನ ಶಕ್ತಿಯೂ ಕೂಡ ಆಗುತ್ತದೆ. Converssion of Gandhism ಈ ಚಿತ್ರ, ಆದುದರಿಂದ ಅಭಿವ್ಯಕ್ತಿಯ ಮಟ್ಟಕ್ಕೆ ಇದು ಹೋಗುತ್ತದೆ. ಹುಡುಗನ ಮನಸ್ಸು ಆದರ್ಶೀಕೃತ ವ್ಯಕ್ತಿ ಗಾಂಧಿಗೆ ಮಾರುಹೋಗಿ ತನ್ನ ವ್ಯಕ್ತಿತ್ವವನ್ನು ಮತ್ತು ಸಾದೃಶ್ಯವನ್ನು ಆ ಹುಡುಗ ಉಳಿಸಿಕೊಳ್ಳುತ್ತಾನೆ. Demand of Truth ಸತ್ಯಾಗ್ರಹ. ಆದರೆ ಅದು ಇಂದು ಅಪರಾಧವಾಗಿ ಪರಿಣಮಿಸಿದೆ. ಅದು ವೈರುಧ್ಯವಾಗಿ ಇಂದು ಪರಿಣಮಿಸಿದೆ.

ಗಾಂಧಿಯನ್ನು ಜನ ಮೆಚ್ಚಬೇಕು ಜನ ಅದನ್ನು Art of Work ನಲ್ಲಿ ಮುಖ್ಯತಿರುಳೆ ಗಾಂಧಿವಾದದ ವಿರೋಧ ಎನ್ನುವುದು. ವೈಚಾರಿಕತೆಯ ಹಿನ್ನೆಲೆಯೇ ಈ ಚಿತ್ರದ ಬಹುದೊಡ್ಡ ಆಶಯವಾಗಿ ಈ ಚಿತ್ರ ನಿರ್ಮಾಣಕ್ಕೆ ಮೂಲಕಾರಣವಾಗಿದೆ. ಜನಕ್ಕೆ ಸಂವಾದಿಯಾಗಿ ಕೆಲಸ ಮಾಡುವ ಕಂಪ್ಯೂಟರ್ ಜನರ ಇಚ್ಛಾ ಶಕ್ತಿಯನ್ನೇನು ಬೆಳೆಸಲಾರದು.

Knowledge Recultivate ಆಗಬೇಕು. ಆದರೆ ಕಂಪ್ಯೂಟರ್ ಇಲ್ಲಿ ಭಯಾನಕ ವಿಷಯವಾಗಿದೆ. ಅದು ಗೊತ್ತಿಲ್ಲದ್ದರಿಂದ ಅಪಮಾನಗಳೇ ಆಗುತ್ತವೆ. ಇದರಿಂದ ಶ್ರೇಣೀಕರಣ ಮತ್ತು ನವ ವಸಾಹತುಶಾಹಿಯ ಉಗಮವಾಗುತ್ತದೆ. ಇದನ್ನು ಉಂಟು ಮಾಡುವವರು ಮೇಲರಿಮೆಯಿಂದ ಮರೆಯುವ ಜನ ಕೀಳರಿಮೆಯಿಂದ ನರಳುವ ಜನಗಳ ನಡುವಿನ ಸಂಘರ್ಷವನ್ನು ಈ ಚಿತ್ರ ಹೇಳುತ್ತದೆ.

ದೇಶದ ಆಂತರಿಕ ಸ್ವಾಸ್ಥ್ಯ ಭದ್ರತೆಗೆ ಧಕ್ಕೆಯನ್ನುಂಟು ಮಾಡುತ್ತದೆ. ಕಂಪ್ಯೂಟರ್ ಶಿಕ್ಷಣದಿಂದ ಏರ್ಪಡುವ ಶ್ರೇಣೀಕರಣ ಎಂಬ ಅಂಶದ ಮೇಲೆ ಈ ಚಿತ್ರ ಬೆಳಕು ಚಲ್ಲುತ್ತದೆ. ಇದು ಅತ್ಯುತ್ತಮ ಮಕ್ಕಳ ಚಿತ್ರ ಪ್ರಶಸ್ತಿಯನ್ನು ಮತ್ತು ಅತ್ಯುತ್ತಮ ಶೈಕ್ಷಣಿಕ ಚಿತ್ರವೆಂದು ಬಹುಮಾನಗಳನ್ನು ಪಡೆದಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಪ್ರದರ್ಶನಗಳನ್ನು ಕೂಡ ಕಂಡಿದೆ.

ಗಾಂಧಿವಾದವನ್ನು ಪ್ರವಹಿಸುವಂತಹ ಚಿತ್ರ ಗಾಂಧಿವಾದವನ್ನು Transformation ಮಾಡುವ ಚಿತ್ರವಿದು". ಎಂದು ನಾನು ಗಾಂಧಿ ಚಿತ್ರದ ಸಾಹಿತ್ಯ ಮತ್ತು ಸಂಭಾಷಣೆಯನ್ನು ಬರೆದ ಡಾ॥ ರಾಜಪ್ಪ ದಳವಾಯಿಯವರು ಅಭಿಪ್ರಾಯ ಪಡುತ್ತಾರೆ.

ಅನುಬಂಧ-೪

'ನಾನು ಗಾಂಧಿ' ಸಿನಿಮಾದ ಕೆಲವು ಚಿತ್ರಗಳು

ಚಿತ್ರ-೧



ಚಿತ್ರ-೨



ಚಿತ್ರ-೩



ಚಿತ್ರ-೪



ಚಿತ್ರ-೫



ಚಿತ್ರ-೬



ಚಿತ್ರ-೭




ಚಿತ್ರ-೮



ಚಿತ್ರ-೯



ಚಿತ್ರ-೧೦



ಚಿತ್ರ-೧೧



ಚಿತ್ರ-೧೨







ಚಿತ್ರ-೧೩



ಚಿತ್ರ-೧೪



ಚಿತ್ರ-೧೫



ಗ್ರಂಥಋಣ

- 'ಗಾಂಧಿ' ಮೂಲಕತೆ ಡಾ॥ ಬೆಸಗರಹಳ್ಳಿ ರಾಮಣ್ಣ.
- 'ನಾನು ಗಾಂಧಿ' ಚಿತ್ರಕತೆಯ ಅಪ್ರಕಟಿತ ಹಸ್ತ ಪ್ರತಿ (Cinema Script)– ಡಾ.ರಾಜಪ್ಪ ದಳವಾಯಿ.
- ಸಿನಿಮಾ ಕಲೆ–ನೆಲೆ–ಸಂಪಾದಕರು, ಗಿರೀಶ್ ಕಾಸರವಳ್ಳಿ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು. ಪ್ರಥಮ ಮುದ್ರಣ–1983.
- ಸಿನಿಮಾ ಒಂದು ಜನಪದಕಲೆ –ಬರಗೂರು ರಾಮಚಂದ್ರಪ್ಪ–ಅಂಕಿತ ಪುಸ್ತಕ ಪ್ರಕಾಶನ ಮತ್ತು ಮಾರಾಟಗಾರರು. ಬೆಂಗಳೂರು ಮೊದಲ ಮುದ್ರಣ–2007.
- ಸಿನಿಮಾ ಮತ್ತು ಪ್ರೇಕ್ಷಕ – ಅಬ್ದುಲ್ ರೆಹಮಾನ್ ಪಾಷ–ನವಕರ್ನಾಟಕ, ಬೆಂಗಳೂರು. ಪ್ರಕಾಶನ ಪ್ರಥಮ ಮುದ್ರಣ ಜುಲೈ–1987.
- ಸಾಕ್ಷಿ–24–(ಸಂಪಾದಕ) ಗೋಪಾಲಕೃಷ್ಣ ಅಡಿಗ–ವಾರ್ತಾ ಮತ್ತು ಪ್ರಚಾರ ಇಲಾಖೆ ನಿರ್ದೇಶಕರಿಂದ ಪ್ರಕಟಿತ ವರ್ಷ ಸಂಚಿಕೆ, ಬೆಂಗಳೂರು. ಜುಲೈ–1974.
- ಕನ್ನಡ ಸಿನಿಮಾ ಮತ್ತು ಸಾಹಿತ್ಯ – ಬರಗೂರು ರಾಮಚಂದ್ರಪ್ಪ, ಅಂಕಿತ ಪುಸ್ತಕ ಪ್ರಕಾಶಕರು ಮತ್ತು ಮಾರಾಟಗಾರರು ಬೆಂಗಳೂರು.
- ಸಿನಿಮಾ ಮತ್ತು ಯಂತ್ರ ಭಾಷೆ–ಕೆ.ವಿ.ಸುಬ್ಬಣ್ಣ ಮತ್ತು ಅಕ್ಷರ–ಅಕ್ಷರ ಪ್ರಕಾಶನ, ಹೆಗ್ಗೋಡು. ಮುದ್ರಣ ವರ್ಷ–1987.
- ಕನ್ನಡ ಸಿನಿಮಾ ಲೋಕ–ಡಾ॥ ಜಿ.ಪ್ರಶಾಂತನಾಯಕ–ರಚನಾ ಪ್ರಕಾಶನ, ಕುವೆಂಪುನಗರ ಮೈಸೂರು. ಮುದ್ರಣ–2009.
- ಕನ್ನಂಬಾಡಿ– ಬೆಸಗರಹಳ್ಳಿ ರಾಮಣ್ಣನವರ ಸಮಗ್ರ ಕತೆಗಳ ಸಂಕಲನ .
- ಸಿನಿಮಾ ಒಂದು ಭಾಷೆ – ಕೆ.ವಿ. ಸುಬ್ಬಣ್ಣ, ಅಕ್ಷರ ಪ್ರಕಾಶನ ಹೆಗ್ಗೋಡು.
- ಕನ್ನಡ ಸಿನಿಮಾ (ಇತಿಹಾಸದ ಪುಟಗಳಲ್ಲಿ) – ಗಂಗಾಧರ್ ಮೊದಲಿಯಾರ್.
- ಸಿನಿಮಾತು (50 ವರ್ಷಗಳ ಕನ್ನಡ ಚಿತ್ರರಂಗ) – ಡಾ॥ ಬಿ.ವಿ. ವೈಕುಂಠರಾಜು.